ಹರಿಃ ಓಂ
ಓಂ ನಮೋ ನಾರಾಯಣಾಯ
ಶ್ರೀಮದ್ಧನುಮಭೀಮಮಧ್ವಾಂತರ್ಗತ ರಾಮಕೃಷ್ಣವೇದವ್ಯಾಸಾತ್ಮಕ
ಶ್ರೀಲಕ್ಷ್ಮೀಹಯಗ್ರೀವಾಯ ನಮಃ

# ಉಪನಿಷತ್ತುಗಳ ಭಾಷ್ಯಭಾವ

ಅನುವಾದಕರು
ಪಂ।। ಪ್ರೊ।। ಬದರೀನಾಥಾಚಾರ್ಯ ಘೂಳೀ ಎಂ.ಎ.

ಮಾಧವ ಮಧ್ವ ಪ್ರಕಾಶನ
೧೬೪, ೭ನೇ ಅಡ್ಡರಸ್ತೆ, ೯ನೇ ಮುಖ್ಯರಸ್ತೆ
ಬಿ.ಇ.ಎಂ.ಎಲ್. ಬಡಾವಣೆ, ರಾಜರಾಜೇಶ್ವರೀನಗರ
ಬೆಂಗಳೂರು – ೫೬೦ ೦೯೮

UPANISHATTUGALA BHASHYA BHAVA of Eshavasya, Kena, Kata, Prashna & Mandukopanishats, Compiled, Edited and Translated by Prof. Badarinathacharya Ghooli M.A., Retired Professor and Published by Madhava Madhwa Prakashana No. 164, "Soudamini" 7th Cross, 9th Main, BEML Layout, Rajarajeshwarinagar, Bangalore-560 089 Phone : 080-28602191

First Edition : Feb. 2009

© Prof. Badarinathachar Ghooli

DTP By :
**Sri Raghavendra Enterprises**
Banashankari I Stage,
Bangalore-560 050
Phone 080-22421294

। ಹರಿಃ ಓಂ ।

**ಉಪನಿಷತ್ತುಗಳ ಭಾಷ್ಯಭಾವ**

# ಪ್ರಸ್ತಾವನೆ

ಈವರೆಗೆ ಪ್ರಸ್ಥಾನತ್ರಯಗಳೆಂದು ಪ್ರಸಿದ್ಧವಾದ ಮೊದಲನೆಯದಾದ ಸೂತ್ರಪ್ರಸ್ಥಾನ (ಬ್ರಹ್ಮಸೂತ್ರಗಳಿಗೆ ಭಾಷ್ಯಗಳನ್ನು ರಚಿಸಿ) ಮುಂದೆ ಎರಡನೆಯದಾದ ಉಪನಿಷತ್ ಪ್ರಸ್ಥಾನ (ಹತ್ತು ಉಪನಿಷತ್ತುಗಳಿಗೆ ಭಾಷ್ಯವನ್ನು ರಚಿಸಿದರು.) ಇದಾದ ನಂತರ ಮೂರನೆಯದಾಗಿ ಗೀತಾಪ್ರಸ್ಥಾನಕ್ಕೂ ಶ್ರೀಮದಾನಂದತೀರ್ಥರು ಭಾಷ್ಯವನ್ನು ರಚಿಸಿದರು.

## ಉಪನಿಷತ್ ಪ್ರಸ್ಥಾನ

ವೇದಗಳು ಅಪೌರುಷೇಯವು, ಅನಾದಿ ನಿತ್ಯವು ಮತ್ತು ಸ್ವತಃ ಪ್ರಮಾಣವು ಎಂಬುದನ್ನು ಎಲ್ಲಾ ವೇದಾಂತಿಗಳು ಸಮ್ಮತಿಸಿರುತ್ತಾರೆ. ಇವುಗಳನ್ನು ಆಗಮವೆಂದೇ ಕರೆಯಲ್ಪಟ್ಟಿದೆ. ಜಗತ್ತಿನಲ್ಲಿ ಧರ್ಮ, ಅಧರ್ಮ, ಸ್ವರ್ಗ, ನರಕ, ಭಗವಂತ ಇತ್ಯಾದಿ ಅತೀಂದ್ರಿಯವಾದ ವಿಷಯಜ್ಞಾನ ಆಗಮಗಳಿಂದಲೇ ಆಗಬೇಕು. ಪ್ರತ್ಯಕ್ಷ ಮತ್ತು ಅನುಮಾನ ಯಥಾರ್ಥ ಜ್ಞಾನವನ್ನು ಹುಟ್ಟಿಸಲು ಅಸಮರ್ಥಗಳಾಗಿವೆ. **"ನಾ ವೇದವಿನ್ನನುತೇದಂ"** ಎಂಬ ವೇದವಾಕ್ಯದಿಂದ ಭಗವಂತನು ವೇದೈಕ್ಯ ಗಮ್ಯನೆಂದು ಸ್ಪಷ್ಟವಾಗಿ ತಿಳಿಸುತ್ತದೆ.

ವೇದಗಳು ಶಬ್ದಗಳ ರಾಶಿ, ವಾಕ್ಯ ಸಮೂಹಗಳು, ಪದ ವರ್ಣಗಳಿಂದ ಕೂಡಿದೆ. ಇವು ನಿತ್ಯವು ಹಾಗೂ ಸರ್ವವ್ಯಾಪ್ತಗಳೂ ಆಗಿರುತ್ತೆ.

ವೇದಗಳಲ್ಲಿ ಜ್ಞಾನಕಾಂಡ, ಕರ್ಮಕಾಂಡ ಎಂದು ಎರಡು ಭಾಗಗಳಿವೆ ಎಂದು ಕೆಲವರು ಹೇಳಿರುತ್ತಾರೆ. ಜ್ಞಾನಕಾಂಡದಲ್ಲಿ ಬ್ರಹ್ಮವಿದ್ಯೆ ಮುಕ್ತಿ ಮಾರ್ಗವನ್ನು ಬೋಧಿಸುತ್ತದೆ. ಕರ್ಮಕಾಂಡದಲ್ಲಿ ಯಜ್ಞ, ಯಾಗ, ದೇವತೆಗಳು ಸ್ವರ್ಗವೇ ಫಲವೆಂದು ತಿಳಿಸುತ್ತದೆ. ಈ ಕಾರಣದಿಂದ ಜ್ಞಾನಕಾಂಡ ಕರ್ಮಕಾಂಡಕ್ಕಿಂತ ಉತ್ತಮವು ಎಂದು ಹೇಳುವರು. ಆದರೆ ವೇದಗಳಲ್ಲಿ ಎಲ್ಲವೂ ಪ್ರಮಾಣವೇ ಹೊರತು ಒಂದು ಭಾಗಕ್ಕಿಂತ ಇನ್ನೊಂದು ಭಾಗ ಶ್ರೇಷ್ಠವೆಂದು ಎಲ್ಲಿಯೂ ಹೇಳಿಲ್ಲ ಎಂದು ಶ್ರೀಮದಾಚಾರ್ಯರು ತಿಳಿಸಿರುತ್ತಾರೆ.

**ವೇದೇ ರಾಮಾಯಣೇಚೈವ ಪುರಾಣೇ ಭಾರತೇ ತಥಾ ।**
**ಆದೌ ಅಂತ್ಯೇ ಚ ಮಧ್ಯೇ ಚ ವಿಷ್ಣುಸರ್ವತ್ರ ಗೀಯತೇ ॥**

ವೇದಗಳಲ್ಲಿ ಶ್ರೀಹರಿಯೇ ಎಲ್ಲೆಡೆಯಲ್ಲಿ ಮುಖ್ಯ ಪ್ರತಿಪಾದ್ಯನೆಂದು ಸಮರ್ಥಿಸುತ್ತಾರೆ.

ಎಲ್ಲಾ ವೇದಗಳಲ್ಲಿ ಮಂತ್ರ (ಸಂಹಿತಾ) ಬ್ರಾಹ್ಮಣ ಉಪನಿಷತ್ತು ಎಂದು ಮೂರು ವಿಧ. ಉಪನಿಷತ್ತು ವೇದ ಸಾಹಿತ್ಯದ ಅವಿಭಾಜ್ಯ ಅಂಗ.

ವೇದಗಳಲ್ಲಿ (೧) ಅಧಿದೈವ (೨) ಅಧಿಯಜ್ಞ ಮತ್ತು (೩) ಆಧ್ಯಾತ್ಮಗಳು. ಅವುಗಳಲ್ಲಿ ಮೊದಲನೆಯದು ಮಂತ್ರಭಾಗವು. ಎರಡನೆಯದು ಬ್ರಾಹ್ಮಣವು. ಮೂರನೆಯದು ಉಪನಿಷತ್ತುಗಳೆಂಬ ಆಧ್ಯಾತ್ಮವೆನಿಸಿರುತ್ತವೆಯೇ ಹೊರತು ಉಚ್ಛ ನೀಚವೆಂದು ಸರ್ವಥಾ ಇರುವುದಿಲ್ಲ. ಅವುಗಳ ಅಧ್ಯಯನದಿಂದ ಜೀವರಿಗೆ ಒದಗಬಹುದಾದ ಲಾಭವನ್ನು ತಿಳಿಸುವುದಕ್ಕಾಗಿ ಪ್ರವೃತ್ತವಾಗಿವೆ. ಪರಮ ಪುರುಷಾರ್ಥ ರೂಪವಾದ ಮೋಕ್ಷವೇ ಮುಖ್ಯ ಹೇತುವಾಗಿರುವುದರಿಂದ ಉಪನಿಷತ್ತುಗಳು ವಿಶೇಷತಃ ಅಧ್ಯಯನಕ್ಕೆ ಯೋಗ್ಯವು. ಅಧಿಕಾರಿಗಳು ಇವುಗಳ ವ್ಯಾಸಂಗವನ್ನು ಮಾಡಬೇಕೆಂದು ಸ್ಕಾಂದಪುರಾಣದಲ್ಲಿ ಮುಕ್ತವಾಗಿದೆ. ಹೀಗೆ ಸಂಹಿತೆ, ಬ್ರಾಹ್ಮಣ ಉಪನಿಷತ್ತುಗಳು ವೇದಭಾಗವೇ ಆಗಿರುತ್ತದೆಂದು ತಿಳಿಸಿ, ಬಾದರಾಯಣರು ಸೂತ್ರಗಳ ರಚನಾ ಸಮಯದಲ್ಲಿ ಉಪನಿಷತ್ತುಗಳನ್ನು ಶೃತಿಗಳೆಂದೇ ವ್ಯಕ್ತಪಡಿಸಿರುತ್ತಾರೆ.

**ಉಪನಿಷತ್ತುಗಳು :** ಪ್ರಸ್ತುತ ಉಪನಿಷತ್ತೆಂದರೆ ರಹಸ್ಯವಾದ ಉಪದೇಶ ಎಂದರ್ಥ. ವೇದಗಳಲ್ಲಿ ಸಂಹಿತೆ (ಮಂತ್ರಭಾಗ), ಬ್ರಾಹ್ಮಣ, ಅರಣ್ಯಕಗಳೆಂದು ಮೂರು ವಿಧ.

**ವಿಶೇಷತಃ** ಉಪನಿಷತ್ತುಗಳು ಅರಣ್ಯಕದಲ್ಲಿ ಬೃಹದಾರಣ್ಯಕವು ಶುಕ್ಲ ಯಜುರ್ವೇದದ (ಶತಪಥ) ಬ್ರಾಹ್ಮಣದಲ್ಲಿ ಅಂತಿಮಾಧ್ಯಯದಲ್ಲಿದೆ. ಈಶಾವಾಸ್ಯ ಉಪನಿಷತ್ತು ಮಾತ್ರ ಶುಕ್ಲ ಯಜುರ್ವೇದದ ಮಂತ್ರಭಾಗದಲ್ಲಿ ನಲವತ್ತನೇ ಅಧ್ಯಾಯದಲ್ಲಿದೆ. ಈ ರೀತಿ ಉಪನಿಷತ್ತುಗಳು ಅನೇಕ.

**ದಶೋಪನಿಷದೋ ದೇವೀಃ ದೇವಾ ಇವ ಸಮೀಪ್ಸಿತಾಃ ।**
**ಯುಕ್ತಾಃ ಪ್ರಸಾದಯಂತ್ಯರ್ಥಾ ಏಷು ಭಾಷ್ಯಾಲಯೇಷ್ವಲಮ್ ॥**
(ಸು.ಮ.ವಿ. ಸರ್ಗ–೧೫ ಶ್ಲೋ. ೭೪)

ಇವುಗಳಲ್ಲಿ ಹತ್ತು ಅಧಿಕ ಪ್ರಸಿದ್ಧವಾದವುಗಳು (ಹನ್ನೆರಡು ಎಂದು ಕೆಲವರ ಅಭಿಪ್ರಾಯ). ಈಶ, ಕೇನ, ಕಾಠಕ, ಬೃಹದಾರಣ್ಯಕ, ತೈತ್ತರೀಯ, ಛಾಂದೋಗ್ಯ, ಷಟ್‌ಪ್ರಶ್ನ, ಮಾಂಡೂಕ, ಅಥರ್ವಣ, ಐತ್ತರೇಯವೆಂದು ದಶೋಪನಿಷತ್ತುಗಳು.

ಶ್ರೀಶಂಕರಾಚಾರ್ಯರು ಅದ್ವೈತ ಸಿದ್ಧಾಂತಕ್ಕನುಗುಣವಾಗಿ ಭಾಷ್ಯ ಬರೆದಿರುತ್ತಾರೆ. ಶ್ರೀ ರಾಮಾನುಜಾಚಾರ್ಯರು ನೇರವಾಗಿ ಯಾವ ಉಪನಿಷತ್ತಿಗೂ ಭಾಷ್ಯ ಬರೆಯದೇ



ಇದ್ದರೂ **''ವೇದಾಂತಸಂಗ್ರಹ''** ಎನ್ನುವ ಕೃತಿಯಲ್ಲಿ ಉಪನಿಷತ್ತುಗಳ ಸಾರವನ್ನು ತಿಳಿಸಿದ್ದಾರೆ. ಶ್ರೀಮದಾನಂದತೀರ್ಥ ಭಗವತ್ಪಾದರು ಮೇಲಿನ ಅದ್ವೈತ, ವಿಶಿಷ್ಟಾದ್ವೈತ ಅರ್ಥಗಳನ್ನು ಖಂಡಿಸಿ ಶ್ರೀಮನ್ನಾರಾಯಣನೇ ಸರ್ವೋತ್ತಮನೆಂದೂ ಜೀವೇಶ್ವರ ಭೇದವು ಶೃತಿಗಳಲ್ಲಿ ಉಕ್ತವಾಗಿದೆ. ಇತ್ಯಾದಿ ವಿಷಯಗಳನ್ನು ಸತ್ಪ್ರಮಾಣವಾಗಿ ಬೋಧಿಸಿರುತ್ತಾರೆ.

ಆಚಾರ್ಯ ಶ್ರೀಮಧ್ವರ ಭಾಷ್ಯವು ಇತರೆ ಮತಾಚಾರ್ಯರ ಭಾಷ್ಯಕ್ಕೂ ತುಂಬಾ ವ್ಯತ್ಯಾಸ ಮತ್ತು ವೈಶಿಷ್ಟ್ಯವಾಗಿರುತ್ತೆ.

## ಶ್ರೀಮನ್ಮಧ್ವಾಚಾರ್ಯರ ಭಾಷ್ಯ ರಚನಾ ಕ್ರಮ – ವೈಶಿಷ್ಟ್ಯತೆ

ಶ್ರೀಮದಾಚಾರ್ಯರು ತಿಳಿಸುವ ಅರ್ಥವೆಲ್ಲವೂ ಸಪ್ರಮಾಣಿಕವಾಗಿದ್ದು ತಾವು ವಿಶದ ಪಡಿಸುವ ಅರ್ಥವು ಶಾಸ್ತ್ರಸಮ್ಮತವೇ ಆಗಿರುತ್ತದೆಂದು ಹೇರಳವಾಗಿ ಶೃತಿ ಸ್ಮೃತಿಗಳ ವಾಕ್ಯಗಳಿಂದ ಸಮರ್ಥನೆ ಮಾಡಿ ತಮ್ಮ ವಾಕ್ಯಗಳನ್ನು ಬಹಳ ಕಡಿಮೆ ಉಪಯೋಗಿಸುತ್ತಾರೆ. ಎರಡನೆಯದು ಉಪನಿಷತ್ತುಗಳ ಆಗತಿಕ್ರಮ ಮಂತ್ರದ್ರಷ್ಟಾರರು ಜಗತ್ತಿಗೆ ಹೇಗೆ ಬಂದಿತೆಂದು ತಿಳಿಸುತ್ತಾರೆ.

೧. **''ಉಪನಿತರಾಂ ಸಾದಯತಿ''** ಅಜ್ಞಾನ ನಿವಾರಣೆ ಮಾಡಿ ಪರಬ್ರಹ್ಮನನ್ನು ತಿಳಿಸಿಕೊಡುತ್ತದೆ. (ಹೊಂದುವಂತೆ ಮಾಡುತ್ತದೆ) **''ಸದ್ಲ್ ವಿಶರಣ ಗತ್ಯವಸಾನೇಷು''** ಧಾತು ವ್ಯಾಖ್ಯಾನದ ಪ್ರಕಾರ ಭಗವಂತನನ್ನು ಹೊಂದಿಸಿಕೊಡುವುದು ಯಾವುದೋ ಅದೇ ಉಪನಿಷತ್ – (ಮ॥ಶಾ॥ಸಂ ಪಂಡಿತರತ್ನ ಅಗ್ರಹಾರ ನಾರಾಯಣ ತಂತ್ರಿ)

೨. **''ಉಪ + ನಿತರಾಂ ಸೀದತಿ''** ಹರಿಯ ಗುಣವರ್ಣನೆ ತಿಳಿಸುತ್ತಾ ಅವನ ಅತ್ಯಂತ ಸಮೀಪದಲ್ಲೇ ಸೇರುವಂತೆ ಮಾಡುವುದು.

೩. **''ಉಪ + ಸದ್ಯ + ನಿಶ್ಚಯೇನ ಸಾದಯತಿ''** ಸಂಸಾರಾಖ್ಯ ಭವ ಪಾಶವನ್ನು ಛಿದ್ರಗೊಳಿಸಿ ಭಗವಜ್ಞಾನವನ್ನು ಉಪದೇಶಿಸಿ ಪರಮಾತ್ಮನ ಅಪರೋಕ್ಷ ಆಗುವಂತೆ ಮಾಡುವುದು.

೪. ಪರಮಾತ್ಮನು ಅಗಮ್ಯ ಮಹಿಮಾ ಎಂಬ ತತ್ತ್ವವನ್ನು ಉಪದೇಶಿಸುವುದರಿಂದ **''ಉಪನಿಷತ್''** ಎಂದು ಕರೆಯಬಹುದು.

**ಉಪನಿಷತ್ತುಗಳ ಉಪದೇಶ :** ಬ್ರಹ್ಮಜ್ಞಾನವನ್ನು ಬೋಧಿಸುವುದೇ ಉಪನಿಷತ್ತುಗಳ ಮುಖ್ಯ ಉದ್ದೇಶ. ಒಂದೊಂದು ಉಪನಿಷತ್ತಿನಲ್ಲಿ ಭಗವಂತನ ಗುಣಗಳನ್ನು ಧರ್ಮವನ್ನು ತಿಳಿಸುವ ಕ್ರಮವು ವೈವಿಧ್ಯಪೂರ್ಣವಾಗಿರುತ್ತೆ. ಹೀಗೆ ಒಂದು

ಉಪನಿಷತ್ತಿನಲ್ಲಿ ಒಂದು ತತ್ತ್ವವನ್ನು ಬೋಧಿಸಿದರೆ ಮತ್ತೊಂದರಲ್ಲಿ ಬೇರೆ ತತ್ತ್ವ ಬೋಧನೆ ಇರುತ್ತೆ. ಆದರೆ ವಿರೋಧವಿರುವುದಿಲ್ಲವೆಂದು ತಿಳಿಯಬೇಕು. ಉದಾಹರಣೆಗೆ ಈಶಾವಾಸ್ಯೋಪನಿಷತ್ತಿನ್ನಲ್ಲಿ ಪರಮಾತ್ಮನು ಸರ್ವವ್ಯಾಪಿ, ಅಂತರ್ಯಾಮಿ, ಸರ್ವಜ್ಞನು, ಸೃಷ್ಟಿಸಂಹಾರಕರ್ತ, ಅನಂತ ಗುಣಪೂರ್ಣ ಹೊನ್ನಿನಂತೆ ಪ್ರಕಾಶಿಸುವ ರೂಪವುಳ್ಳವನೆಂದು ತಿಳಿಸಿದರೆ, ತಲವಕಾರದಲ್ಲಿ ಸಕಲ ಇಂದ್ರಿಯ ನಿಯಾಮಕನು, ಇಂದ್ರಿಯಾಭಿಮಾನಿ ದೇವತೆಗಳ ಸ್ವಾಮಿ, ಮುಖ್ಯ ಪ್ರಾಣ ಪ್ರೇರಕ, ಅವನನ್ನು ಸಂಪೂರ್ಣವಾಗಿ ತಿಳಿಯಲು ಶಕ್ಯನಲ್ಲವೆಂಬುದನ್ನು ತಿಳಿಸಿಕೊಡುತ್ತದೆ.

ಮುಂದೆ ಒಂದೊಂದು ಉಪನಿಷತ್ತಿನಲ್ಲಿರುವ ಸಾರಭೂತ ತತ್ತ್ವಗಳ ಸಂಕ್ಷೇಪ ಮಾಡಲಾಗಿದೆ. ಉಪನಿಷತ್ತು ಅಧ್ಯಯನ ಪೂರ್ವದಲ್ಲಿ ದೇವತಾಋಶಿ, ಛಂದಸ್ಸು ತಿಳಿಯುವುದು ಅವಶ್ಯವು. ಆದರೆ ಒಂದು ಎಚ್ಚರದ ಮಾತು. ವೇದಾಂತವಿದ್ಯಾ ಗುರುಮುಖೇನ ಬೋಧಿಸಿಕೊಳ್ಳಬೇಕು. ಶಮದಮಾದಿ ಗುಣಗಳಿಂದಾಗಿ ಉಪದಿಷ್ಟಿತ ತತ್ತ್ವವು ಹೃದಯದಲ್ಲಿ ಸ್ಥಿರವಾಗಿ ದೃಢವಾಗಿ ನಿಲ್ಲಿಸುತ್ತದೆಂದು ತಿಳಿಸಲಾಗಿದೆ. ಅಂತಹ ಅಧಿಕಾರ ಪ್ರಾಪ್ತ್ಯಾ ನಂತರ ಉಪನಿಷತ್ತಿನ ಅಧ್ಯಯನ ಮಾಡಬೇಕು. ಇಷ್ಟು ತಿಳಿಸಿ ಉಪನಿಷತ್ತುಗಳಲ್ಲಿ ಪ್ರಪ್ರಥಮವಾದ ಈಶಾವಾಸ್ಯೋಪನಿಷತ್ತಿನ ಸಾರಸುಧಾವನ್ನು ಎಲ್ಲರೂ ಸವಿಯೋಣ.

ಹರಿಃ ಓಂ.

**ಬದರೀನಾಥಾಚಾರ್ಯ ಘೂಳೀ**



ಹರಿಃ ಓಂ

**ಈಶಾವಾಸ್ಯೋಪನಿಷತ್**

# ಉಪೋದ್ಘಾತ

ಪ್ರಸಿದ್ಧಿ ಹೊಂದಿದ ಹತ್ತು ಉಪನಿಷತ್ತುಗಳಲ್ಲಿ ಸಂಹಿತೆಯು ಮೂಲ ಮಂತ್ರಭಾಗದಲ್ಲಿ ಈ ಈಶಾವಾಸ್ಯೋಪನಿಷತ್ತೆಂದು ಮೂಲ ಮಂತ್ರಭಾಗದಲ್ಲಿ ಸೇರಿದ್ದರಿಂದ **ಯಾಜ್ಞೀಯ ಮಂತ್ರೋಪನಿಷತ್** ಎಂದೂ ಕರೆಯಲಾಗಿದೆ. ಈ ಉಪನಿಷತ್ತಿಗೆ ಯಜ್ಞ ನಾಮಕ ಶ್ರೀಹರಿಯೇ ಪ್ರತಿಪಾದ್ಯನಾದ್ದರಿಂದ ಇದನ್ನು ಯಾಜ್ಞೀಯ ಮಂತ್ರೋಪನಿಷತ್ ಎಂದೂ ಕರೆದದ್ದು ಅನ್ವರ್ಥವಾಗಿರುವುದು.

ಬಾಕೀ ಒಂಭತ್ತು ಉಪನಿಷತ್ತುಗಳ ಪೈಕಿ ಕೆಲವು ಬ್ರಾಹ್ಮಣದಲ್ಲಿ ಇನ್ನೂ ಕೆಲವು ಅರಣ್ಯಕದಲ್ಲಿ ಸೇರಿರುತ್ತವೆ.

**ಆಗತಿಕ್ರಮ :**

ಉಪನಿಷತ್ತಿಗೆ ದ್ರಷ್ಟಾರರು ಯಾರು ? ಹೇಗೆ ಈ ಲೋಕಕ್ಕೆ ಬಂದಿತು ? ಎಂಬುದರ ಅವತಾರಿಕಾ ರೂಪವನ್ನು ಶ್ರೀಮದಾಚಾರ್ಯರು ಹಾಗೂ ಮಂತ್ರಾಲಯ ಪ್ರಭುಗಳು ತಿಳಿಸಿರುತ್ತಾರೆ. **''ಸ್ವಾಯಂಭೂವೋಮನುಃ ಏತೈಃ ಮಂತ್ರೈಃ ಭಗವಂತಂ ಆಕೋತಿಸೂನುಂ ಯಜ್ಞ ನಾಮಾನಂ ವಿಷ್ಣುಂತುಷ್ಟಾವ''**

**ವಿವರಣೆ :** ಸ್ವಾಯಂಭೂವು ಬ್ರಹ್ಮದೇವರ ಮಗನು. ೧೪ ಮನುಗಳಲ್ಲಿ ಹಿರಿಯನೇ ಸ್ವಾಯಂಭೂ ಮನು. ಶತರೂಪಾದೇವಿ ಪತ್ನಿ. ಇವರಲ್ಲಿ ಪ್ರಿಯವ್ರತ, ಉತ್ತಾನಪಾದರೆಂಬ ಪುತ್ರರಾದರು. ಅಲ್ಲದೇ, ಆಕೂತಿ, ದೇವಹೂತಿ, ಪ್ರಸೂತಿ ಎಂಬ ಮೂವರು ಪುತ್ರಿಯರಾದರು.

**ಆಕೂತಿ :** ರುಚಿ ಪ್ರಜೇಶ್ವರನನ್ನು ಲಗ್ನವಾಗಿ ಅವರ ದೀರ್ಘ ತಪೋಬಲ ಪ್ರಭಾವದಿಂದಾಗಿ ಶ್ರೀಹರಿಯ ಯಜ್ಞನಾಮ ಹೊಂದಿ ಅವತರಿಸಿದ.

**ದೇವಹೂತಿ :** ಕರ್ದಮ ಮುನಿಯಲ್ಲಿ ಭಗವಂತ ಕಪಿಲನೆಂದು ಅವತರಿಸಿದ. (ಸಾಂಖ್ಯಶಾಸ್ತ್ರ ಬೋಧಿಸಿದ)

**ಪ್ರಸೂತಿ :** ದಕ್ಷ ಪ್ರಜೇಶ್ವರನನ್ನು ಲಗ್ನವಾಗಿ ದಾಕ್ಷಾಯಣಿ ಎಂಬ ಮಗಳು ರುದ್ರದೇವರ ಪತ್ನಿಯಾದಳು (ಸತೀಗೋವಿ ಎಂಬ ಹೆಸರಿದೆ).

ಆಕೂತಿ ರುಚಿ ಪ್ರಜೇಶ್ವರರಲ್ಲಿ ಯಜ್ಞನಾಮಕ ಭಗವಂತ ಅವತರಿಸಿದ. ಈ ಉಪನಿಷತ್ತು ಯಜ್ಞದೇವರ ಕುರಿತು ತಿಳಿಸಲು ಹೊರಟಿದೆ.

**ಹೆಚ್ಚಿನ ವಿಷಯ :** ಸ್ವಾಯಂಭು ತಪೋಭಂಗ ಮಾಡಲು ಅಸುರರು ಸಂಹರಿಸಲು ಬಂದಾಗ ನಿಶ್ಚಿಂತನಾಗಿ ಮನಸ್ಸು ಚಲಿಸಲಿಲ್ಲ, ಹೆದರಲೂ ಇಲ್ಲ. ಅಂತಹ ಸಮಯದಲ್ಲಿ ಮನುವು ಹೀಗೆ ಯೋಚಿಸಿದ. ಈ ದುಷ್ಟ ಸನ್ನಿವೇಶವನ್ನು ಎದುರಿಸಲು ಆತನಿಗೆ ಮೂರು ಮಾರ್ಗ ಕಾಣಿಸಿತು. (೧) ಅಸುರರಿಗೆ ಶರಣು ಹೋಗಿ ಅವರಂತೆ ನಡೆಯುವುದು. (೨) ಅವರೊಂದಿಗೆ ಯುದ್ಧ ಮಾಡಲು ಸಿದ್ಧನಾಗುವುದು. (೩) ನನ್ನನ್ನು ರಕ್ಷಿಸುವ ಭಗವಂತನಿದ್ದಾಗ ಪರಮಾತ್ಮನಿಗೆ (ಆತ್ಮನಿವೇದನ) ಶರಣಾಗಿ ಸಮಸ್ಯೆ ಪರಿಹಾರ ಮಾಡುತ್ತಾನೆ, ನಾನೇಕೆ ತಲೆ ಬಿಸಿಮಾಡಿಕೊಳ್ಳಬೇಕು ಎಂದು ಯೋಚಿಸಿ ರಾಜಮಾರ್ಗವೆನಿಸಿದ ಸರ್ವಸಮರ್ಪಣೆ ಸಾತ್ವಿಕೋಪಾಯವೆಂದು ವಿಚಲಿತನಾಗಲಿಲ್ಲ. ಹೀಗೆ ಪರಮಾತ್ಮನಲ್ಲಿ ದೃಢ ವಿಶ್ವಾಸವಿದ್ದಿತು.

ಈಶಾವಾಸ್ಯ ಮಂತ್ರಗಳಿಂದ ತನ್ನ ಮಗಳಾದ ಆಕೂತಿಯು ಗರ್ಭಧಾರಣೆ ಮಾಡಿದ್ದಳು. ತನ್ನ ಉದರದಲ್ಲಿ ಅಷ್ಟೈಶ್ವರ್ಯ ಸಂಪನ್ನನಾದ ಶ್ರೀಹರಿ ಯಜ್ಞನಾಮಕನಾಗಿರುವಾಗ ಮನು ತಪಸ್ಸು ಮಾಡಿ ಪರಮಾತ್ಮನನ್ನು ಸ್ತೋತ್ರಮಾಡುತ್ತಿದ್ದನು.

**ವಿಶೇಷಾಂಶ :** ಸಂದರ್ಭ ಹೀಗಿದೆ. ಸ್ವಾಯಂಭೂಮನು ತಪಸ್ಸನ್ನು ಆಚರಿಸುತ್ತಿದ್ದ. ಭಗವಂತನನ್ನು ಅನನ್ಯ ಭಕ್ತಿಯಿಂದ ಸ್ತೋತ್ರ ಮಾಡಿದನು. ಇಂತಹ ಶ್ರೇಷ್ಠವಾದ ತಪಸ್ಸನ್ನು ತಾಳಲಾರದೆ ರಾಕ್ಷಸರಿಗೆ ಸಂಕಟವಾಯಿತು. ಈ ರಾಕ್ಷಸರಾದರೋ ರುದ್ರ ದೇವರನ್ನು ಉಗ್ರವಾದ ತಪಸ್ಸಿನಿಂದ ಮೆಚ್ಚಿಸಿ ತಮಗೆ ಮರಣವೇ ಬಾರದಂಥ ವರವನ್ನು ಪಡೆದಿದ್ದರು. ಹೀಗೆ ವರ ಪಡೆದ ರಾಕ್ಷಸರು ಗರ್ವಿತರಾಗಿ ತಪಸ್ಸನ್ನಾಚರಿಸುತ್ತಿದ್ದ ಮನುವನ್ನು ಸಂಹರಿಸಿ ತಿನ್ನಬೇಕೆಂದು ಬಂದರು. ಆಗ ಮನುವು ಇದನ್ನರಿತು **"ಈಶಾವಾಸ್ಯಾದಿ"** ಮಂತ್ರಗಳಿಂದ ಯಜ್ಞನಾಮಕ ಹರಿಯನ್ನು (ಈ ಉಪನಿಷತ್ತಿನ ಮಂತ್ರಗಳಿಂದ) ಸ್ತೋತ್ರ ಮಾಡಿದನು. ಯಜ್ಞನಾಮಕ ಪರಮಾತ್ಮನು ಆಕೂತಿ ಉದರದಲ್ಲಿ ಇದ್ದು ಸ್ತೋತ್ರವನ್ನು ಕೇಳಿ ತಾನು ಅವತರಿಸಿ ಆ ಅವಧ್ಯರಾದ ದೈತ್ಯರನ್ನು ಸಂಹರಿಸಿದನು.

**ಭಾವ :** ಶ್ರೀಮದಾಚಾರ್ಯರು ವಿವರಿಸುತ್ತಾ ಬ್ರಹ್ಮಾಂಡ ಪುರಾಣದಲ್ಲಿ ಆಖ್ಯಾಯಿಕವಾಗಿ ತಿಳಿಸಿರುವುದನ್ನು ಇಲ್ಲಿ ಉಲ್ಲೇಖಿಸುತ್ತಾರೆ. **"ಸ್ವಾಯಂಭುವೋ ಮನುಃ ಸ್ವದೌಹಿತ್ರಂ**



**ವಿಷ್ಣುಂ ಯಜ್ಞಾಭಿದಂ ಮನುಃ। ಈಶಾವಾಸ್ಯಾದಿಭಿಃ ಮಂತ್ರೈಃ ತುಷ್ಟಾವ ಅವಹಿತಾತ್ಮನಾ। ರಕ್ಷೋಭಿರುಗ್ರೈಃ ಸಂಪ್ರಾಪ್ತಃ ಖಾದಿತುಂ ಮೋಚಿತಸ್ತದಾ। ಸ್ತೋತ್ರಂ ಶ್ರುತ್ವೈವ ಯಜ್ಞೇನ ತಾನ್ ಹತ್ವಾಽಅವಧ್ಯತಾಂ ಗತಾನ್ ಪ್ರಾಹಾದ್ದಿ ಭಗವಾನ್ ತೇಷಾಂ ಅವಧ್ಯತ್ವಂ ಹರಿಃ ಪ್ರಭುಃ। ತೈರ್ವಧ್ಯತ್ವಂ ತಥಾನೇಷಾಂ ಅತಃ ಕೋಽನ್ಯೋ ಹರಿಃ ಪ್ರಭುಃ"**

**ಭಾಗವತೇಚ ಅಯಮೇವ ಅರ್ಥಃ ಉಕ್ತಃ** ಈ ಆಖ್ಯಾ ಭಾಗವತ ಅಷ್ಟಮಸ್ಕಂದ ಆದಿ ಭಾಗದಲ್ಲಿ ತಿಳಿಸಲಾಗಿದೆ. **ಆಕೂತ್ಯಾಂ ದೇವಹೂತ್ಯಾಂ ಚ ದುಹಿತ್ರೌಸ್ತಸ್ಯ ವೈಮನೋಃ ಧರ್ಮಜ್ಞಾನೋಪದೇಶಾರ್ಥಂ ಭಗವಾನ್ ಪುತ್ರತಾಂ ಗತಃ (೮.೧.೮)**

**ಮನುರ್ುವಾಚ**

**ಏನ ಚೇತಯತೇ ವಿಶ್ವಂ ವಿಶ್ವಂ ಚೇತಯತೇ ನಯಮ್ ।**
**ಯೋಜಾಗರ್ತಿ ಶಯಾನೇಽಸ್ಮಿನ್ನಾಯಂತಂ ವೇದವೇದ ಸಹಃ॥ ॥೯॥**

**ಆತ್ಮಾವಾಸ್ಯಮಿದಂ ವಿಶ್ವಂ ಯತ್ಕಿಂಚಿ ಜಗತ್ಯಾಂ ಜಗತ್ ।**
**ತೇನತ್ಯಕ್ತೇನ ಭುಂಜೀಥಾ ಮಾಗೃದಃ ಕಸ್ಯ ಸ್ವಿದ್ಧನಂ ॥ ॥೧೦॥**

**ಯಂ ನವ ಪಶ್ಯತಿ ಪಶ್ಯಂತಿ ಚಕ್ಷುರ್ಯಸ್ಯನರೀಷ್ಯತಿ ।**
**ತಂಭೂತ ನಿಲಯಂ ದೇವಂ ಸುಪರ್ಣ ಸುಪಥಾವತಿ ॥ ॥೧೧॥**

**ನ ಯಸ್ಮಾದ್ಯಂತೌ ಮಧ್ಯಂ ಚ ಸ್ವಃ ಪರೋನಾಂತರಂ ಬಹಿಃ ।**
**ವಿಶ್ವಸ್ಯಾಮಾನಿ ಯದ್ ಯಸ್ಮಾದ್ ವಿಶ್ವಂ ಚ ತದೃತಂ ಮಹತ್॥ ॥೧೨॥**

ಹೀಗೆ ಬ್ರಹ್ಮಾಂಡ ಪುರಾಣ ಹಾಗೂ ಶ್ರೀಮದ್ಭಾಗವತದಲ್ಲಿರುವುದೆಂದು ಲೋಕದಲ್ಲಿ ಬಂದಿತು ಎಂಬುದನ್ನು ತಿಳಿಸಿರುತ್ತಾರೆ.

ಈ ಉಪನಿಷತ್ತು ಸೂರ್ಯಾಂತರ್ಗತ ಶ್ರೀಮನ್ನಾರಾಯಣನು ಕುದುರೆ ರೂಪದಿಂದ ತಪಸ್ಸನ್ನಾಚರಿಸುತ್ತಿದ್ದ ಯಾಜ್ಞವಲ್ಕ್ಯರಿಗೆ ಪುನಃ ಉಪದೇಶ ಮಾಡಿದನೆಂದು ತಿಳಿದುಬರುತ್ತದೆ. ಆ ಕಥೆಯ ಸಂದರ್ಭವು ಹೀಗಿರುತ್ತದೆ.

ಎಲ್ಲಾ ಮಹಾಋಷಿಗಳು ಒಂದು ಸಲ ಮೇರುಪರ್ವತದಲ್ಲಿ ಆಸೀನರಾಗಿದ್ದರು. ಮುಂದೆ ಇನ್ನೊಮ್ಮೆ ಸಭೆ ಸೇರುವುದಾಗಿ ನಿರ್ಣಯಿಸಿದರು. ನಿರ್ಣಯ ಪ್ರಕಾರ ಆ ಸಭೆಗೆ ಯಾವ ಮುನಿ ಉಪಸ್ಥಿತರಾಗುವುದಿಲ್ಲವೋ ಅಂತಹವರಿಗೆ ಬ್ರಹ್ಮಹತ್ಯಾದೋಷವು ಬರುವುದು ಎಂದು ನಿರ್ಧರಿಸಿದರು. ಅಂತೆಯೇ ಮತ್ತೊಮ್ಮೆ ಸಭೆ ಸೇರಿತು. ಎಲ್ಲರೂ ಬಂದಿದ್ದರು. ಆದರೆ ವೇದವ್ಯಾಸರ ಶಿಷ್ಯರಾದ ವೈಶಂಪಾಯನರು (ಯಜುರ್ವೇದ

ದ್ರಷ್ಟಾರರು) ಯಾವುದೋ ನಿಮಿತ್ತ ಕಾರಣದಿಂದ ಸ್ವಲ್ಪ ತಡವಾಗಿಯೇ ಬಂದರು. ಅಷ್ಟು ಹೊತ್ತಿಗೆ ಸಭೆ ಶಾಂತಿ ಮಂತ್ರಗಳಿಂದ ಆರಂಭವಾಗಿ ಹೋಗಿತ್ತು. ತಡವಾಗಿ ಬಂದ ವೈಶಂಪಾಯನರಿಗೆ ಪ್ರವೇಶಿಸಲು ತಡೆದರು. ಇದರಿಂದಾಗಿ ವೈಶಂಪಾಯನರು ಬ್ರಹ್ಮಹತ್ಯಾದೋಷಕ್ಕೆ ಗುರಿಯಾಗಬೇಕಾಯಿತು. ದುಃಖಿತರಾಗಿ ಹಿಂತಿರುಗಿ ಬರುವಾಗ ಯಮುನಾ ನದಿ ತೀರದಲ್ಲಿದ್ದ ತಮ್ಮ ಸಹೋದರಿ ಪ್ರಸವಿಸಿದ್ದ ಗಂಡುಮಗುವನ್ನು ಕುಟೀರದಲ್ಲಿ ಮಲಗಿಸಿದ್ದಳು. ಪರ್ಣ ಕುಟೀರದಲ್ಲಿ ಹೆಚ್ಚೇನೂ ಬೆಳಕು ಇದ್ದಿಲ್ಲ. ಅಲ್ಲದೇ ಉರಿಬಿಸಿಲಿನಿಂದ ಬಂದ ವೈಶಂಪಾಯನರಿಗೆ ಕಾಣದೇ, ಮಲಗಿರುವ ಶಿಶುವನ್ನು ಕಾಲಿನಿಂದ ಸರಿಸಿದರು. ಈ ಕಾರಣದಿಂದ ಮಗು ಮೃತವಾಯಿತು. ತಂಗಿಗೆ ಈ ವಿಷಯ ತಿಳಿದು ಗೋಳಾಡಿದಳು. ಋಷಿಗಳಿಗೆ ಅತೀವ ವೇದನೆಯಾಯಿತಲ್ಲದೆ ತಮಗೆ ಶಿಶುಹತ್ಯಾದೋಷವು ಲಭಿಸಿತು. ತುಂಬಾ ಚಿಂತಾಕ್ರಾಂತರಾದರು. ತಮಗೆ ವಿನಾಕಾರಣ ದೋಷದ್ವಯವು ಘಟ್ಟಿಸಿತಲ್ಲಾ ಎಂದು ಖೇದದಿಂದ ಆಶ್ರಮಕ್ಕೆ ಬರುತ್ತಾರೆ. ಬಂದವರು ಅತೀವ ದುಃಖದಿಂದ ಖಿನ್ನ ಮನಸ್ಸುಳ್ಳವರಾಗಿ ಮೌನದಿಂದ ಇರುವುದನ್ನು ಶಿಷ್ಯಂದಿರು ಯೋಚಿಸಿದರು. ತಮ್ಮ ಗುರುಗಳು ಹೀಗೇಕೆ ಇರುತ್ತಾರೆಂದು ಕೇಳೋಣವೆಂದು ಅವರಲ್ಲಿಗೆ ಬಂದು ವಿನಯದಿಂದ ಕೇಳುತ್ತಾರೆ. ಗುರುವರ್ಯಾ ಹೀಗೇಕೆ ಚಿಂತಿಸುತ್ತಿರುವಿರಿ. ನಿಮ್ಮ ಈ ರೀತಿಯ ಮೌನಕ್ಕೆ ಕಾರಣವೇನೆಂದು ದಯಮಾಡಿ ತಿಳಿಸಿರಿ ಎಂದು ಶಿಷ್ಯಂದಿರು ಕೇಳಿಕೊಂಡರು. ಆಗ ವೈಶಂಪಾಯನರು ನಡೆದ ವೃತ್ತಾಂತವನ್ನು ತಿಳಿಸಲಾಗಿ ಶಿಷ್ಯಂದಿರು ತಮ್ಮ ಗುರುಗಳಿಗೆ ಬಂದ ದೋಷದ್ವಯ ನಿವಾರಣೆಗಾಗಿ ಗುರುಗಳಿಂದ ಆಜ್ಞಪ್ತರಾಗಿ ತಪಸ್ಸನ್ನೂ, ಹೋಮಾದಿಗಳನ್ನೂ, ಮಂತ್ರ ಪಠನಾದಿಗಳನ್ನೂ ಆರಂಭಿಸುತ್ತಾರೆ.

ಆ ಸಮಯದಲ್ಲಿ ಯಾಜ್ಞವಲ್ಕ್ಯರು ಹೊರಗೆ ಹೋಗಿದ್ದವರು ಆಶ್ರಮಕ್ಕೆ ಬರುತ್ತಾರೆ. ಯಾಜ್ಞವಲ್ಕ್ಯರಿಗೆ ಬಾಕೀ ಶಿಷ್ಯರಿಗಿಂತ ಅಲೌಕಿಕ ಪ್ರತಿಭೆ ಇದ್ದದ್ದು ಗುರುಗಳಿಗೆ ತಿಳಿದಿತ್ತು. ಜ್ಞಾನಿಗಳೂ, ಮಹಾತಪಸ್ವಿಗಳೂ ಆದ ಯಾಜ್ಞವಲ್ಕ್ಯರು ಹಿಂತಿರುಗಿ ಬಂದಾಗ ತಮ್ಮ ಸಹಪಾಠಿಗಳು ಆಚರಿಸುತ್ತಿದ್ದ ಕಾರ್ಯವನ್ನು ನೋಡಿ ಏಕೆ ಇಷ್ಟೆಲ್ಲಾ ಸಂಭಾರವೆಂದು ಕೇಳಿದಾಗ ವಿಷಯ ತಿಳಿಯಿತು. ಗುರುಗಳಿಗೆ ಬಂದ ದೋಷಗಳನ್ನು ನಾನೊಬ್ಬನೇ ಈ ಕಾರ್ಯವನ್ನು ಸಮರ್ಥವಾಗಿ ನಿರ್ವಹಿಸಬಲ್ಲೆ ಎಂದು ಗುರುಗಳಲ್ಲಿಗೆ ಬಂದು ತಮ್ಮ ಸಾಮರ್ಥ್ಯವನ್ನು ತಿಳಿಸಿ ಸಹಪಾಠಿಗಳನ್ನು ತಿರಸ್ಕರಿಸುವ ಧ್ವನಿಯಲ್ಲಿ **"ಯಾಜ್ಞವಲ್ಕ್ಯಶ್ಚ ತಚ್ಛಿಷ್ಯಃ ಆಹಾಹೋ ಭಗವಾನ್ಕಿಯತ್। ಚರಿತನಾಲ್ಪಸಾರಾಣಾಂ ಚರಿಷ್ಯೇಹಂ ಸುದುಶ್ಚರಮ್ ।"** (ಹೀಗೆ ವಿಷ್ಣುಪುರಾಣದಲ್ಲಿರುವುದು.)

**ಅರ್ಥ :** ಗುರುಗಳೇ ಈ ಮಹತ್ಕಾರ್ಯ ಅಲ್ಪರಾದವರಿಂದ ಏನಾಗುತ್ತದೆ. ತಾವು ನನಗೆ ಆಜ್ಞಾಪಿಸಿರಿ. ನಾನೊಬ್ಬನೇ ಈ ಕಠಿಣ ಕಾರ್ಯವನ್ನು ಪೂರೈಸಲು ಸಮರ್ಥನು ಎಂದು ಸ್ವಲ್ಪ ಅಹಂಕಾರದಿಂದ ಹೇಳಿದರು. **(ಭಾಗವತ ಸ್ಕಂದ ೧೨ ಅಧ್ಯಾಯ ೬ ೬೧-೬೬)**



ವೈಶಂಪಾಯನರಿಗೆ ತಮ್ಮ ಶಿಷ್ಯ ಶ್ರೇಷ್ಠನ ಯೋಗ್ಯತೆ ತಿಳಿದಿತ್ತು. ಅವರು ಬರಲಿ ಅಂತ ದಾರಿ ಕಾಯುತ್ತಿದ್ದರು. ಆದರೆ ಬಂದವರು ಗುರುಗಳಲ್ಲಿ ಹೀಗೆ ಅಹಂಕಾರದ ಮಾತಿನಿಂದ ಬಂದ ದುರ್ಗಂಧವನ್ನು ಕೇಳಿ ಚೀಮಾರಿಮಾಡಿ ತನ್ನ ಸಹಪಾಠಿಗಳನ್ನು ಹೀಯಾಳಿಸುವ ದುರ್ನಾತದಿಂದ ಅಸಹ್ಯಪಟ್ಟರು. ಅವನ ಅವಿನೀತಿಯಿಂದ ಬೇಸತ್ತು ಕುಪಿತರಾದರು. ಆಗ ಹೀಗೆ ಹೇಳಿದರು.

**"ಇತ್ಯುಕ್ತೋ ಗುರುರಪ್ಯಾಹ ಕುಪಿತೋ ಯಾಹ್ಯಲಂತ್ವಯಾ**
**ವಿಪ್ರಾವ ಮಂತಾ ಶಿಷ್ಯೇಣ ಮದಧೀತಂ ತ್ವಯಾಶ್ವಿತಿ"**

ಯಾಜ್ಞವಲ್ಕ್ಯರೇ, ನಿಮ್ಮ ಈ ದುರ್ವಿನಿಯ, ಸೊಕ್ಕು ಬಿಡಿರಿ. ತತ್ರಾಪಿ ನಿಮ್ಮ ಸಹಪಾಠಿಗಳಾದ ಬ್ರಾಹ್ಮಣರನ್ನು ಅವಮಾನಿಸಿ ನಿಂದಿಸುವುದು ಅಯುಕ್ತವಷ್ಟೇ ಅಲ್ಲ ನೀವು ಇಲ್ಲಿಂದ ಹೊರಟು ಹೋಗಿರಿ ಎಂದು ಬಹಿಷ್ಕಾರ ಹಾಕಿದರು. ಅಲ್ಲದೇ ನೀವು ಈವರೆಗೂ ನನ್ನಲ್ಲಿ ಅಭ್ಯಸಿಸಿದ ವಿದ್ಯೆಗೆ ಯೋಗ್ಯರಲ್ಲ. ಆದ್ದರಿಂದ ನನ್ನಿಂದ ಕಲಿತ ವಿದ್ಯೆಯನ್ನು ಇಲ್ಲಿಯೇ ತ್ಯಜಿಸಿ ಹೊರಡಿರಿ ಎಂದು ನಿಷ್ಠುರವಾಗಿ ನುಡಿದರು.

ಇದನ್ನು ಕೇಳಿದ ಯಾಜ್ಞವಲ್ಕ್ಯರಿಗೆ ತಾವು ಮಾಡಿದ ತಪ್ಪಿನ ಅರಿವಾಯಿತು. ಆದರೇನು ಗುರುಗಳಿಂದ ಬಹಿಷ್ಕೃತರಾಗಿದ್ದರು. ಕೂಡಲೇ ತಾವು ಕಲಿತ ವಿದ್ಯೆಯನ್ನು ವಮನ ರೂಪದಿಂದ ತ್ಯಜಿಸಿದರು. ಬ್ರಹ್ಮವಿದ್ಯೆ ಭೂಮಿಯ ಮೇಲೆ ಬಿದ್ದು ಧಗಧಗಿಸಿರುವುದನ್ನು ಇತರ ಶಿಷ್ಯರು ತಿತ್ತಿರಿಪಕ್ಷಿಗಳಾಗಿ ಆ ವಿದ್ಯೆಯನ್ನು ಗ್ರಹಿಸಿದರು. ಆಗಿನಿಂದ ಈ ಯಜುರ್ವೇದದ ಈ ಭಾಗಕ್ಕೆ **ತೈತ್ತರೀಯಸಂಹಿತಾ** ಎಂಬ ನಾಮವು ಬಂದಿತು.  ತಿತ್ತಿರೀಪಕ್ಷಿಗಳಾಗಿ ಸ್ವೀಕರಿಸಿದ್ದರಿಂದ ಇದನ್ನು ಕೃಷ್ಣ ಯಜುರ್ವೇದವೆಂದೂ ಕರೆಯಲಾಗಿದೆ. ಗುರುಗಳಿಂದ ತ್ಯಕ್ತರಾದ ಯಾಜ್ಞವಲ್ಕ್ಯರು ಎಲ್ಲಾ ದಿಕ್ಕುಗಳಲ್ಲಿ ತಿರುಗಾಡಿ ಕೊನೆಗೆ ನೈರುತ್ಯ ದಿಕ್ಕಿನಲ್ಲಿ ಪ್ರಾಯಶ್ಚಿತ್ತಕ್ಕಾಗಿ ಹಾಗೂ ಅಸಮಾನ್ಯ ವಿದ್ಯೆ ಹೊಂದಬೇಕೆಂದು ಸೂರ್ಯಾಂತರ್ಗತ ಶ್ರೀಮನ್ನಾರಾಯಣನನ್ನು ಕುರಿತು ಉಗ್ರ ತಪಸ್ಸನ್ನಾರಂಭಿಸಿದರು. ಶ್ರೀಹರಿ ಇವರ ತಪಸ್ಸಿಗೆ ಸುಪ್ರೀತನಾಗಿ ವಾಜೀ (ಕುದುರೆ) ರೂಪದಿಂದ ಪ್ರತ್ಯಕ್ಷನಾಗಿ ಯಜುರ್ವೇದ ಈ ಭಾಗವನ್ನು ಉಪದೇಶಿಸಿದನು. ಆಗಿನಿಂದ ಈ ಭಾಗಕ್ಕೆ **ಶುಕ್ಲಯಜುರ್ವೇದ** ಅಥವಾ **ವಾಜಸ್ನೇಯ ಸಂಹಿತಾ** ಎಂಬ ಹೆಸರು ಬಂದಿತು. ಯಾಜ್ಞವಲ್ಕ್ಯರು ವೈಶಂಪಾಯನ ಋಷಿಗಳ ಸೋದರಳಿಯ ಮತ್ತು ಶಿಷ್ಯರೂ ಆಗಿದ್ದರು. ವೈಶಂಪಾಯನರು ವೈವಸ್ವತ ಮನ್ವಂತರ ಸ್ವಾಯಂಭೂ ಮನುವಿನ ಪ್ರದೇಶದಲ್ಲಿದ್ದರು. ಬ್ರಹ್ಮರಾತರೆಂಬ ಮುನಿಯು ಬ್ರಹ್ಮದೇವರ ಅಂಗದಿಂದ ಜನಿಸಿದವರು. ಇವರ ಪುತ್ರರೇ ಯಾಜ್ಞವಲ್ಕ್ಯರು (ಭಾಗವತ ೧೨-೬)

ಯಾಜ್ಞವಲ್ಕ್ಯರಿಂದ ಉಪದೇಶ ಹೊಂದಿದ್ದರಿಂದ ವಾಜಸ್ನೇಯ ಸಂಹಿತೆ ಆಗಿ,

೧೫ ಶಾಖೆಗಳಾಗಿ ಬೆಳೆಯಿತು. ಇದರಲ್ಲಿ ಎರಡು ಮುಖ್ಯ ಶಾಖೆಗಳು (೧) ಕಾಣ್ವಶಾಖೆ (೨) ಮಾಧ್ಯಂದಿನ ಶಾಖೆ ಎಂದು. ಮುಂದೆ ಯಾಜ್ಞವಲ್ಕ್ಯರಿಂದ ಕಣ್ವಮುನಿ ಉಪದೇಶ ಹೊಂದಿದ್ದರಿಂದ ಕಾಣ್ವಶಾಖೆ. ಹಾಗೇ ಮಾಧ್ಯಂದಿನ ಮುನಿ ಉಪದೇಶ ಹೊಂದಿ ಪ್ರಚುರವಾಯಿತು. ಇದಕ್ಕೆ ಮಾಧ್ಯಂದಿನ ಶಾಖೆ ಎಂಬ ಹೆಸರಾಯಿತು.

ಋಗ್ವೇದದಲ್ಲಿ ಎಂಟು ಗುಂಪುಗಳು **ಅಷ್ಟಕ** ಎಂದು ಹೆಸರಾಯಿತು. ಮಾಧ್ಯಂದಿನ ಸಂಹಿತೆಯ ನಲವತ್ತನೆಯ ಅಧ್ಯಾಯ ಆದರೆ, ಕಾಣ್ವಶಾಖೆಯಲ್ಲಿ ನಾಲ್ಕು ದಶಕದ ಹತ್ತನೆಯ ಅಧ್ಯಾಯದಲ್ಲಿ ಈಶಾವಾಸ್ಯೋಪನಿಷತ್ತು ಆಗಿರುತ್ತದೆ. ಹೀಗೆ ಎಲ್ಲಾ ಮತಾಚಾರ್ಯರು ಭಾಷ್ಯ ಬರೆಯುವುದಕ್ಕೆ ಕಾಣ್ವ ಸಂಹಿತೆಯನ್ನು ಸಮ್ಮತಿಸುತ್ತಾರೆ.

ವಾಜೀ (ಕುದುರೆ/ಹಯಗ್ರೀವ) ಹಯಮುಖ, ಹಯವದನ ಎಂಬ ನಾಮಗಳುಳ್ಳ ಶ್ರೀಹರಿಯ ಅನೇಕ ಅವತಾರಗಳಲ್ಲಿ ಒಂದಾಗಿರುತ್ತದೆ. ಆಯಿತು. ಶ್ರೀಹರಿಯು ಹಯಗ್ರೀವ ರೂಪ ಏಕೆ ತಾಳಿದ ಎಂಬ ಪ್ರಶ್ನೆಗೆ ಹೀಗೆ ಉತ್ತರವಿದೆ.

**ಹಯವದನ** (ವಾಜೀ) ಜ್ಞಾನಪ್ರಾಧಾನ್ಯ ದೇವತೆ. ಶಾಸ್ತ್ರಾಧ್ಯಯನ ಮಾಡುವವರು ಮೊದಲು ಅಧ್ಯಯನ ಮಾಡಲು ಮಾಡುವ ಮುನ್ನ ಜ್ಞಾನ ಸ್ಥಿರವಾಗಿ ನಿಲ್ಲಲು ಹಯಗ್ರೀವ ದೇವರನ್ನು ಸ್ತೋತ್ರ ಮಾಡಬೇಕೆಂದು ಸಂಪ್ರದಾಯವಿದೆ. ಏಕೆ ಹಾಗೆ ಅಂದರೆ

**ಜ್ಞಾನಾಂದಮಯಂ ದೇವಂ ನಿರ್ಮಲ ಸ್ಫಟಿಕಾಕೃತಿಂ**
**ಆಧಾರಂ ಸರ್ವವಿದ್ಯಾನಾಂ ಹಯಗ್ರೀವಮುಪಾಸ್ಮಹೇ**

ಹಯಗ್ರೀವ ದೇವ ಜ್ಞಾನಾಂದಮಯ ದೇಹ ಉಳ್ಳವನು. ಸ್ಫಟಿಕ ಕಾಂತಿ (ಬೆಳ್ಳನೆ) ಯುಕ್ತನು. ಇಂತಹ ಪರಮಾತ್ಮನು ಸರ್ವ ರೀತಿಯ ವಿದ್ಯೆಗಳಿಗೆ ಆಧಾರನು ಎಂದು ಉಪಾಸನೆ ಮಾಡಬೇಕು ಎಂದಿದೆ. ಶಾಸ್ತ್ರಾಧ್ಯಯನ ಪೂರ್ವದಲ್ಲಿ ವೈಷ್ಣವ ಸಾಂಪ್ರದಾಯ ಪ್ರಕಾರ "**ಶ್ರೀ ಗುರುಭ್ಯೋ ನಮಃ। ಪರಮ ಗುರುಭ್ಯೋ ನಮಃ। ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ಗುರುಭ್ಯೋ ನಮಃ। ಶ್ರೀಮದ್ಹನುಮ ಭೀಮ ಮಧ್ವಾಂತರ್ಗತ ರಾಮಕೃಷ್ಣ ವೇದವ್ಯಾಸಾತ್ಮಕ ಲಕ್ಷ್ಮೀಹಯಗ್ರೀವಾಯನಮಃ।**" ಎಂದೇ ಆರಂಭಿಸಿ ಹಯಗ್ರೀವ ದೇವರನ್ನು ಜ್ಞಾನ ಸ್ಥಿರವಾಗಲು ಸ್ಮರಿಸಬೇಕು. ಶ್ರೀವಾದಿರಾಜ ಗುರುರಾಜರ ಉಪಾಸ್ಯ ಮೂರ್ತಿ ಹಯಗ್ರೀವ ದೇವರು. ಅಲ್ಲದೇ ತಾವು ರಚಿಸಿದ ಗ್ರಂಥಗಳಲ್ಲಿ ಹಯಗ್ರೀವ ದೇವರನ್ನು ಸ್ಮರಿಸುತ್ತಾರೆ.

**ಹಯಗ್ರೀವ ದಯಾಸಿಂಧೂರಂಧೂಕೃತಭವಾಂಬುಧಿಃ**
**ಪ್ರಬಂಧಮಪ್ರತಿದ್ವಂದ್ವಂ ಕರೋತ್ವೇನಮನೇನಸಂ** (ತೀರ್ಥಪ್ರಬಂಧ–೨)

**ಶ್ರಯೇ ಹಯಮುಖಂ ಶ್ರಾವ್ಯಕಾವ್ಯ ಮಾರ್ಗ ಸಮಾಪ್ತಯೇ** (ರುಕ್ಮಿಣೀಶ ವಿಜಯ–೩)



**ಹಯಗ್ರೀವ ಹಯಗ್ರೀವ ಹಯಗ್ರೀವೇತಿ ವಾದಿನಮ್।**
**ನರಂ ಮುಂಚಂತಿ ಪಾಪಾನಿ ದರಿದ್ರಮಿವ ಯೋಷಿತಃ॥** (ಹಯಗ್ರೀವ ಸಂಪದ ಸ್ತೋತ್ರ–೧)

**ಲಸದಾಸ್ಯ ಹಯಗ್ರೀವ ಲಸದೋಷದ್ವಯಾರುಣೆ ।**
**ಲಸದ್ಧಂತವಾಲಿಶೋಭ ಹಯಗ್ರೀವ ಲಸತ್ಸ್ಮಿತ ॥** (ಹಯಗ್ರೀವ ಸ್ತುತಿ)

ಹೀಗೆ ಹಯಗ್ರೀವ ದೇವರ ಸ್ತುತಿಗಳನ್ನು ಮಾಡಿರುತ್ತಾರೆ. ಅಲ್ಲದೆ ಶ್ರೀರಾಘವೇಂದ್ರ ಸ್ತೋತ್ರ ಕರ್ತೃಗಳಾದ ಶ್ರೀ ಅಪ್ಪಣಾಚಾರ್ಯರು ಸ್ತೋತ್ರದ ಕೊನೆಯ ಭಾಗವಾದ

**ಕಿಂತ್ವಿಷ್ಟಾರ್ಥಸಮೃದ್ಧಿರೇವ ಕಮಲಾನಾಥಪ್ರಸಾದೋದಯಾತ್**
**ಕೀರ್ತಿರ್ದಿಗ್ವಿದಿತಾ ವಿಭೂತಿರತುಲಾ 'ಸಾಕ್ಷೀ ಹಯಾಸ್ಯೋಽತ್ರ ಹಿ'**

ವೆಂಬುದಾಗಿ ಈ ಸ್ತೋತ್ರದಲ್ಲಿ ತಿಳಿಸಿದಂತೆ ವಾಕ್ಯಗಳ ಸಾರ್ಥಕತೆ ಪ್ರಾಮಾಣ್ಯವಾಗುವುದು. ಶ್ರೀರಾಯರ ಸ್ತೋತ್ರ ಮಂತ್ರ ಸದೃಶವಾಗಲು ಶ್ರೀಗುರುರಾಜರು ತಮ್ಮ ಸಮ್ಮತಿ ಹಾಗೂ ಶ್ರೀಹರಿ ಸಮ್ಮತಿ ಇರುವುದಾಗಿ ಎಲ್ಲರಿಗೂ ಕೇಳಿಸುವಂತೆ ಬೃಂದಾವನದಿಂದ **'ಸಾಕ್ಷೀ ಹಯಾಸ್ಯೋಽತ್ರ ಹಿ'** ಎಂದು ಮುದ್ರಿಕೆಯನ್ನು ತಿಳಿಸಿದರೆಂಬುದು ಸುಪ್ರಸಿದ್ಧ. ತಮ್ಮ ವಾಕ್ಯವನ್ನು ಸತ್ಯವಾಗುವುದಕ್ಕೆ ಶ್ರೀಹಯಗ್ರೀವದೇವನೇ ನಡೆಸಿಕೊಡುತ್ತಾನೆ ಎಂದು ತಿಳಿಸಿದರು. ಹೀಗೆ ಹೇಳಿದಾಗ ಶ್ರೀಹಯಗ್ರೀವದೇವನೇ ಸಕಲ ವೇದಾದಿ ಗ್ರಂಥಗಳ ಅಧಿಕೃತ ದೇವನು. ವೇದಾದಿ ಸಚ್ಛಾಸ್ತ್ರ ಪಠಣಗಳು ಧಾರ್ಢ್ಯವಾಗಲು ಅವನ ಪೂರ್ವಾನುಗ್ರಹ ಬೇಕು ಎಂದಿದೆ.

ಆದ್ದರಿಂದ ಪ್ರಸ್ತುತ ಯಾಜ್ಞವಲ್ಕ್ಯರಿಗೆ ಬಹಳ ಹಿಂದೆಯೇ ಹಯಗ್ರೀವ ದೇವರ ಪ್ರಸಾದ ಉಪದೇಶ ಪಡೆದುದರ ಫಲವಾಗಿ ಶುಕ್ಲಯಜುರ್ವೇದಕ್ಕೆ ಪ್ರವರ್ತಕರಾದರು ಎಂಬುವುದನ್ನು ಗಮನಿಸಬೇಕು.

* * * * * *

ಹರಿಃ ಓಂ

# ಈಶಾವಾಸ್ಯೋಪನಿಷತ್ :

ಇದರ ಭಾಷ್ಯವನ್ನು ರಚಿಸಲು ಶ್ರೀ ಆನಂದತೀರ್ಥ ಭಗವತ್ಪಾದರು ಭಗವನ್ನಮನ ರೂಪ ಮಂಗಳಾಚರಣೆಯನ್ನು ನಿಬಂಧಿಸಿರುತ್ತಾರೆ.

೧. **ಓಂ ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ ಪೂರ್ಣಮುದುಚ್ಯತೆ ।**
**ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೇ ॥**

**ನಿತ್ಯಾಽನಿತ್ಯ ಜಗಧ್ಧಾತ್ರೆ ನಿತ್ಯಾಯ ಜ್ಞಾನಮೂರ್ತಿಯೇ ।**
**ಪೂರ್ಣಾನಂದಾಯ ಹರಯೇ ಸರ್ವ ಯಜ್ಞ ಭುಜೇ ನಮಃ ॥**

**ಯಸ್ಮಾತ್ ಬ್ರಹ್ಮೇಂದ್ರಾದಿ ದೇವತಾನಾಂ ಶ್ರೀರ್ಯೋಪಿ ಚ ।**
**ಜ್ಞಾನಸ್ಫೂರ್ತಿ ಸದಾ ತಸ್ಮೈ ಹರಯೇ ಗುರವೇನಮಃ ॥**

ಶ್ರೀಮಜ್ಜಯತೀರ್ಥರು ಈಶಾವಾಸ್ಯ ಹಾಗೂ ಷಟ್‌ಪ್ರಶ್ನೋಪನಿಷತ್ತುಗಳಿಗೆ ಮಾತ್ರ ಟೀಕಾ ಬರೆದಿರುತ್ತಾರೆ.

೨. **<u>ಶ್ರೀಟೀಕಾಕೃತ್ಪಾದರ ಮಂಗಳ ಪದ್ಯ</u>**
**ಶ್ರೀಮಚ್ಛೇಪ ದನಾಂಭೋಜ ಗತ ಸೌಂದರ್ಯ ಸಾರಭಂ ।**
**ವಿಹದ್ಭ್ಯಾಂ ಲೋಚನಾಲಿಭ್ಯಂ ಭಗವತ್‌ಪಾತು ನೋ ಹರಿಃ ॥**

**ಯಜ್ಞಂ ಯಜ್ಞ ಭುಜಂ ಪ್ರಾಜ್ಞಂ ಪೂರ್ಣಪ್ರಜ್ಞ ಮುನೀಶ್ವರಂ ।**
**ಮನೋಜ್ಞ ಗುಣಮಾಸೇವೆ ಸುಜ್ಞಾನದಮಹರ್ನಿಶಂ ॥**

೩. **<u>ಶ್ರೀ ರಾಘವೇಂದ್ರ ಗುರುರಾಜರ ಮಂಗಳಶ್ಲೋಕ</u>**
**ಶ್ರೀಪ್ರಾಣಪತಿಮಾನಮ್ಯ ಪೂರ್ಣ ಬೋಧಾದಿ ದೇಶಿಕಾನ್ ।**
**ಈಶಾವಾಸ್ಯೋಪನಿಷದಃ ಕರಿಷ್ಯಾಮ್ಯರ್ಥಸಂಗ್ರಹಂ ॥**

ಶ್ರೀ ಉಪನಿಷತ್ತನ್ನು ಅಧ್ಯಯನ ಮಾಡುವ ಪೂರ್ವದಲ್ಲಿ ಉಪನಿಷತ್ತಿನ ದೇವತಾ ಋಷಿ ಛಂದಸ್ಸನ್ನು ತಿಳಿಯಬೇಕು.

**ಖಂಡಾರ್ಥ : "ಅಸ್ಯಾ ಉಪನಿಷದಃ ಸ್ವಾಯಂಭೂಮನುಃ ಋಷಿಃ । ಯಜ್ಞನಾಮ ಹರಿರ್ದೇವತಾ । ಅನುಷ್ಟುಪಾದಿ ಯಥಾಯೋಗ್ಯಂ ಛಂದೋಜ್ಞೆಯಃ ॥"**

**ವಿವರಣೆ :** ನಿತ್ಯವಾದ ಹಾಗೂ ಅನಿತ್ಯವಾದ ಈ ಜಗತ್ತಿಗೆ ನಿತ್ಯನಾದ ಭಗವನ್ ಧರಿಸಿರುತ್ತಾನೆ. ಸರ್ವಯಜ್ಞಗಳನ್ನು ಸ್ವೀಕರಿಸುವ ಯಜ್ಞನಾಮಕ ನಾರಾಯಣನೇ



ಪ್ರತಿಪಾದ್ಯ ದೇವತ. ಅಂತಹ ಜ್ಞಾನಾನಂದಾದಿ ಪೂರ್ಣನಾದ ಹರಿಗೆ ನಮನವು.

ಶ್ರೀಲಕ್ಷ್ಮೀದೇವಿಗೂ, ಪ್ರಾಣಪತಿ (ಮುಖ್ಯಪ್ರಾಣದೇವರು) ನಮಿಸಿ ಪೂರ್ಣಬೋಧಾಕ್ಯ ಆಚಾರ್ಯ ಶ್ರೀಮಧ್ವರಿಗೆ ನಾನು ನಮಿಸುತ್ತೇನೆ. ಎಲ್ಲಾ ಹಿರಿಯ ಜ್ಞಾನಿಗಳಿಗೆ (ಅವರ ಆಶೀರ್ವಾದ ಬಲದಿಂದಾಗಿ) ಈಶಾವಾಸ್ಯ ಉಪನಿಷತ್ತಿಗೆ ಯಥಾಮತಿ ಸಂಗ್ರಹರೂಪವಾಗಿ ಅರ್ಥ ಬರೆಯುತ್ತೇನೆ.

ಬ್ರಹ್ಮರುದ್ರಾದಿ ಸಮಸ್ತರಿಗೂ ಮುಖ್ಯವಾಗಿ ಶ್ರೀಮಹಾಲಕ್ಷ್ಮಿಗೂ ಜ್ಞಾನಪ್ರಧಾನ ಮಾಡುವ ಶ್ರೀಹರಿ ಅವನೇ ನನ್ನ ಗುರುವಾಗಿರುತ್ತಾನಾದ್ದರಿಂದ ನಮಸ್ಕರಿಸುತ್ತೇನೆ. ಇನ್ನು ಛಂದಸ್ಸು ಅಕ್ಷರ ಗಣನೆಯಿಂದ ತಿಳಿಯತಕ್ಕದ್ದು ಎಂದು ತಿಳಿಸಲಾಗಿದೆ.

**ಈಶಾವಾಸ್ಯ ಉಪನಿಷತ್ತು ಇಪ್ಪತ್ತು ಮಂತ್ರಗಳಿಂದ ಕೂಡಿದೆ.** ಸ್ವರೂಪದಲ್ಲಿ ಚಿಕ್ಕದಾದರೂ ಅರ್ಥಗಾಂಭೀರ್ಯದಲ್ಲಿ ತ್ರಿವಿಕ್ರಮನಂತೆ ಬೃಹತ್ತಾಗಿರುವುದು.

**ಮುಖ್ಯ ಸಾರಾಂಶ :** ಶಾಂತಿ ಮಂತ್ರಗಳ ಪ್ರಥಮವಾದ **ಪೂರ್ಣಮದಃ** ಇತ್ಯಾದಿ ಇದೆ. ಅದರ ವಿವರಣೆ ಮಂತ್ರಕ್ಕೂ ಉಪನಿಷತ್ತಿಗೂ ಏನು ಸಂಬಂಧ ?

**ಉತ್ತರ :** ಶ್ರೀಮದಾಚಾರ್ಯರು ಯಜ್ಞನಾಮಕ ಹರಿಯನ್ನು ಸ್ಮರಿಸುತ್ತಾರೆ. ಯಜ್ಞರೂಪಿ ಭಗವಂತ (ಮೂಲತಃ ಶ್ರೀಮನ್ನಾರಾಯಣನೇ) ಈಗ ಯಜ್ಞ ರೂಪತಾಳಿ ಅವತರಿಸಿದನು. ಮೂಲರೂಪಕ್ಕೂ ಅವತಾರಕ್ಕೂ ಭೇದವಿಲ್ಲ. ಅಲ್ಲಿಯೂ ಪೂರ್ಣನು. ಅವತಾರಗಳಲ್ಲಿಯೂ ಪೂರ್ಣನು ಎಂದು ತಿಳಿಸುತ್ತಾರೆ. ಹಾಗೇನೇ ಅವತಾರ ಸಮಾಪ್ತಿಯಾದಾಗಲೂ ತಾನು ತನ್ನ ಮೂಲರೂಪದಲ್ಲಿ ಪೂರ್ಣತ್ವೇನ ಇರುತ್ತಾನೆ ಎನ್ನುವ ತತ್ವವನ್ನು ಸ್ಪಷ್ಟಪಡಿಸಲಾಗಿದೆ. ಇನ್ನು ಎರಡನೇ ಮಂತ್ರ, ಆಚಾರ್ಯ ಶ್ರೀಮಧ್ವರು ಬರೆದ ಮಂಗಳಾಚರಣೆ ಬಗ್ಗೆ ಸ್ಥೂಲವಾಗಿ ತಿಳಿಯೋಣ.

**ನಿತ್ಯಾಽನಿತ್ಯ ಜಗಧ್ಧಾತ್ರೆ ನಿತ್ಯಾಯ ಜ್ಞಾನಮೂರ್ತಿಯೇ ।**
**ಪೂರ್ಣಾನಂದಾಯ ಹರಯೇ ಸರ್ವ ಯಜ್ಞ ಭುಜೇ ನಮಃ ॥**

**ವಿವರಣೆ :** ಈ ಶ್ಲೋಕದಲ್ಲಿ **ಮುಖ್ಯ** ವಿಷಯಗಳನ್ನು ತಿಳಿಸುತ್ತಾರೆ. ಈ ಜಗತ್ತು ನಿತ್ಯವೂ ಅನಿತ್ಯವೂ ಆಗಿರುತ್ತದೆ. ಇಂತಹ ಜಗತ್ತನ್ನು ಧರಿಸಿರುತ್ತಾನೆ ಎಂದಿದೆ.

**ಪ್ರಶ್ನೆ :** ಜಗತ್ತು ನಿತ್ಯವೆಂದಿರಿ ಆದರೆ ಕೂಡಲೇ ಅನಿತ್ಯವೆಂದಿರಿ ಹೇಗೆ ? ಜಗತ್ತು ನಿತ್ಯವೇ ಅನಾದಿನಿತ್ಯ ಅದಕ್ಕೆ ಹರಿಸಾಮ್ಯದಿಂದ ನಿತ್ಯಾಯ ಎನ್ನುವುದನ್ನು ತಿಳಿಸಿ ಭಗವಂತನು ನಿತ್ಯನು ಹೇಗೋ ಜಗತ್ತೂ ನಿತ್ಯವೇ.

**"ನಿತ್ಯೋ ನಿತ್ಯಾನಾಂಶ್ಚೇತನಶ್ಚೇತನಾನಾಂ"**

ನಿತ್ಯಪದಾರ್ಥಗಳು (ಆದಿ ಅಂತ್ಯವಿಲ್ಲದವು).

**ಪ್ರಕೃತಿ ಪುರುಷ ಸ್ವಾಭಾವ ಜೀವ.** ಇವುಗಳು ನಿತ್ಯ. ಇಲ್ಲಿ ಪ್ರಕೃತಿ ಎಂದಾಗ ಚಿತ್ ಅಚಿತ್ ಪ್ರಕೃತಿ ಎಂದು ಹೇಳಲ್ಪಟ್ಟಿದೆ. ಚಿತ್ ಪ್ರಕೃತಿ (ಅಂದರೆ ಚೇತನ) ಅಚಿತ್ (ಅಚೇತನ)ಗಳೆಂದು ಎರಡು ವಿಧ.

Animate ಜೀವ ಪ್ರಾಣವುಳ್ಳ Inanimate ಜಡ ಜೀವ ವರ್ಗಕ್ಕೆ ಸೇರದಿರುವುದು ಅಂದರೆ ಇವೆಲ್ಲವೂ ಪ್ರಕೃತಿಗೆ ಸಂಬಂಧಿಸಿದವು. ಜಗತ್ತು ಪ್ರಕೃತಿ ಎನಿಸಿದೆ. ಇದು ಸದಾ ನಿತ್ಯವೇ ಆಗಿರುತ್ತದೆ. ಆದರೆ ಪ್ರಕೃತಿ ನಿತ್ಯವಾದರೂ ಅಲ್ಲಿ ಹುಟ್ಟಿರುವುವು ಅನಿತ್ಯವು. ಉದಾಹರಣೆ ಕೊಡುವುದಾದರೆ : ಗಂಗಾನದಿಯು ನಿತ್ಯವೇ ಇದ್ದೇ ಇತ್ತು. ಈಗ ಇದ್ದೇ ಇರುವುದು. ಮುಂದೆಯೂ ಇರುವುದು. ಆದರೆ ಪ್ರವಾಹವು ಅನಿತ್ಯವು. ಈಗ ಹರಿಯುವ ಪ್ರವಾಹ ಮುಂದೆ ಹೋಗುತ್ತಿರುತ್ತದೆ. ನಾವು ಸ್ನಾನ ಮಾಡಲು ನದಿಯಲ್ಲಿ ಹರಿಯುತ್ತಾ ಇರುವುದು ಸ್ನಾನ ಮಾಡಿದಾಗ ನದೀ ನೀರು ಆ ನೀರು ಹರಿದು ಹೋಗುತ್ತದೆ. ಆದರೆ ಗಂಗಾನದಿಯು ಸದಾ ನಿತ್ಯವೇ.

ಇದೇ ರೀತಿ ಪುರುಷನಾಮಕ ಭಗವಂತ ನಿತ್ಯನಷ್ಟೇ. ಅಲ್ಲಿ ಪರಮನಿತ್ಯನು ವಾಸುದೇವರೂಪಿ ಪದ್ಮನಾಭನು ಸ್ವರೂಪದಿಂದಲೇ ನಿತ್ಯನೇ (ಅವಿನಾಶಿ). ಅದೇ ಭಗವಂತನ ಅವತಾರಗಳು ಮೇಲೆ ನೋಟಕ್ಕೆ ಅವತಾರ ಮುಗಿದ ನಂತರ ನಿತ್ಯನೇ ಆಗಿರುತ್ತಾನೆ.

ಜೀವರುಗಳೂ ಸಹ ನಿತ್ಯರೇ. **''ಅಜೋನಿತ್ಯಃ ಶಾಶ್ವತೋಯಂ ಪುರಾಣಂ ನಹನ್ಯತೇ ಹನ್ನ ಮಾನೇಪಿ ಶರೀರೆ''** ಎಂದು ಪ್ರಮಾಣ. ಜೀವರು ನಿತ್ಯರು. ಆದರೆ ಅವರು ಧರಿಸಿದ ದೇಹಾದಿಗಳು ಅನಿತ್ಯವು. ಅದೇ ರೀತಿ ಜೀವರ ಸ್ವರೂಪ ಸಾತ್ವಿಕ, ರಾಜಸ, ತಾಮಸಗುಣಗಳು ನಿತ್ಯವೇ. ಸ್ವರೂಪ ವಿಕಾರ ಹೊಂದುವುದಿಲ್ಲ. ಇದನ್ನೆ ಶ್ರೀಕೃಷ್ಣಭಗವಾನ್ ಗುಣತ್ರಯ ವಿಭಾಗ ಯೋಗದಲ್ಲಿ ಸ್ಪಷ್ಟಪಡಿಸಿರುತ್ತಾನೆ.

ಇಂತು ದ್ವಿಮುಖವಾದ ಜಗತ್ತನ್ನು ಪರಮಾತ್ಮನು ಧರಿಸಿರುತ್ತಾನೆ. ಆ ಸ್ವಾಮಿಯು ಸದಾ ಜ್ಞಾನಾನಂದಮೂರ್ತಿ. (ಅರ್ಥೇಷು ಅಭಿಜ್ಞಃ) ಎಂದು ಹೇಳಲ್ಪಟ್ಟಿದೆ. ಇಂತಹ ಹರಿಯು ಶ್ರೀಮದಾಚಾರ್ಯರಿಗೆ ಗುರುವಾಗಿರುತ್ತಾನೆ. ಆತನಿಗೆ ನಮೋನಮಃ ಎಂದು ತಿಳಿಸುತ್ತಾರೆ. ಇಂತಹ ಪರಮ ಗುರುವಾದ ಶ್ರೀಹರಿ ಬ್ರಹ್ಮರುದ್ರ ಇಂದ್ರಾದಿ ದೇವತೆಗಳಿಗೆ ತಮ್ಮ ಸಮೀಚೀನ ಜ್ಞಾನಸ್ಫೂರ್ತಿ ಬುದ್ಧಿಗೆ ಹೊಳೆಯುವುದು (ವಿಕಾಸ ಹೊಂದುವಂತೆ) ಶ್ರೀರಮಾದೇವಿಗೂ ಸದಾ ವಿಕಸಿತವನ್ನಾಗಿ ಮಾಡುವಂತಹ ಸ್ವಾಮಿಗೆ ನಮೋನಮಃ.

ಶ್ರೀಮದ್ರಾಘವೇಂದ್ರರು ಉಪನಿಷತ್ತಿಗೆ ಅರ್ಥಸಂಗ್ರಹರೂಪ ಟಿಪ್ಪಣಿ ಬರೆಯುವ ಮುನ್ನ ಶ್ರೀಹರಿ ಗುರು ನಮನ ರೂಪ ಮಂಗಳ ಶ್ಲೋಕವು **ಶ್ರೀಪ್ರಾಣಪತಿಮಾನಮ್ಯ ಪೂರ್ಣ ಬೋಧಾದಿ ದೇಶಿಕಾನ್ । ಈಶಾವಾಸ್ಯೋಪನಿಷದಃ ಕರಿಷ್ಯಾಮ್ಯರ್ಥಸಂಗ್ರಹಂ ॥**



**ವಿವರಣೆ :** ಮೊದಲಿಗೆ ಶ್ರೀದೇವಿ(ರಮಾದೇವಿ)ಗೆ ಮುಖ್ಯಪ್ರಾಣ ಪತಿಗಳಿಗೆ ನಮಿಸಿ ಎಂದಿದ್ದಾರೆ. ಇಲ್ಲಿ ಶ್ರೀ ಪ್ರಾಣಪತಿಮಾನಮ್ಯ ಎಂದಾಗ ಏಕವಾಕ್ಯವಾಗಿ ಶ್ರೀ ದೇವಿಗೆ ರಮಣನಾದ ನಾರಾಯಣನಿಗೆ ನಮಿಸುತ್ತೇನೆ ಎಂದರ್ಥ. ಶ್ರೀಯಾಃ+ಪತಿಃ = ಶ್ರೀಪತಿಃ ಎಂದಾಗುತ್ತದೆ. ಎರಡನೆಯದಾಗಿ ಶ್ರೀಯಶ್ಚ+ಪ್ರಾಣಪತಿಶ್ಚ ಎಂಬುದಾಗಿ ದ್ವಂದ್ವ ಪದ ವಿಭಾಗ ಮಾಡಿದಾಗ ಲಕ್ಷ್ಮೀದೇವಿಗೂ ಹಾಗೂ ಮುಖ್ಯಪ್ರಾಣದೇವರಿಗೂ ನಮಿಸಿ ಎಂದು ತಿಳಿಸಿರುವುದನ್ನು ಗಮನಿಸಬೇಕು.

ರಮಾದೇವಿಗಷ್ಟೇ ನಮಿಸಿದೆ ಶ್ರೀಹರಿಗೆ ಅತ್ಯಂತ ಪ್ರೀತಿಪಾತ್ರರಾದ ಮುಖ್ಯಪ್ರಾಣದೇವರಿಗೂ ನಮಿಸಿದರೆ ಪರಮಾತ್ಮನು ಸುಪ್ರೀತನಾಗುತ್ತಾನೆ ಎಂದು ಸೂಚಿಸುತ್ತಾರೆ.

**ಆಯಿತು.** ಪ್ರಾಣದೇವರಿಗೆ ನಮಸ್ಕರಿಸಿದ ಮೇಲೆ ಪೂರ್ಣಬೋಧ ಶ್ರೀಮನ್ಮಧ್ವಾಚಾರ್ಯರಿಗೆ ಪ್ರತ್ಯೇಕ ನಮನವು ಏಕೆ ಅಂದರೆ **ಪ್ರಾಣಪತಿಮಾನಮ್ಯ** ಎಂದು ವಾಯುದೇವರಿಗೆ ನಮಿಸಿ ಅವರ ಅವತಾರಭೂತರಾದ ಶ್ರೀ ಆನಂದತೀರ್ಥರಿಗೆ ಅವತಾರ ಭೇದದಿಂದ ನಮಿಸಿದ್ದು ಯುಕ್ತವೇ ಎಂಬುದನ್ನು ಮಾರ್ಮಿಕವಾಗಿ ತಿಳಿಸಿರುತ್ತಾರೆ. ಹೀಗೆ ಹರಿಗುರುದ್ವಯರಿಗಷ್ಟೇ ಅಲ್ಲದೆ ಆಚಾರ್ಯರಿಂದ ಪರಂಪರಾವಾಗಿ ಪ್ರಾಪ್ತವಾದ ಸಮಸ್ತ ಗುರುಗಳಿಗೂ ನಮನವು ಎಂದು ತಿಳಿಸಿ ಶ್ರೀರಾಯರು ತಮ್ಮ ಪೂರ್ವೀಕರಾದ ಎಲ್ಲ ಗುರುಗಳಿಗೆ ನಮಿಸುತ್ತಾರೆಂದಾಗ ಗುರುಪರಂಪರಾವನ್ನು ಸ್ಮರಿಸುತ್ತಾರೆಂಬುದು ಗಮನಾರ್ಹ.

ಈಶಾವಾಸ್ಯ ಉಪನಿಷತ್ತಿಗೆ ಅರ್ಥಸಂಗ್ರಹವನ್ನು ಮಾಡುತ್ತೇನೆ ಅಂತ ತಿಳಿಸಿದ್ದಾರೆ. ಈವರೆಗೆ ಹಿರಿಯ ಗುರುಗಳ ಶ್ರೀಮಧ್ವಾಚಾರ್ಯರ ಭಾಷ್ಯ, ಶ್ರೀಮಜ್ಜಯತೀರ್ಥರ ಟೀಕಾ ಇತ್ಯಾದಿ ಅನೇಕ ಟಿಪ್ಪಣಿಗಳನ್ನು ಚೆನ್ನಾಗಿ ಮಥನ ಮಾಡಿ ಅವುಗಳಲ್ಲಿ ತಿಳಿಸಿದ ಭಾವಗಳನ್ನು ಸಂಗ್ರಹವಾಗಿ ಬಾಲಬೋಧವಾಗುವಂತೆ ಬರೆಯುತ್ತೇನೆ ಅಂದಿದ್ದಾರೆ. ಇಲ್ಲಿ ಶ್ರೀರಾಯರು ಉಪನಿಷತ್ತಿಗೆ **ಖಂಡಾರ್ಥ** ಬರೆದಿರುತ್ತೇನೆ ಅಂತ ಹೇಳಿಲ್ಲ. **''ಅರ್ಥಸಂಗ್ರಹಂ''** ಎಂದಿಷ್ಟೇ ತಿಳಿಸಿರುತ್ತಾರೆ. ಇನ್ನೊಂದು ವಿಷಯ ರಾಯರು ತಮ್ಮ ಸ್ವಾಹಂಕಾರ ಖಂಡನೆಯನ್ನು ತಿಳಿಸಲು **ಅರ್ಥಸಂಗ್ರಹಂ** ಎಂದಿದ್ದಾರೆ. ಮುಖ್ಯವಾಗಿ ಶ್ರೀಮದಾಚಾರ್ಯರ ಭಾಷ್ಯದಲ್ಲಿ ಉಕ್ತವಾದ ಪ್ರಮೇಯಗಳನ್ನು ಸಂಗ್ರಹವಾಗಿ ಬರೆದಿದ್ದೇನೆ ವಿನಃ ವಿಸ್ತಾರವಾಗಿ ಟಿಪ್ಪಣಿ ಬರೆದಿಲ್ಲವೆಂದು ಹೇಳಿದ್ದಾರೆ. ಆದರೆ ರಾಯರು ಸಮರ್ಥರೇ ಆಗಿರುತ್ತೇವೆ. ವಿಸ್ತೃತ ಟಿಪ್ಪಣಿ ಬರೆದಿಲ್ಲವೇಕೆಂದರೆ **ಗ್ರಂಥಾಲ್ಪತ್ವಾಂಯನೋಚ್ಯತೇ** ನಮ್ಮ ವ್ಯಾಖ್ಯಾನವು ಭಾಷ್ಯಕ್ಕಿಂತ ದೊಡ್ಡದಾಗಬಾರದೆಂದು ಬರೆದಿಲ್ಲ ಎಂದು ಗೂಢವಾಗಿ ಈ ಬಾಲರಿಗೂ ಶ್ರೀಮದಾಚಾರ್ಯರ ಪ್ರಮೇಯಗಳನ್ನು ತಿಳಿಯಲು ಸುಲಭವಾಗಿ ರಚಿಸಿರುತ್ತೇನೆ ಅಂತ

ಹೇಳಿಕೊಂಡಿರುವುದು ಶ್ರೀಗುರುರಾಜರು ಮಂದಮತಿಗಳನ್ನು ಉದ್ಧರಿಸಬೇಕೆಂಬ ಹಂಬಲ ಕಾಣುತ್ತೇವೆ.

ಉಪೋದ್ಘಾತದಲ್ಲಿ ತಿಳಿಸಿದಂತೆ ಯಜ್ಞನಾಮಕ ಶ್ರೀಮನ್ನಾರಾಯಣನೇ ಗ್ರಂಥ ಪ್ರತಿಪಾದ್ಯ ದೇವತಾ ಎಂದು ಭಗವಂತನ ತಾತನಾದ ಸ್ವಾಯಂಭೂ ಮನುವೇ ಋಷಿ ಇನ್ನು ಉಪನಿಷತ್ತಿನಲ್ಲಿರುವ ಅಕ್ಷರ ಗಣನೆ ಮಾಡಿ ಅನುಷ್ಟುಪಾದಿ ಛಂದಸ್ಸುಗಳನ್ನು ತಿಳಿಯಬೇಕು.

ಉಪನಿಷತ್ತು ಇಪ್ಪತ್ತು ಮಂತ್ರಗಳಿಂದ ಕೂಡಿರುತ್ತದೆ. ಸ್ವರೂಪದಲ್ಲಿ ಚಿಕ್ಕದಾದರೂ ಬಾಹ್ಯರ್ಥಗಳಿಂದ ತುಂಬಿರುತ್ತದೆ. ಉಪನಿಷತ್ತಿನಲ್ಲಿ ಮಂತ್ರ ೧ ರಿಂದ ೨ ರವರೆಗೆ, ೫ ರಿಂದ ೭ ರವರೆಗೆ ಆಮೇಲೆ ೯ ರಿಂದ ೧೫ನೇ ಮಂತ್ರಗಳು ಅನುಷ್ಟುಪ್ ಛಂದಸ್ಸಿನಲ್ಲಿ, ಮಂತ್ರ ೪ನೇಯದು ಮತ್ತೆ ೨೦ನೇ ಮಂತ್ರಗಳೆರಡೂ ತ್ರಿಷ್ಟುಪ್ ಛಂದಸ್ಸಿನಲ್ಲಿ, ಬಾಕೀ ೧೬, ೧೭, ೧೮, ೧೯ನೇ ಮಂತ್ರಗಳು ವಾಕ್ಯ ರೂಪದಲ್ಲಿ ರೂಪಗೊಂಡಿವೆ.

ಪ್ರಥಮ ಮಂತ್ರದಲ್ಲಿ ಅಧಿಕಾರಿಯು ತಾನು ಅಸ್ವಾತಂತ್ರ್ಯನು ಸರ್ವತಂತ್ರ ಸ್ವತಂತ್ರನಾದ ಶ್ರೀಹರಿಯಿಂದ ನಿರ್ಮಿತವಾದ ಈ ಜಗತ್ತು ಸರ್ವ ರೀತಿಯಿಂದಲೂ ಸಮೃದ್ಧವಾಗಿರುತ್ತೆ. ಅವನು ದಯಪಾಲಿಸಿದ ಪದಾರ್ಥಗಳಿಂದ ಅನುಭವಿಸಬೇಕು. ಅನ್ಯರು ಅಸ್ವತಂತ್ರರು ಏನೂ ಸ್ವಂತವೆಂದು ಕೊಡಲಾರರು. ಆದ್ದರಿಂದ ಪರಮಾತ್ಮನನ್ನು ಹೊರತು ಅನ್ಯರಲ್ಲಿ ಹೋಗಿ ಬೇಡಬೇಡಿರಿ. **''ಬೇಡಿದರೆ ಎನ್ನೊಡೆಯನ ಬೇಡುವೆ. ಎನ್ನ ಒಡಲನು ತೋರುವೆ''** ಎಂದು ದಾಸವರೇಣ್ಯರಾದ ಶ್ರೀಪುರಂದರದಾಸರು ಹೇಳಿದಂತೆ ಶ್ರೀರಮಾರಮಣನನ್ನೇ ಬೇಡಿರಿ ಅಂತ ತಿಳಿಸಿ ಹಾಗೇಂತ ಅವನೇ ಕೊಡುವಾಗ ನಾನೇಕೆ ಶ್ರಮಪಡಬೇಕು ಅಂತ ಸುಮ್ಮನೆ ಕೂಡಬೇಡಿರಿ. ನಿಮ್ಮ ನಿಮ್ಮ ವರ್ಣಾಶ್ರಮೋಚಿತ ಕರ್ಮಗಳನ್ನು ಅವಶ್ಯ ಮಾಡಬೇಕು. ಆಗ ಭಗವಂತ ಅನುಗ್ರಹಿಸುತ್ತಾನೆ. ಇಷ್ಟೊಂದು ಉಪೋದ್ಘಾತ ರೂಪ ಪ್ರಕರಣಗಳನ್ನು ತಿಳಿಸಿ ಅಧಿಕಾರಿಗೆ ಭಗವನ್ಮಹಿಮಾ ರೂಪ ತತ್ವಗಳನ್ನು ೪ನೇ ಮಂತ್ರದಿಂದ ತಿಳಿಸಲಾಗಿದೆ.

ವಿದ್ಯೆ ಅಂದರೆ ಭಗವದ್ವಿಷಯಕ ಸಮೀಚೀನ ಜ್ಞಾನ ಸಂಪಾದನೆ. ಉಪಾಸನೆ ಮಾಡಬೇಕು. ಅದನ್ನು ಬಿಟ್ಟು ಅನ್ಯದೋಷ ಯುಕ್ತ ಅವಿದ್ಯೆಯನ್ನು ತಿರಸ್ಕಾರ ಮಾಡಬೇಕು (ಖಂಡಿಸಬೇಕು). ಒಂದಕ್ಕೆ ಅಪರೋಕ್ಷ ಜ್ಞಾನವೇ ಫಲ. ಮತ್ತೊಂದಕ್ಕೆ ತಪಸ್ಸೇ ಫಲವೆಂದೂ ತಿಳಿಸಿ ಕೇವಲ ಜ್ಞಾನ ಸಂಪಾದನೆ ಮಾಡಿದರೆ ಸಾಕು. ಅನ್ಯ ಮತೀಯರ ತತ್ವವನ್ನೇಕೆ ನಿಂದಿಸಬೇಕು ಅಂತ ಯಾರು ತಿಳಿದಿರುತ್ತಾರೋ ಅವರಿಗೆ ಅದಕ್ಕಿಂತ ಹೆಚ್ಚಿನ ತಮಸ್ಸು ಲಭಿಸುವುದು ಎಂಬ ಮಾತಿನಿಂದ ಉಭಯ ಫಲಪ್ರದವಾದ ವಿದ್ಯೆಯ ಜೊತೆಗೆ ಅನ್ಯಥೋಪಾಸನೆ ನಿಂದ್ಯವು, ಮುಕ್ತಿಗೆ ಹೇತುವಾಗುವುದು ಎಂದು ತಿಳಿಸಲಾಗಿದೆ.



ಹಾಗೇ ಭಗವಂತನಾದ ನಾರಾಯಣನು ಸೃಷ್ಟಿಕರ್ತನಷ್ಟೇ ಸಂಹಾರಕರ್ತನಲ್ಲ ಅಂತ ಉಪಾಸನೆ ಮಾಡಿದವರಿಗೂ ಮೇಲೆ ತಿಳಿಸಿದಂತೆ ಅಧೋಲೋಕವೇ ಗತಿ ಎಂಬುದನ್ನು ಎಚ್ಚರಿಸಿ **''ಅಹಂಪ್ರಭವಮತ್ತಃ ಪ್ರಲಯಸ್ಥತಾ''** ಎಂಬ ಗೀತಾ ವಾಕ್ಯ ಪ್ರಮಾಣ.

ಈ ರೀತಿ ವಿಶೇಷ ಜ್ಞಾನ ಲಭಿಸಿದಾಗ ಭಗವಂತನು ಸುಪ್ರೀತನಾಗಿ ತನ್ನ ಸಚ್ಚಿದಾನಂದಾತ್ಮಕವಾದ ವಿಶಿಷ್ಟ ರೂಪವನ್ನು ಪ್ರಕಟಿಸಿ ಈ ಕಣ್ಣಿನಿಂದ ನೋಡುವ ಭಾಗ್ಯ ದಯಪಾಲಿಸು ದೇವ ದೇವ ಎಂದು ಬೇಡಬೇಕು. ಇಷ್ಟೊಂದು ಪರಮೋಪಕಾರ ಮಾಡಿದ ಹೇ ರಮಾರಮಣ. ಕರುಣಾಮೂರ್ತಿ ನಿನಗೆ ಪ್ರತಿಯಾಗಿ ನಾನೇನು ಕೊಡಬಲ್ಲೆ. ಏಕೆ ? ನಾನು ಅಸ್ವತಂತ್ರನು. ಆದರೂ ಈ ದೇಹ ನಿನ್ನ ಪ್ರಸಾದದಿಂದ ಬಂದಿದೆ. ಅವುಗಳಿಂದ ನಿನಗೆ ಶಿರ ಸಾಷ್ಟಾಂಗ ನಮಸ್ಕಾರ ಮಾತ್ರ ಕೊಡಬಲ್ಲೆ. **''ಭೂಯಿಷ್ಠಾಂತೇ ನಮ ಉಕ್ತಿಂ ವಿಧೇಮ''** ಎಂದಿಷ್ಟೇ ಹೇಳುವೆನು. ಸ್ವಾಮಿಯೇ ನನ್ನ ಮೇಲೆ ಅನುಗ್ರಹೋನ್ಮುಖನಾಗಿ ಎಂದು ಪುನಃ ಬೇಡುವೆನು.

ವೇದಪುರುಷ ಉತ್ತರಿಸುತ್ತಾನೆ. ಮಾನವ ಶರೀರ ಲಭಿಸುವುದು ಅತಿ ದುರ್ಲಭ. ತತ್ರಾಪಿ ವೈಷ್ಣವ ಜನ್ಮಪ್ರಾಪ್ತವಾದಾಗಿನಿಂದಲೇ ಆರಂಭಿಸಬೇಕು. **''ದುಲ್ಲಭಂ ಮಾನುಷಂ ಜನ್ಮ, ತತ್ರಾಪಿ ದುರ್ಲಭಂ ವೈಷ್ಣವತ್ವಂ''** ಮಾನವ ಜನ್ಮ ದೊಡ್ಡದು. ಇದನು ಹಾಳು ಮಾಡಿಕೊಳ್ಳಬೇಡಿರಿ ಹುಚ್ಚಪ್ಪಗಳಿರಾ.

**ಇಲ್ಲಿ ಒಂದು ವಿಚಾರ :** ಮಾನವ ಜನ್ಮ ಬರುವುದಕ್ಕಿಂತ ಮುಂಚೆ ಯಾವ ಯೋನಿಗಳಲ್ಲಿ ಇದ್ದೆವೋ ತಿಳಿಯದು. ಬಹು ಜನ್ಮಾಂತರಗಳಲ್ಲಿ ಮಾಡಿದ ಸ್ವಲ್ಪವೇ ಆಗಲಿ ಪುಣ್ಯಕರ್ಮ ಭಗವಂತನ ಅನುಗ್ರಹದಿಂದ ಈಗ ಮಾನವ ಶರೀರ ಪ್ರಾಪ್ತವಾಗಿದೆ. ನಾವೇನೂ ಕೇಳಿಲ್ಲ ಇದೇ ಜನ್ಮ ಬೇಕೆಂದು. ಶ್ರೀಶನ ಕರುಣೆಯಿಂದ ಬಂದಿದೆ. ಅದರಲ್ಲೂ ವೈಷ್ಣವ ದೇಹ ಈಗ ಬಂದಿದೆ. ಮುಂದೆ ಎಲ್ಲಿ ಏನಾಗಿ ಹುಟ್ಟುತ್ತೇವೋ ಅನಿಶ್ಚಿತವೆಂದು ತಿಳಿದು ಈ ಪವಿತ್ರ ಕ್ಷೇತ್ರವೆನಿಸಿದ ಬ್ರಾಹ್ಮಣ ಶರೀರದಲ್ಲಿ ತದ್ಯುಕ್ತವಾದ ಸಾಧನ ರೂಪ ಕರ್ಮಗಳನ್ನು ಮಾಡುತ್ತಾ ಶ್ರೀಹರಿ ಅನುಗ್ರಹದಿಂದ ಪುನಃ ವೈಷ್ಣವ ಜನ್ಮ ಅನುಗ್ರಹಿಸುವಂತೆ ಪ್ರಾರ್ಥಿಸಬೇಕು. ಆಯಿತು. ಹೀಗೆ ಪರಮಾತ್ಮನ ಕೃಪೆಯಿಂದ ನೂರು ವರ್ಷ ಜೀವಂತವಾಗಿರುತ್ತೇವೆ ಅಂತ ತಿಳಿದು ತಾವತ್ ಪರ್ಯಂತ ಸ್ವವಿಹಿತ ಕರ್ಮಾದಿಗಳನ್ನು (ದೇವರ ಪೂಜಾ, ಅಧ್ಯಯನ ಮನನ ದಾನ-ಧರ್ಮ ಇತ್ಯಾದಿ ನಿಷ್ಠಾ ಕರ್ಮಗಳ ಫಲವಾಗಿ) ಮಾಡಿ ಪರಮ ಪ್ರಸಾದವೆಂದು ಮಾಡಿದಾಗ ಕರ್ಮಾಚರಣೆ ಮಾಡುವಾಗ ಯತ್ಕಿಂತ್ ತಿಳಿಯದೇ ಮಾಡಿದ ಅಲ್ಪದೋಷಗಳಿಂದ ಪಾಪ ಲಭಿಸುವುದಿಲ್ಲ. ಹಾಗಲ್ಲದೇ ಕರ್ಮವೇ ಮಾಡದಿದ್ದಾಗ ಪಾಪಲೇಪವು ತಟ್ಟದೇ ಇರುವುದಿಲ್ಲ. ತಟ್ಟೇ ತಟ್ಟುವುದು. ಆದ್ದರಿಂದ ಸ್ವವಿಹಿತ ಕರ್ಮಾಚರಣೆ ಅವಶ್ಯ ಮಾಡಬೇಕೆಂದು ತಿಳಿಸುತ್ತದೆ. ಇಷ್ಟನ್ನು ಉಪನಿಷತ್ತಿನ ಮೊದಲ ಎರಡು ಮಂತ್ರಗಳು ತಿಳಿಸುತ್ತವೆ.

**ಉಪನಿಷತ್ ಮೂಲಮಂತ್ರ :**

ಮಂತ್ರ ೧

**ಈಶಾವಾಸ್ಯಮಿದಗುಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್ ।**
**ತೇನತ್ಯಕ್ತೇನ ಭುಂಜೀಥಾ ಮಾ ಗೃಧಃ ಕಸ್ಯಸ್ವಿದ್ ಧನಮ್ ॥**

ಮಂತ್ರ ೨

**ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇಚ್ಛತಗುಂ ಸಮಾಃ ।**
**ಏವಂ ತ್ವಮಿ ನಾನ್ಯಥೇತೋಽಸ್ತಿ ನ ಕರ್ಮಲಿಪ್ಯತೇ ನರೇ ॥**

**ವಿಶೇಷಾಂಶ : "ಈಶಾವಾಸ್ಯಮಿದುಗುಂಸರ್ವಂ"** ಎಂಬಲ್ಲಿ **ಇದಂಸರ್ವಂ** ಎಂದು ಸ್ಪಷ್ಟವಾಗಿ ಈ ಕಣ್ಣಿಗೆ ಕಾಣಿಸುವ ಪರಿದೃಶ್ಯಮಾನವಾದ ಜಗತ್ತು ಎಂದಾಗ ಸತ್ಯವಾದ ಜಗತ್ತೇ ಆಗಲಿ ಮಿಥ್ಯಾ ಅಂತ ಹೇಳಲು ಅವಕಾಶವೇ ಇರುವುದಿಲ್ಲ. ಇಂತಹ ಸತ್ಯ ಜಗತ್ತನ್ನು ಭಗವಂತ ಸೃಷ್ಟಿ ಮಾಡಿದನು ಎಂದೇ ಸ್ಪಷ್ಟ. ಇಂದ್ರಜಾಲಿಕನಂತೆ ಅಸತ್ಯ ಜಗತ್ತು ಎಂತಲೂ ಉಪಾದಿ ಕಾರಣ ಜಗತ್ತೆಂಬ ಅರ್ಥ ಬರುವುದಿಲ್ಲವೆಂಬುದನ್ನು ತಿಳಿಸುತ್ತದೆ.

ಇನ್ನು ಸತ್ಯ ಜಗತ್ತನ್ನು ಸೃಷ್ಟಿಸಿದನು ಆಗ ಈ ಜಗತ್ತು ಜಡವಾದ್ದರಿಂದ ಚೇಷ್ಟಾ ಪ್ರವೃತ್ತಿ ಹೊಂದಲು ಶ್ರೀಶನು ಜಗತ್ತಿನಲ್ಲಿ ತಾನೇ ಪ್ರವೇಶ ಮಾಡಿ ಜಗತ್ತಿಗೆ ಪ್ರವೃತ್ತಿ ಆಗುವಂತೆ ಮಾಡಿದನು. **ತತ್ಸೃಷ್ಟ್ವಾತದೇವಾನು ಪ್ರಾವಿಶತ್** ಜೀವಧಾರಿಗಳಿಗೆ ನಿತ್ಯ ಉಪಯುಕ್ತ ಭೋಗ ಸಾಮಗ್ರಿಗಳು ಜಡರೂಪ ಜಗತ್ತು ಕೊಡಲು ಅಸಾಮರ್ಥ್ಯವಾಗಬಾರದೆಂದು ಶ್ರೀರಮಣನು ಒಂದಂಶದಿಂದ ಜಗತ್ತಿನಲ್ಲಿ ಪ್ರವೇಶಿಸಿ ಪ್ರವೃತ್ತವಾಗುವಂತೆ ಮಾಡಿದನು. ಇಲ್ಲಿ ಜಗತ್ತು ಲಕ್ಷ್ಮೀ ಸ್ವರೂಪ. ಆಕೆ ಶ್ರೀಕೃಷ್ಣನ ಆದೇಶ ಅನುಗ್ರಹದಿಂದ ಶರೀರಧಾರಿಗಳಿಗೆ ನಿತ್ಯಯುಕ್ತ ಪದಾರ್ಥಗಳನ್ನು ಕರುಣಿಸುತ್ತಾಳೆ. ಆಗ ರಮಾದೇವಿಯೂ ಭಗವದಧೀನ ಅಸ್ವತಂತ್ರಳು ಎಂಬ ತತ್ವವು ತಿಳಿಸುತ್ತದೆ. ಹೀಗೆ ತಿಳಿಸಿ ಮಾಯಾವಾದಿಗಳ ಸಿದ್ಧಾಂತವನ್ನು ಶ್ರೀಮದಾಚಾರ್ಯರು ಖಂಡಿಸಿ ವಿಷಯ ತಿಳಿಸುವ ಪೂರ್ವದಲ್ಲೇ ವೇದ ಪುರುಷ ನಿರೂಪಿಸಿರುತ್ತಾನೆಂಬುದನ್ನು ತಿಳಿಸಲಾಗಿದೆ. ಒಟ್ಟು ಸೃಷ್ಟಿಸಲ್ಪಟ್ಟ ಜಗತ್ತು ಪರಮಾತ್ಮನ ಆವಾಸಸ್ಥಾನವಾಗಿರುತ್ತದೆ.

ಕ್ರೈಸ್ತ ಮತಾನುಸಾರಿ ಜಗತ್ತು ಇದ್ದಿಲ್ಲ God ನೋಡಿದನು Everywhere a void and darkness. Then he took a magic band and said "Let there be a world and the world came. Then he said. Let their be light. Light came. Let there a souls Jungle etc all of them came ಅಂತ Bible book of Genesisನಲ್ಲಿ ನಿರೂಪಿಸಿದೆ. ಇದು ಎಷ್ಟು ಅಪಸಿದ್ಧಾಂತ ಯುಕ್ತಿರಹಿತ. Beyond one's imagination and comprehension ಅನ್ನುವುದು ತಿಳಿಸುತ್ತದೆ. God saw ಎಂದಿದೆ. Godನ ಸ್ವರೂಪವೇ ನಿರ್ಧಾರವಾಗದೆ ರೂಪ ನಿರ್ಗುಣನಾದವನು ಹೇಗೆ



ನೋಡಿದ ? ಅಲ್ಲದೆ ಅಂತಹ God Magic Band ಮಾಂತ್ರಿಕನಂತೆ ದಂಡ ಹಿಡಿದು Space ನಲ್ಲಿ ಆಡಿಸಿ ಜಗತ್ತು ಬರಲಿ. ಬಂದಿತು. ಬೆಳಕು ಬರಲಿ. ಬೆಳಕಾಯಿತು ಎಂಬುದನ್ನು ತಿಳಿಸುತ್ತದೆ. ಮಂತ್ರವಾದಿಯಂತೆ He created from no where. ನನ್ನ ಗುರುಗಳು ಹೇಳುತ್ತಿದ್ದರು. Our God (ಬ್ರಹ್ಮ) is not a magician to create something from out of nothing. Something has to be created from out of something only. So their theory of creation is irresponsible and childish ಅಂತ ತಿಳಿಸಿ ಅಸತ್ ಅಂದರೆ ಪ್ರಕೃತಿ ಮೂಲಭೂತ ಅನಾದಿ ಪರಮಾತ್ಮನು ಅವುಗಳನ್ನು ಯಥಾಯೋಗ್ಯ ವಿನಿಮಯ ಮಾಡಿ ತಾನು ನಿಮಿತ್ತ ಕಾರಣನಾಗಿ ಸತ್ಯವಾದ ಜಗತ್ತನ್ನು ಸೃಷ್ಟಿಸಿದನು ಎಂದು, ಯುಕ್ತಿ ಪ್ರಾಮಣ್ಯವಾಗಿ ತಿಳಿಸಿ ಉಪನಿಷತ್ತಿನ ವಾಕ್ಯಕ್ಕೆ ಸಮೀಚೀನ ಅರ್ಥ ಮಾರ್ಗದರ್ಶನ ಮಾಡಿದವರೇ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರು.

**ಎಚ್ಚರದ ಮಂತ್ರ :** ಮೇಲೆ ತಿಳಿಸಿರುವ ಅಪಸಿದ್ಧಾಂತಗಳನ್ನು ತಿಳಿದು ಮಿಥ್ಯಾಜ್ಞಾನ ಪಡೆದು ಬ್ರಹ್ಮನು ನಿರ್ಗಣ ಉಪಾದಾನ ಕಾರಣ, ಅಸತ್ಯ ಜಗತ್ತು, ಇತ್ಯಾದಿಗಳನ್ನು ಉಪಾಸನೆ ಮಾಡಿದವರು ಎಂಥಾ ದುರ್ಗತಿಯನ್ನು ಪಡೆಯುತ್ತಾರೆಂದರೆ ಆ ದುಷ್ಟ ಜೀವರುಗಳಿಗೆ ಎಲ್ಲಿಯೂ ಸ್ವಲ್ಪವಾದರೂ ಸುಖವೆಂಬುದೇ ಇರದೆ ನಿತ್ಯ ದುಃಖಮಯವಾದ ತಮಸ್ಸೇ ಗತಿ ಆಗುವುದು ಎಂದು. ಏಕೆಂದರೆ ಆ ದೈತ್ಯ ಸ್ವಭಾವದವರು ಭಗವಂತನ ಅಸ್ತಿತ್ವವನ್ನೇ ತಿಳಿಯದೆ ನಿರ್ಗುಣ ಆಕಾರರಹಿತವೆಂದಾಗ ಸ್ವಾಮಿಯನ್ನು ಸಂಹಾರ ಮಾಡಿದರೆ ಯಾವ ನರಕಾದಿ ಅನರ್ಥ ಲೋಕಗಳಿಗೆ ಹೋಗುತ್ತಾರೆ. (ಬ್ರಹ್ಮನನ್ನು ಸಂಹರಿಸಲೂ ಆಗದು.) ಆದರೂ ವಿರುದ್ಧೋಪಾಸನೆ ಮಾಡಿದವರಿಗೆ ಸಿಗುವ ಫಲವನ್ನು ಸೂಚಿಸುವುದು.

ಮಂತ್ರ ೩

**ಅಸುರ್ಯಾನಾಮತೇ ಲೋಕಾ ಅಂಧೇನತಮಸಾಽಽವೃತಾಃ ।**
**ತಾಂಽಸ್ತೇ ಪ್ರೇತ್ಯಾಭಿಗಚ್ಛಂತಿ ಯೇ ಕೇ ಚಾತ್ಮಹನೋಜನಾಃ ॥**

ಅಸದುಪಾಸಕರು ಗಾಢಾಂಧಕಾರಮಯವಾದ ತಮಸ್ಸನ್ನು ಹೊಂದುತ್ತಾರೆ.

**ನಚರಮಂತ್ಯ ಹೋ ಅಸದುಪಾಸನಯಾತ್ಮಹನಃ**

**ಭಾಷ್ಯ :** ಮಹಾದುಃಖೈಕ ಹೇತುತ್ವಾತ್ ಪ್ರವೃತ್ತಾತ್ ಅಸುರೈಃಸ್ತಥಾ ।
ಅಸೂರ್ಯಾನಾಮತೇಲೋಕಾಃ ತಾನ್ಯಾಂತಿ ವಿಮುಖಾಹರಾ ॥

**ಖಂಡಾರ್ಥ:** ಸುಷ್ಟುರಮಣಂ ಸುರ್ಯಂ । ಸುಪೂರ್ವಸ್ಯರಮತೇ ಪ್ರತ್ಯಯಃ
ತದ್ದಿರುದ್ಧಾಯಸುರ್ಯಂ ಮಹಾದುಃಖಃ । ಅಸುರ್ಯ ಮೇಷ್ವ ಸ್ತೀತ್ಯಸುಯಾಃ।
ಮಹಾದುಃಖವತ್ವಾದಸೂರ್ಯಾಃ । ಅಸುರಪ್ರಾಪ್ಯತ್ವದ್ವಾಽಸುರ್ಯಾಃ ।
ಅಂಧೇನ ತಮಸಾ । ಅಂಧ ಯತೀತಿ ವೃತ್ತತ್ವಾತ್ ನಿಭಿಥಾಂಕಾರೇಣೇತ್ವರ್ಥಃ॥

**ವಿವರಣೆ :** ಭಗವಂತನ ವಿಷಯಕ ಜ್ಞಾನವಿಲ್ಲದವನು ನಿತ್ಯ ನರಕಕ್ಕೆ ಭಾಗಿಯಾಗುವನು ಎಂಬುದನ್ನು ಇಲ್ಲಿ ತಿಳಿಸಲಾಗಿದೆ. ಅಂದರೆ ಪರಮಾತ್ಮನನ್ನು ಅನ್ಯಥಾ ತಿಳಿದಿರುತ್ತಾರೋ ಮತ್ತು ವಿಪರೀತವಾಗಿ ತಿಳಿದಿರುತ್ತಾರೋ ಅವರೆಲ್ಲಾ ನರಕಕ್ಕೆ ಹೋಗುವರು. ಇಷ್ಟು ತಿಳಿಸಿ ಭಗವಂತನನ್ನು ಯಥಾರ್ಥವಾಗಿ ತಿಳಿಯಬೇಕು ಎಂದು ವಿವರಿಸಿ ಮುಂದಿನ ಮಂತ್ರದಿಂದ ಶ್ರೀಹರಿ ಸ್ವರೂಪ ನಿರೂಪಣೆ ಮಾಡಲಾಗಿದೆ.

**ಖಂಡಾರ್ಥ: ಇದಾ ನೀಂ ಪರಮಾತ್ಮ ತತ್ವಮುಪದಿಶತಿ ಅನೇಜದಿತ್ಯಾದಿಮಂತ್ರದ್ವಯೇಣ**

**ಅವತಾರಿಕಾ :** ಪರಮಾತ್ಮನನ್ನು ತಿಳಿಯುವುದು ಸುಲಭ ಸಾಧ್ಯವಲ್ಲ. ದುರ್ಜ್ಞೇಯನೂ ಸರ್ವೋತ್ತಮನೂ ಆಗಿರುತ್ತಾನೆ ಎನ್ನುವುದನ್ನು ತಿಳಿಸುವ ಮಂತ್ರ. ಮುಖ್ಯಪ್ರಾಣ ದೇವರಿಂದ ಯಥಾವತ್ತಾಗಿ ತಿಳಿಯಲ್ಪಟ್ಟಿರುತ್ತಾನೆ.

**ಮಂತ್ರ ೪**

**ಅನೇಜದೇಕಮ್ ಮನಸೋ ಜವೀಯೋ ನೈನದ್ದೇವಾ ಆಪ್ನುವನ್ ಪೂರ್ವಮರ್ಷತ್।**
**ತದ್ಧಾವತೋಽನ್ಯಾನತ್ಯೇತಿ ತಿಷ್ಠತ್ತಸ್ಮಿನ್ನಪೋಮಾತರಿಶ್ವಾ ದಧಾತಿ ॥**

**ವಿವರಣೆ :** ಶ್ರೀಹರಿಯು ಸರ್ವೋತ್ತಮನು. ಆದ್ದರಿಂದ ನಿರ್ಭಯನು ಸರ್ವಶ್ರೇಷ್ಠನು. ಮನಸ್ಸಿನ ವೇಗಕ್ಕಿಂತ ಮೀರಿದ ವೇಗವುಳ್ಳವನು. ಇಂದ್ರಾದಿ ದೇವತೆಗಳೂ ಸಹ ಶ್ರೀಶನನ್ನು ಪೂರ್ತಿಯಾಗಿ ತಿಳಿಯಲಾಗಿರುತ್ತಾರೆ. ಭಗವಂತನಾದರೂ ಸರ್ವಜ್ಞನಾದುದರಿಂದ ಎಲ್ಲವನ್ನು ಎಲ್ಲರ ಬಗ್ಗೆ ಸಂಪೂರ್ಣವಾಗಿ ತಿಳಿದಿರುತ್ತಾನೆ.

**''ಬಹೂನಿ ಮೇ ವ್ಯತೀತಾನಿ ಜನ್ಮಾನಿ ತವ ಚಾರ್ಜುನ ।**
**ತಾನ್ಯಹಂ ವೇದ ಸರ್ವಾಣಿ ನ ತ್ವಂ ವೇತ್ಥ ಪರಂತಪ ॥''** (ಗೀತಾ ೪-೫)

ಈ ಗೀತೆಯಲ್ಲಿ ಶ್ರೀಕೃಷ್ಣ ಪರಮಾತ್ಮನೂ ತಿಳಿಸಿರುತ್ತಾನೆ.

ಭಗವಂತನು ಸರ್ವತ್ರ ವ್ಯಾಪ್ತನಾದುದರಿಂದ ಅತೀ ವೇಗವಾಗಿ ಓಡುತ್ತಾನೆ. ಓಡುವವರಿಗೂ ಮೀರಿ ದಾಟಿಹೋಗುತ್ತಾನೆ. ಇಷ್ಟೊಂದು ಗುಣಗಳುಳ್ಳ ಪರಮಾತ್ಮನಲ್ಲಿ ಕರ್ಮಾಧ್ಯಕ್ಷನಾದ ಮುಖ್ಯಪ್ರಾಣದೇವರು ಸಮಸ್ತ ಜೀವರಾಶಿಗಳ ಕರ್ಮಫಲ (ಸತ್ಕರ್ಮ)ವನ್ನು ಪರಮಾತ್ಮನಲ್ಲಿ ಅರ್ಪಿಸುತ್ತಾರೆ.

**ವಿಶೇಷಾಂಶ :** ಈ ಮಂತ್ರದಲ್ಲಿ ಪರಮಾತ್ಮನು ನಿರ್ಭಯನು ಎನ್ನಲಾಗಿದೆ. **'ಅನೇಜಿತ್'** ಎಂದು ಜಗತ್ತಿನಲ್ಲಿ ನಿರ್ಭಯನು ಶ್ರೀಹರಿಯೊಬ್ಬನೇ. ಏಕೆಂದರೆ **(ಏಕಂ)** ಇವನೊಬ್ಬನೇ ಸರ್ವತಂತ್ರ ಸ್ವತಂತ್ರನು ಆಗಿರುವಾಗ ತನಗಿಂತ ಉತ್ತಮರು ಯಾರೂ ಇಲ್ಲದಿರುವಾಗ ಏಕೆ ಹೆದರಬೇಕು ?

**ಲಕ್ಷ್ಮೀಕಾಂತ ಸಮಂತತೋಽಪಿ(ವಿ)ಕಲಯನ್ ನೈವೇಶಿತುಸ್ತೇ ಸಮಂ**
**ಪಶ್ಯಾಮ್ಯುತ್ತಮವಸ್ತು ದೂರತರತೋಽಪಾಸ್ತಂ ರಸೋ ಯೋಽಷ್ಟಮಃ ।**

(ಹರಿವಾಯುಸ್ತುತಿ - ನರಸಿಂಹನಖಸ್ತುತಿ-೨)



ಅಲ್ಲದೇ ಇವನಿಗೆ ಎಲ್ಲರೂ ಹೆದರುತ್ತಾರೆ. **ಭಿಷಾಸ್ಮಾದ್ವಾತಃಪವತೆ ಭೀಷಾದೇತಿ ಸೂರ್ಯಃ । ಭೀಷಾದಿಂದ್ರಶ್ಚಾಗ್ನಿಶ್ಚ ಮೃತ್ಯುರ್ಧಾವತಿಪಂಚಮ** ಇತಿ ಚ. ಆದ್ದರಿಂದ ಇಂತಹ ಪರಮಾತ್ಮನನ್ನು ಯಾರೇ ಆಶ್ರಯಿಸಿದವರೂ ಸಹ ಭಯರಹಿತರಾಗುತ್ತಾರೆ. ಭಕ್ತಾಗ್ರಣಿ ಪ್ರಹ್ಲಾದರಾಜರು ನೃಸಿಂಹ ದೇವರ ಉಗ್ರರೂಪ ಕಂಡು ಹೆದರದೇ **''ರೂಪಂ ನೃಸಿಂಹವಿಭಯಾಯ ಜನಾಃ ಸ್ಮರಂತಿ''** ಎಂದು ಹೇಳುತ್ತಾರೆ.

ಆಯಿತು. ಪರಮಾತ್ಮನು ಸರ್ವವ್ಯಾಪ್ತನು. ಸರ್ವತ್ರ ಇರುತ್ತಾನೆ. ಆದರೆ ಆ ಸ್ವಾಮಿ ಅವ್ಯಕ್ತ ಕಾಣುವುದಿಲ್ಲವೆಂದ ಮೇಲೆ ನಮಗೂ ಅವನಿಗೂ ಸಂಬಂಧ ಹೇಗಾಗುತ್ತದೆ ? ಇಂತಹ ಪ್ರಶ್ನೆಗೆ ಚಿಂತಿಸಲು ಬೇಡ. ಸಮುದ್ರದಂತೆ ಎಲ್ಲೆಡೆಯಲ್ಲಿಯೂ ಹಿಂದೆ ಮುಂದೆ ಎಡ ಬಲಕ್ಕೂ ಒಳಗೂ ಹೊರಗೂ ಇರುವ ಸ್ವಾಮಿಯ ಮಹಿಮೆ ತಿಳಿಸಲು ತನ್ನ ಪುತ್ರನಾದ ವಾಯುದೇವ(ಪ್ರಾಣದೇವ)ರನ್ನು ಸೃಷ್ಟಿಸಿದ್ದಾನೆ. ಈ ಪ್ರಾಣದೇವರೆಂಬ ಕೊಂಡಿ(ಸೂತ್ರ)ಯಿಂದ ನಮಗೂ ಭಗವಂತನಿಗೂ ಸಂಬಂಧ ಉಂಟು ಮಾಡಿರುತ್ತಾನೆ. ಕಾರಣ ಪ್ರಾಣದೇವರ ಮೇಲೆ ಭಗವಂತನ ವಿಶೇಷ ಅನುಗ್ರಹವಿದೆ.

ಶ್ರೀಹರಿಯಾಜ್ಞೆಯಂತೆ ಪ್ರಾಣದೇವರು ನಾವು ಮಾಡಿದ ಸತ್ಕರ್ಮಗಳನ್ನು ಮಾಡಿಸುತ್ತಾನೆ. ಕಾಣುವುದು, ಕೇಳುವುದು, ನುಡಿಸುವುದು, ರುಚಿನೋಡಿಸುವುದು ಇತ್ಯಾದಿ ಕರ್ಮಗಳನ್ನು ಮಾಡುತ್ತೇವೆ. ಇವೆಲ್ಲಾ ಆಯಾ ಅಭಿಮಾನಿ ದೇವತೆಗಳು ನಮ್ಮ ಶರೀರದಲ್ಲಿದ್ದು ಸಕಲ ಕರ್ಮಾಧ್ಯಕ್ಷರಾಗಿರುತ್ತಾರೆ. ಈ ದೇವತೆಗಳ ವ್ಯಾಪಾರ ಪ್ರಾಣದೇವರು ನಮ್ಮ ಶರೀರದಲ್ಲಿದ್ದಾಗ ಮಾತ್ರ ನಡೆಯುತ್ತದೆ. ಆ ಪ್ರಾಣದೇವನು ದೇಹ ಬಿಟ್ಟು ಹೊರಗೆ ಹೊರಟನೆಂದರೆ ಆ ದೇವತೆಗಳು ಇದ್ದರೂ ಶರೀರ ವ್ಯಾಪಾರ ನಡೆಯುವುದಿಲ್ಲ. ಆದ್ದರಿಂದ ಮುಖ್ಯಪ್ರಾಣದೇವರು ನಾವು ಮಾಡಿದ ಸಮಸ್ತ ಕರ್ಮಗಳ ಫಲವನ್ನು ಭಗವಂತನಿಗೆ ಅರ್ಪಿಸುತ್ತಾರೆ. ಶ್ರೀಹರಿಯು ಅನುಗ್ರಹಿಸುವಂತೆ ನಮ್ಮ ಪರವಾಗಿ ಪ್ರಾರ್ಥಿಸುತ್ತಾರೆ.

**''ಮುಖ್ಯಪ್ರಾಣ ತೊಲಗಲೂ ಪೆಣವೆಂದು ಪೇಳ್ವರು ಬುಧಜನರು''** ಎಂದು ಶ್ರೀಪಾದರಾಜರು ತಿಳಿಸಲಿಲ್ಲವೇ ? ತಸ್ಮಾತ್ ನಾವು ಜೀವೋತ್ತಮರಾದ ಮುಖ್ಯಪ್ರಾಣದೇವರನ್ನು ಆಶ್ರಯಿಸಿ ಅವರ ಉದಾರ ಕಾರುಣ್ಯಕ್ಕೆ ಪಾತ್ರರಾದರೆ ಸರ್ವೋತ್ತಮನಾದ ಪರಮಾತ್ಮನ ದರ್ಶನ ಪಡೆಯಲು ಬರುವುದು.

ಭಗವಂತನು ಸರ್ವಪ್ರಾಣಗಳಿಗೆ ಆಶ್ರಯದಾತನು, ಸರ್ವತ್ರವ್ಯಾಪ್ತನು, ಪ್ರೇರಕನಾಗಿ ಜೀವರುಗಳ ಹೃದಯ ಮಂಟಪದಲ್ಲಿಯೂ ಹೊರಗೂ ಎಂಬ ನಿಶ್ಚಿತ ಬುದ್ಧಿಯಿಂದ ತಿಳಿದವನು. ತನ್ನ ಬಗ್ಗೆ, ತನ್ನ ರಕ್ಷಣೆಯ ಬಗ್ಗೆ ಸ್ವಲ್ಪವೂ ಕಾಳಜಿ ಮಾಡುವುದಿಲ್ಲ. ಮದಂತರ್ಯಾಮಿ ಶ್ರೀಲಕ್ಷ್ಮೀರಮಣನು ಕಾಪಾಡೇ ಕಾಪಾಡುತ್ತಾನೆ. ನಾನೇಕೆ ಪ್ರಯತ್ನಿಸಬೇಕು ?

**ಆತ್ಮಸಮರ್ಪಣೆ = ರಕ್ಷತೀತಿ ನಿಶ್ಚಯಃ**

ಇದಕ್ಕೆ ವ್ಯತಿರೇಕವಾಗಿ ನಾನು ಸಮರ್ಥ. ನನ್ನ ರಕ್ಷಣೆ ನಾನು ಮಾಡಿಕೊಳ್ಳುತ್ತೇನೆ ಅಂದವನನ್ನು ನೋಡಿ. ಹಾಗಾದರೆ ಮಾಡಿಕೋ. ನಾನೇಕೆ ಬೇಕು ಎಂದು ಪರಮಾತ್ಮ ಹಾಸ್ಯ ಮಾಡುತ್ತಾನೆ. ಅದಕ್ಕೇ ಶ್ರೀಶನನ್ನು ಶರಣು ಹೋಗಬೇಕು. ಸಂಪೂರ್ಣ ಭರವಸೆ ಇದ್ದಿತೆಂದರೆ ರಕ್ಷಿಸೇ ರಕ್ಷಿಸುತ್ತಾನೆ. ನಮಗೆ ಆ ರೀತಿ ದೃಢ ವಿಶ್ವಾಸವಿರಬೇಕು ಎಂಬುದನ್ನು ತಿಳಿಸಲಾಗಿದೆ.

**ಮಂತ್ರ ೬**

**ಯಸ್ತು ಸರ್ವಾಣಿ ಭೂತಾನ್ಯಾತ್ಮನ್ಯೇವಾನುಪಶ್ಯತಿ ।**
**ಸರ್ವಭೂತೇಷು ಚಾತ್ಮಾನಮ್ ತತೋ ನ ವಿಜುಗುಪ್ಸತೆ ॥೬॥**

**ವಿಶೇಷ :** ಈ ಮಂತ್ರದಲ್ಲಿ ಅಧಿಕರಣ ಕಾರಕವು ಸಪ್ತಮೀ ವಿಭಕ್ತಿಯಲ್ಲಿದೆ. ಇದರಿಂದ ಬ್ರಹ್ಮಜೀವೈಕ್ಯವನ್ನು ನಿರಾಕರಿಸಿ ಆಶ್ರಯ ಆಶ್ರಯೀ ಭಾವವನ್ನು ಸ್ಪಷ್ಟವಾಗಿ ವ್ಯಕ್ತಪಡಿಸುತ್ತದೆ. (ನಾವು ಅವನ ಆಶ್ರಯವನ್ನು ಬೇಡುತ್ತೇವೆ. ಶ್ರೀಹರಿಯಾದರೋ ನಮ್ಮೆಲ್ಲರಿಗೆ ಆಶ್ರಯ ದಾತನು.)

ಧೃತರಾಷ್ಟ್ರನ ತುಂಬು ಸಭೆಯಲ್ಲಿ ಸತೀ ಶಿರೋಮಣಿ ದ್ರೌಪದಿಯ ಮಾನಭಂಗ ಮಾಡುತ್ತಿದ್ದಾಗ ಪತಿಗಳೈವರಿದ್ದರೂ ತಡೆಯದೇ ಕುಳಿತಿದ್ದರು. ಅವರು ಅಸಮರ್ಥರೆಂದು ಭಾವಿಸಬಾರದು. ಆದರೂ ಆ ಸಮಯದಲ್ಲಿ ಅವರೆಲ್ಲಾ ಶ್ರೀಕೃಷ್ಣ ಭಗವಂತನ ಸಂಕಲ್ಪವೆಂದು. ಆ ಕಾಲದಲ್ಲಿ ಪೂರ್ಣ ನಂಬಿಕೆಯುಳ್ಳವರಾಗಿದ್ದರು. (ರಕ್ಷತೀತ್ಯೇವ ವಿಶ್ವಾಸಃ) ಶ್ರೀಹರಿ ನಂಬಿದ ಭಕ್ತರನ್ನು ಎಂದಿಗೂ ಕೈಬಿಡುವುದಿಲ್ಲ.

ಯಾದವಾರ್ಯರು ಸದಾ ಪಾಠ ಪ್ರವಚನದಲ್ಲೇ ಲಗ್ನರಾಗಿದ್ದರು. ಸಂಸಾರದ ಬಗ್ಗೆ ಕಿಂಚಿತ್ ಯೋಚನೆ ಮಾಡಲಿಲ್ಲ. ತಮ್ಮ ರಕ್ಷಣೆಯ ಯೋಚನೆಯನ್ನೂ ಮಾಡಲಿಲ್ಲ. ಅಂತೆಯೇ ಸ್ವವರ್ಣಾಶ್ರಮೋಚಿತ ಕರ್ಮಗಳನ್ನು ಆಚರಿಸುತ್ತಾ ಶ್ರೀಶನ ರಕ್ಷಣೆಯಲ್ಲಿ ಸದಾ ಸಂಪೂರ್ಣ ವಿಶ್ವಾಸವಿಡಬೇಕು.

ಹಿಂದಿನ ಮಂತ್ರದಲ್ಲಿ ತಿಳಿಸಿದಂತೆ ಪರಮಾತ್ಮನ ರೂಪವನ್ನು ತಿಳಿದು ಸರ್ವತ್ರವ್ಯಾಪ್ತ ಸರ್ವಾಂತರ್ಯಾಮಿ ಎಂದು ತಿಳಿದ ಯೋಗ್ಯ ಸಾಧಕನಿಗೆ ಸಿಗುವ ಫಲವನ್ನು ಇನ್ನಷ್ಟು ವಿಶೇಷವಾಗಿ ವಿವರಿಸಲಾಗಿದೆ.

**ಮಂತ್ರ ೭**

**ಯಸ್ಮಿನ್ ಸರ್ವಾಣಿ ಭೂತಾನಿ ಆತ್ಮೈವಾಭೂದ್ ವಿಜಾನತಃ ।**
**ತತ್ರಕೋ ಮೋಹಃ ಕಃ ಶೋಕಃ ಏಕತ್ವಮನುಪಶ್ಯತಃ**

ಈ ಮಂತ್ರದಲ್ಲಿ **''ಏಕತ್ವಮನುಪಶ್ಯತಃ''** ಎಂದಿರುವುದನ್ನು ಜೀವಬ್ರಹ್ಮೈಕ್ಯ ಸೂಚಿಸಿದಂತೆ ಕಾಣುತ್ತೆ. ಈ ಅರ್ಥವು ಸ್ವವ್ಯಾಹತಿ ಆಗಿರುತ್ತದೆ. ವಾಕ್ಯಾರಂಭದಲ್ಲಿ



**''ಯಸ್ಮಿನ್ ಸರ್ವಾಣಿ ಭೂತಾನಿ''** ಎಂಬಲ್ಲಿಯೂ ಸಪ್ತಮೀ ವಿಭಕ್ತಿ ಪ್ರಯೋಗವಿದೆ. ಸರ್ವಭೂತಗಳಲ್ಲಿ ಎಂದು ಸ್ಪಷ್ಟವಿರುವಾಗ ಬ್ರಹ್ಮೈಕ್ಯ ಭಾವವು ಇರುವುದಿಲ್ಲ. ಏಕೆಂದರೆ ಇಲ್ಲಿಯೂ ಅಧಿಕರಣ ಕಾರಕವಿದೆ. ಆಧಾರಾಧೇಯ ಭಾವ ಸಂಬಂಧವಿದೆ ಎಂದು ತಿಳಿಯಬೇಕು. ಪರಮಾತ್ಮನು ಸಮಸ್ತ ಭೂತ ಆಧಾರಕನು. ಜೀವರುಗಳು ಆಧೇಯರೆಂಬ ಭೇದವಿರುವುದು.

ಅಲ್ಲದೆ ಉಪನಿಷತ್ತಿನ ಪ್ರಾರಂಭದಲ್ಲಿ ಕೊನೆಗೂ ಉಪಕ್ರಮ ಉಪಸಂಹಾರಗಳಲ್ಲಿ **''ಈಶಾವಾಸ್ಯಮಿದಂಸರ್ವಂ''** ಎಂದಿರುವುದು. ಶ್ರೀಹರಿಯೊಬ್ಬನೇ ಈಶನು ಉಳಿದವರೆಲ್ಲಾ ಭೃತ್ಯರು ಎನ್ನುವುದು ಸಿದ್ಧಪಡಿಸುತ್ತದೆ. ಸ್ವಾಮಿ ಭೃತ್ಯ ಭಾವ ಕೊನೆಗೆ **ನಮಃ ಉಕ್ತಿಂ ವಿಧೇಯ** ಎಂದು ಕಿಂಕರರಾದ ನಾವು ಸರ್ವೇಶನಾದ ಸ್ವಾಮಿಗೆ ನಮಸ್ಕರಿಸುತ್ತೇವೆ ಎಂದಿರುವುದು. ಎಲ್ಲಿಯೂ ಜೀವಬ್ರಹ್ಮ ಅಭೇದ ಅಂಶವೂ ಕಾಣಲಾಗದು.

**ಎಲ್ಲ ಒಂದೇ ಎಂಬ ಖುಲ್ಲ ಮಾನವ ನಿನ್ನ ।**
**ವಲ್ಲಭೇಯ ಬೆರೆದು ಸಂತಾನ । ಸಂತಾನ ಪಡೆವೇಕೆ ।**
**ಇಲ್ಲವೇ ಜನನಿ ಭಗಿನಿಯರು** (ಜಗನ್ನಾಥದಾಸರ ತತ್ವಸುವ್ವಾಲಿ)

ಜ್ಞಾನಿಯು ಭಗವದನುಗ್ರಹದಿಂದ ಸ್ವಾರೂಪ್ಯಾದಿ ಮೋಕ್ಷಗಳನ್ನು ಪಡೆದಾಗ (ಪಡೆಯುವರೆಂಬ) ವಿಷಯ ತಿಳಿದು ಏಕೆ ಶೋಕ ಪಡಬೇಕು. ಮೋಹವೂ ಪಡೆಯಬಾರದು ಎಂಬ ಅಂಶವನ್ನು ಇಲ್ಲಿ ತಿಳಿಸಲಾಗುವುದು.

**ಮಂತ್ರ ೮**

**ಸಪರ್ಯಗಾಚ್ಛುಕ್ರಮಕಾಯಮಸ್ರಾವ್ರಣಂ ಮಸ್ನಾವಿರಂ ಶುದ್ಧಮಪಾಪ ವಿದ್ಧಮ್ ।**
**ಕವಿರ್ಮನೀಷಿ ಪರಿಭೂಃ ಸ್ವಯಂಭೂರ್ಯಾಥಾತಥ್ಯತೋಽರ್ಥಾನ್**
**ವ್ಯದಧಾಚ್ಛಾಶ್ವತೀಭ್ಯಃ ಸಮಾಭ್ಯಃ ॥**

ಈ ಮಂತ್ರದಿಂದ ಮಾನವ ಶೋಕಮೋಹಾದಿಗಳು ಭಗವಂತನ ಜ್ಞಾನ ಅನುಗ್ರಹದಿಂದ ನಾಶವಾಗುವುದು ಎನ್ನುವುದನ್ನು ತಿಳಿಸುತ್ತದೆ.

**ವಿವರಣೆ :** ಸಾಮಾನ್ಯ ಮಾನವ ದೇಹದಲ್ಲಿ ಹಾಗೂ ಲಿಂಗ ದೇಹ ರಹಿತನಾದ (ಅಕಾಯಂ = ಶರೀರವೇ ಇಲ್ಲದೆ ನಿರ್ಗುಣನು ಎಂಬ ತಪ್ಪರ್ಥವನ್ನು ಖಂಡಿಸುತ್ತಾ) ಶ್ರೀಹರಿಯು ಅಪ್ರಾಕೃತ ದೇಹವುಳ್ಳವನು ಎಂದೂ ಆನಂದಾದಿ ಜ್ಞಾನ ಪೂರ್ಣನು. ಸ್ಥೂಲದೇಹರಹಿತನು (ಪಂಚಧಾತು ಪಂಚಭೌತಿಕ ಶರೀರ ರಹಿತನು). ಅತ್ಯಂತ ಪವಿತ್ರನು, ನಿರ್ದೋಷನು ಆದ ಭಗವಂತನನ್ನು ಹೊಂದಿದವನಿಗೆ ಶೋಕ ಮೋಹಾದಿಗಳುಂಟಾಗುವುದಿಲ್ಲ. ಇಂತಹ ಅಪ್ರಾಕೃತ ಶರೀರವುಳ್ಳವನಾದ್ದರಿಂದ ಅವನು ಸರ್ವಜ್ಞನು. ಸಕಲರ ಮನಃಪ್ರೇರಕನು ಎಲ್ಲವನ್ನೂ ತನ್ನ ಹಿಡಿತದಲ್ಲಿಟ್ಟುಕೊಂಡಿರುವನು.

ತಾನು ಮಾತ್ರ ಯಾರ ವಶ ಆಶ್ರಯಿಸದೇ ಸ್ವತಂತ್ರನಾಗಿಯೇ ಇರುತ್ತಾನೆ. ಇಷ್ಟೊಂದು ಗುಣವಿಶಿಷ್ಠನಾದ ನಾರಾಯಣನ ಅನಾದಿಕಾಲದಿಂದ ಸತ್ಯವಾದ ಯಥಾರ್ಥವಾದ ವಸ್ತು (ಜಗತ್ತನ್ನು) ನಿರ್ಮಾಣ ಮಾಡಿರುತ್ತಾನೆ.

ಈ ಮಂತ್ರಕ್ಕೆ ಮಾಯಾವಾದಿಗಳ ವಿವರಣೆ ನೋಡೋಣ. **"ಶುಕ್ರಂ ಅಕಾಯಂ"** ಬ್ರಹ್ಮನು ಶರೀರಹೀನನು ಅಕ್ಷತ ನಿರ್ಮಲ **ಅಪಾಪಹತ ಕ್ರಾಂತದರ್ಶಿ ಕರ್ಮಫಲ** ಸಾಧನಾದಿಗಳಿಗನು ಸರಿಯಾಗಿ ಕರ್ತವ್ಯ ಪದಾರ್ಥಗಳನ್ನು ವಿಭಾಗ ಮಾಡಿದನು. ಸಂವತ್ಸರನಾಮಕ ಪ್ರಜಾಪತಿಗಳಿಗೆ ಕರ್ತವ್ಯವನ್ನೂ ಹಂಚಿದನು ಎಂಬ ಅರ್ಥವು ಎಷ್ಟೊಂದು ದೋಷಯುಕ್ತವಾಗಿದೆ ಅಂದರೆ ಸ್ವವ್ಯಾಹತ ಪರಸ್ಪರ ವಿರುದ್ಧ ಅಪ್ರಮಾಣವಾಗಿರುವುದು. ಶರೀರವೇ ಇಲ್ಲದ ನಿರ್ಗುಣನಾದ ಬ್ರಹ್ಮನು ಹೇಗೆ ತಾನೆ ಸರ್ವಜ್ಞನಾಗಿ ಕರ್ಮಫಲಗಳನ್ನು ಹಂಚಲು ಆಗುತ್ತಾನೆ. ಹಿಂದಿನ ಮಂತ್ರಗಳಲ್ಲಿ ಬ್ರಹ್ಮನ ಸರ್ವಜ್ಞತ್ವ ಕರ್ತೃತ್ವಗಳು ಗುಣವೇ ಆಗಿರುವಾಗ, ನಿರ್ಗುಣತ್ವವು ಹೇಗೆ ಕೂಡುತ್ತದೆ. ಮೇಲಾಗಿ ಬ್ರಹ್ಮ ಶಬ್ದ ಪ್ರಯೋಗ ಗುಣಪೂರ್ಣನೆಂಬ ಅರ್ಥಸ್ಪಷ್ಟವಾಗಿ ತಿಳಿಸಿ ತಕ್ಷಣದಲ್ಲೇ ನಿರ್ಗುಣನು ಅಂದಿರುವುದು Believes his own words ಆಗುವುದು. ಇಂತಹ ಅಪವ್ಯಾಖ್ಯಾನವನ್ನೂ ಆಚಾರ್ಯ ಶ್ರೀಮಧ್ವರು ಖಂಡಿಸಿದ್ದಾರೆ. ವರಾಹ ಪುರಾಣದಲ್ಲಿ ತಿಳಿಸಿದ್ದ ವಾಕ್ಯಗಳನ್ನು ಉದಾಹರಿಸಿ ಪ್ರಾಮಣ್ಯವಾಗಿ ವಿವರಿಸಿದ್ದಾರೆ (ಭಾಷ್ಯ ನೋಡಬೇಕು).

**ವಿಶೇಷಾಂಶ :** ಸ್ವಯಂಭೂ ಶಬ್ದವಾಚ್ಯನಾಗಿದ್ದಾನೆ. ಪ್ರವಾಹತಃ ನಿತ್ಯವಾದ ಸತ್ಯವಾದ ಈ ಪರಿದೃಶ್ಯಮಾನವಾದ ಜಗತ್ತನ್ನು ಅನಾದ್ಯನಂತ ಕಾಲದಿಂದ ಸೃಷ್ಟಿಸಿದನು ಎಂದಾಗ ಬ್ರಹ್ಮನು ಸಾಕಾರನಾಗಿರುವನು. ಸಚ್ಚಿದಾನಂದ ಸ್ವರೂಪನ ಅಂಗಾಂಗಗಳು ಚಿದಾನಂದಾತ್ಮಕವು. ಅವನ ಸೃಷ್ಟಿ ತನ್ನ ಸಂಕಲ್ಪಾನುಸಾರ ಸತ್ಯವೇ ಆಗಿರುತ್ತದೆ. ಜಗತ್ತು ಮಾಯಾಕಲ್ಪಿತವಲ್ಲವೆಂದ ಉಪನಿಷತ್ತು **"ಯಥಾತಥ್ಯತ"** ಎಂದು ತಿಳಿಸಿರುವಾಗ ಜಗತ್ತು ಮಿಥ್ಯಾ ಎಂದು ತಿಳಿಸಿರುವುದು ಅಪ್ರಮಾಣವೆಂದು ಖಂಡಿಸಲಾಗಿದೆ. **(ಯಥಾಪೂರ್ವಂ ಅಕಲ್ಪಯತ)** ಸೃಷ್ಟಿಯು ಅನಾದ್ಯನಂತ ಕಾಲದಿಂದ ಪ್ರವಾಹತಃ ಸತ್ಯವಾಗಿಯೇ ಇರುವುದು. **(ನಿತ್ಯಾನಿತ್ಯ ಜಗದ್ಧಾತ್ರೇ)** ಅವನು ಅಪ್ರಾಕೃತ ಶರೀರ ಸಹಿತನು ಎಂಬುದು ಸ್ಪಷ್ಟವು.

ಇಷ್ಟು ತಿಳಿಸಿ ಭಗವಂತನ ವಿಷಯಕ ಜ್ಞಾನ ಪಡೆಯಬೇಕು. ಈ ವಿಷಯದಲ್ಲಿ ದಾಕ್ಷಿಣ್ಯವಿರಬಾರದು. ಅದೂ ಸರಿ, ಇದೂ ಸರಿ ಎಂಬ ಸಮ್ಮತಿ(Compromise)ಗೆ ಎಳ್ಳಷ್ಟು ಅವಕಾಶವಿರಬಾರದು. ಸರ್ವೋತ್ತಮತ್ವವು ನಾರಾಯಣನಲ್ಲೇ ಇರಬೇಕು. ಅನ್ಯರಾದ ಬ್ರಹ್ಮ ರುದ್ರ ಇಂದ್ರಾದಿಗಳಲ್ಲಿ ಕೂಡುವುದಿಲ್ಲವೆಂಬ ಅಂಶವು ತಿಳಿಸಲಾಗಿದೆ. ತತ್ವಜ್ಞಾನ ಹೊಂದುವುದರ ಜೊತೆಗೆ ಅವಿವಿದ್ಯಾ ಜ್ಞಾನವನ್ನು ನಿಂದಿಸುವುದೂ ಅವಶ್ಯ.



**ಮಂತ್ರ ೯**

**ಅಂಧಂತಮಃ ಪ್ರವಿಶ್ಯಂತಿ ಯೇಽವಿದ್ಯಾಂ ಉಪಾಸತೇ**
**ತತೋಭೂಯ ಇವ ತೇ ತಮೋ ಯ ಉ ವಿದ್ಯಾಯಾಂ ರತಾಃ**

**ವಿವರಣೆ :** ಸಮೀಚೀನ ತತ್ವಜ್ಞಾನ ಪಡೆಯಬೇಕು. ಅದು ಬಿಟ್ಟು ಮಿಥ್ಯಾ ಜ್ಞಾನದಲ್ಲೇ ಆಸಕ್ತಿ ತೋರಿಸಿದವನು ನಿತ್ಯ ದುಃಖಕರವಾದ ಅಂಧಃ ತಮಸ್ಸನ್ನು ಹೊಂದುತ್ತಾನೆ.

ಅಂದರೆ ಮಿಥ್ಯಾ ಜ್ಞಾನವನ್ನು ಏಕೆ ಖಂಡಿಸಬೇಕು. ನಾನು ತತ್ವಜ್ಞಾನವನ್ನು ಪಡೆದು ಅದರಂತೆ ಉಪಾಸನೆ ಮಾಡುತ್ತೇನೆ. ಅಂದರೆ ಇಂತಹ ಮಾತುಗಳು ಅಪ್ರಮಾಣ. ತತ್ವಜ್ಞಾನ ಸ್ಥಿರವಾಗಿ ನಿಲ್ಲಬೇಕಾದರೆ, ಮಾಯಾವಾದಿಗಳ ಮತದಲ್ಲಿ ಮಿಥ್ಯಾಜ್ಞಾನವಿದೆ ಅಂತ ತಿಳಿದು ಇದರಿಂದ ನಿತ್ಯ ನರಕವೇ ಲಭಿಸುವುದು. ಶ್ರೀಮದಾಚಾರ್ಯರು ಸರ್ವಜ್ಞರು. ಅದ್ವೈತ, ವಿಶಿಷ್ಟಾದ್ವೈತ ಮತಗಳನ್ನು ತಿಳಿದಿದ್ದರಲ್ಲವೇ. ಅದರಲ್ಲಿ ಪೊಳ್ಳು ಇರುವುದು ಎಂದು ತೋರಿಸಿ ಖಂಡಿಸಿರುತ್ತಾರೆ. ಹಾಗೇ ಶ್ರೀ ಜಯತೀರ್ಥರು ಶ್ರೀಮನ್ನ್ಯಾಯಸುಧಾ ಗ್ರಂಥದಲ್ಲಿ **"ಪಂಚಾಖ್ಯಾತಿವಾದ"** ಪ್ರಕರಣದಲ್ಲಿ ಎಷ್ಟೊಂದು ಸಿದ್ಧಾಂತಗಳನ್ನು ಉಲ್ಲೇಖಿಸಿ ಖಂಡಿಸಿರುವರು ಅಂದಾಗ ಅವರು ಆ ಸಿದ್ಧಾಂತಗಳನ್ನು ತುಲನಾತ್ಮಕ ದೃಷ್ಟಿಯಿಂದ ನೋಡಿದ್ದರೆಂಬುದು ತಿಳಿದು ಬರುತ್ತದೆ. ಹೀಗಿರುವಾಗ ಅಪಸಿದ್ಧಾಂತವನ್ನು ಖಂಡಿಸಿ (ನಿಂದಿಸಿ) ನಿರಾಕರಿಸಬೇಕು ಎಂಬುದನ್ನು ತಿಳಿಸುತ್ತದೆ.

ಖಂಡನ ಮಂಡನೆಗಳು ವೈಚಾರಿಕ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿರಬೇಕೇ ಹೊರತು ವೈಯುಕ್ತಿಕವಾಗಿ (character assassination) ನಿಂದಿಸುವುದು ದ್ವೇಷಿಸುವುದು ಸರ್ವಥಾ ಕೂಡದು. ಶ್ರೀಮದಾಚಾರ್ಯರು, ಜಯತೀರ್ಥರು, ಶ್ರೀಗುರುರಾಜರ ಗ್ರಂಥಗಳಲ್ಲಿ ಎಲ್ಲಿಯೂ ವೈಯಕ್ತಿಕವಾಗಿ ನಿಂದಿಸಿರುವುದನ್ನು ಕಂಡುಬರುವುದಿಲ್ಲ. **"ಅನ್ಯೈಃ ಕೇನಚಿತ್"** ಎಂದೇ ಗೂಢವಾಗಿ ತಿಳಿಸಿರುತ್ತಾರೆ.

**ವಿಶೇಷಾಂಶ :** ತತ್ವಜ್ಞಾನವನ್ನು ಸಿದ್ಧಾಂತವನ್ನು ಮಂಡಿಸುವಾಗ ಯಾರೇ ವಿರೋಧ ಮಾಡಿದರೂ ಉಲ್ಲೇಖಿಸಬಾರದು. ಸತ್ಸಿಂದ್ಧಾಂತವನ್ನು ತಿಳಿಸಲು ಧೈರ್ಯಬೇಕು. ಇದರಿಂದ ಅಂಧ ವಿಶ್ವಾಸವನ್ನು ನಂಬದೇ ಇರಲು ಶುದ್ಧ ವಿಚಾರ ಸ್ವಚ್ಛ ವಾತಾವರಣದಲ್ಲಿ ಬದುಕಲು ಆಗುವುದು. ಈ ಮಂತ್ರ ಮಾರ್ಗದರ್ಶಿಯಾಗಿರುವುದು.

ಶ್ರೀ ಶಂಕರಾಚಾರ್ಯರ ಮತವು ಹೇಯವೇ ನಿಜ. ಆದರೆ ಯಾರೋ ಹೇಳಿದ ಉಪನ್ಯಾಸ ಕೇಳಿ ಅವರನ್ನು ದ್ವೇಷಿಸಬಾರದು. ಅವರು ಮಾಯಾವಾದ ಸಾರಾಂಶವೇನೆಂಬುದನ್ನು ಸ್ವಲ್ಪ ಮಟ್ಟಿಗಾದರೂ ಅರಿತಿದ್ದರೆ ಶ್ರೀಮದಾಚಾರ್ಯರ ತತ್ವವಾದ ಅಧ್ಯಯನ ಮಾಡಿದ ಮೇಲೆ ಮಾಯಾವಾದವು ಎಷ್ಟು ಅಪ್ರಮಾಣ ಯುಕ್ತಿಗಳಿಗೆ ವಿರುದ್ಧವೆಂದು ತಿಳಿಯಬೇಕು.

ಕೇವಲ ಖಂಡಿಸುವುದು ಸರಿಯಲ್ಲ. ಆಗಲೇ ತಿಳಿಸಿದಂತೆ ಖಂಡಿಸುವುದು

ಶ್ರೀವೇದವ್ಯಾಸದೇವರ ಅಭಿಪ್ರಾಯಕ್ಕೆ ವಿರುದ್ಧವಾಗಿ ಅರ್ಥೈಸುವುದು ಶ್ರೇಯಸ್ಸಿಗೆ ಕಾರಣವಲ್ಲಾ ಎಂದು ತಿಳಿಯಬೇಕು.

ಹೀಗೆ ತತ್ವವಾದದ ಜ್ಞಾನವು ಜ್ಞಾನಿಗಳಿಗೆ ಸುಖಪ್ರಾಪ್ತಿ ಆಗಬೇಕಿದ್ದರೆ **ದುಃಖ ನಿವೃತ್ತಿ** ಆಗಬೇಕು. ಈ ರೀತಿ ದ್ವಿವಿಧ ಫಲವು ಮೋಕ್ಷಕ್ಕೆ ಹೇತುವಾಗುವುದು. ಅಲ್ಲದೇ ಅನ್ಯಥಾ ಜ್ಞಾನವನ್ನು ನಿಂದಿಸುವುದು ತಿರಸ್ಕರಿಸುವುದು ಅವಶ್ಯಕತೆಯನ್ನು ಮುಂದಿನ ಮಂತ್ರವು ತಿಳಿಸುವುದು.

**ಮಂತ್ರ ೧೦**

**ಅನ್ಯದೇವಾಹುರ್ವಿದ್ಯಯಾನ್ಯದಾಹುರ್ವಿದ್ಯಯಾ ।**
**ಇತಿ ಶುಶ್ರುಮ ಧೀರಾಣಾಂ ಯೇ ನಸ್ತದ್ ವಿಚಚಕ್ಷಿರೇ ॥**

**ವಿವರಣೆ :** ಮಿಥ್ಯಾ ಜ್ಞಾನ (ವಿಪರೀತ ಜ್ಞಾನ) ಖಂಡನೆಯಿಂದ ದುಃಖನಿವೃತ್ತಿಯು ಸತ್ಯ(ತತ್ವವಾದ) ಜ್ಞಾನದಿಂದ ಸುಖ ಪ್ರಾಪ್ತಿ ರೂಪ ದ್ವಿವಿಧ ಫಲ ಪ್ರಯೋಜನವು ಆಗುವುದು.

ಇಲ್ಲಿ ತತ್ವಜ್ಞಾನ ಹೊಂದುವುದರಿಂದ ಮೊಕ್ಷದಲ್ಲಿ ಏಕದೇಶ ಫಲಪ್ರಾಪ್ತಿ ವಿಪರೀತ ಜ್ಞಾನನಿಂದನೆಯಿಂದ ಎರಡನೇ ಲಾಭವಾದ ಮೋಕ್ಷ ಸುಖ ಪ್ರಾಪ್ತವಾಗುವುದು ಎಂದು ಜ್ಞಾನಿಗಳಿಂದ ನಾವು ತಿಳಿದಿದ್ದೇವೆ (ಕೇಳಿದ್ದೇವೆ).

**ವಿಶೇಷಾಂಶ :** ಪೂರ್ಣ ಸುಖಪ್ರಾಪ್ತಿ ಆಗಬೇಕಾದರೆ ಮೊದಲಿಗೆ ದುಃಖ ನಿವೃತ್ತಿ ಆಗಬೇಕು. ಆಮೇಲೆ ಸುಖಪ್ರಾಪ್ತಿ ಪಡೆಯಬಹುದು. ಈ ರೀತಿ ಸಂಪೂರ್ಣ ನಿರ್ದುಃಖ ಸುಖವು ಮೋಕ್ಷದಲ್ಲೇ ಸಿಗುವುದು. ಸಂಸಾರದಲ್ಲಿಯೂ ಹಾಗೆ ಪೂರ್ಣ ಆನಂದ ಹೊಂದಬೇಕಾದರೆ ದುಃಖರೂಪವು ತೊಲಗಬೇಕು. ಮುಕ್ತಿ ಹೊಂದಬೇಕಾದರೆ ಸತ್ಯವಾಗಿರುವ ಜ್ಞಾನವನ್ನು ಪಡೆದು ಈ ಜ್ಞಾನವು ಸರಿಯಾಗಿದೆ ಅಂತ ತಿಳಿಯಬೇಕು. ಹಾಗೇನೇ ತಪ್ಪಾಗಿರುವ ವಿಪರೀತ ಜ್ಞಾನವನ್ನು ಇದು ತಪ್ಪು ಮಾರ್ಗವೆಂದೂ ಸಹ ತಿಳಿಯಬೇಕು. ಹೀಗೆ ಎರಡನ್ನೂ ತಿಳಿದಾಗ (ಸೇರಿದಾಗ) ತತ್ವಜ್ಞಾನವು ಪರಿಪೂರ್ಣತೆಯಾಗುವುದು. ಇಂಥ ತತ್ವಜ್ಞಾನವನ್ನು ಶ್ರೀಮದಾನಂದತೀರ್ಥರೊಬ್ಬರೇ ತಿಳಿಸಿಕೊಟ್ಟಿದ್ದಾರೆ. ಮೋಕ್ಷ ಮಾರ್ಗ ತೋರಿಸಿಕೊಟ್ಟಿದ್ದಾರೆ. ಅನ್ಯ ಮತಾಚಾರ್ಯರು ತಾವೂ ಎಡವಿದ್ದಲ್ಲದೇ ಅನ್ಯರನ್ನೂ ತಪ್ಪು ಮಾರ್ಗಕ್ಕೆ ಕೊಂಡೊಯ್ದು ನಿತ್ಯನರಕಕ್ಕೆ ಬೀಳುವಂತೆ ಮಾಡಿದ್ದಾರೆ.

ತತ್ವಜ್ಞಾನ ಮಾತ್ರ ಇದ್ದರೆ ಸಾಲದು. ತಪ್ಪಾದುದನ್ನು ಇದು ತಪ್ಪು ಎಂದು ತಿಳಿಯುವುದೂ ಸಹ ಬೇಕು. ಅದನ್ನು ಖಂಡಿಸಬೇಕು. ಆಗ ಮಾತ್ರ ಶ್ರೀಮದಾಚಾರ್ಯರ ಸಿದ್ಧಾಂತದಲ್ಲಿ ದೃಢ ವಿಶ್ವಾಸವಿರಬೇಕು. ಇದರಿಂದಾಗಿ ಅನೇಕ ಜನ್ಮಾಂತರಗಳ ನಂತರ



ಶ್ರೀವಾಯುದೇವರ ಅನುಗ್ರಹದಿಂದ ತನ್ಮೂಲಕ ಶ್ರೀರಮಾರಮಣನು ತನ್ನ ಅನಂತ ವೈಕುಂಠ ಸ್ಥಾನ(ಮೋಕ್ಷ)ವನ್ನು ಕರುಣಿಸುತ್ತಾನೆ.

ತಂದೆ–ತಾಯಿಗಳು ದೊಡ್ಡವರು. ಹಿರಿಯರೂ ಎಂದಿಷ್ಟೇ ತಿಳಿದರೆ ಸಾಲದು. ಅವರ ಸೇವೆಯನ್ನು ಅವಶ್ಯ ಮಾಡಬೇಕು. ಅದನ್ನು ತಿಳಿದೂ ಮಾಡದಿದ್ದರೆ ಮಹಾ ಪಾತಕದ ಜೊತೆಯಲ್ಲಿ ಸುಖವೂ ಮುಂದೆ ಆಗುವುದಿಲ್ಲ.

ಆದ್ದರಿಂದ ಸಮೀಚೀನ ತತ್ವಜ್ಞಾನ ಹಾಗೂ ಅನ್ಯಥಾಜ್ಞಾನ ತಿರಸ್ಕಾರ (ಖಂಡನೆ) ಎರಡೂ ಬೇರೆ ಬೇರೆ ಫಲಗಳನ್ನು ಕೊಡುವುದೆಂದು ಹೇಳಲಾಗಿದೆ.

ಯಥಾರ್ಥ ಜ್ಞಾನದಿಂದ ಸ್ವರೂಪಾನಂದ ರೂಪ ಮುಕ್ತಿಗೆ ಕಾರಣವಾದಂತೆ ಅನ್ಯಥಾ ಜ್ಞಾನ ಖಂಡನೆಯಿಂದ ದುಃಖ ಅಜ್ಞಾನಾದಿ ಅನಿಷ್ಟಗಳ ನಿವೃತ್ತಿಗೆ ಕಾರವಾಗುವುದೆಂದು ಮುಂದಿನ ಮಂತ್ರದಲ್ಲಿ ತಿಳಿಸಲಾಗುವುದು.

**ಮಂತ್ರ ೧೧**

**ವಿದ್ಯಾಂ ಚವಿದ್ಯಾಂ ಚವಿದ್ಯಾಂ ಚ ಯಸ್ತದ್ ವೇದ್ಫೋಭಯಂ ಸಹ ।**
**ಅವಿದ್ಯಯಾ ಮೃತ್ಯುಂ ತೀರ್ತ್ವಾ ವಿದ್ಯಯಾಮಮೃತಮಶ್ನುತೆ ॥**

**ವಿವರಣೆ :** ಅವಿದ್ಯಯಾ ಅಂದರೆ ಅನ್ಯಥಾ ಜ್ಞಾನ (ಅರ್ಥಾತ್ ಯಥಾರ್ಥವನ್ನು ತಪ್ಪಾಗಿ ತಿಳಿಯುವುದು. ತಿಳಿಸುವುದೂ ಅಂಥವನು ದುರ್ಮಾರ್ಗದಲ್ಲಿ ಹೋಗುವಂತೆ ಮಾಡಿ ನಿರಂತರ ದುಃಖ ಪಡುವಂಥ ತಮಸ್ಸಿನಲ್ಲಿ ಬೀಳುವನು.

ಇಂತು ತಪ್ಪು ತಿಳುವಳಿಕೆಯನ್ನು ನಿಂದಿಸುವುದರಿಂದ ಅವಿನಾಶಕಾರಿ ಮಾರ್ಗದಲ್ಲಿ ಹೋಗದಂತೆ ಅಮಾಯಕರಿಗೆ ಹಾನಿ ಆಗುವುದನ್ನು ತಪ್ಪಿಸಬಹುದು. ಹೀಗೆ ಸನ್ಮಾರ್ಗದಲ್ಲಿ ನಡೆಯಲು ತತ್ವಜ್ಞಾನವನ್ನು ಯಥಾವತ್ತಾಗಿ ತಿಳಿಸಿ ಸಜ್ಜನರಿಗೆ ಮಹದುಪಕಾರ ಮಾಡಬೇಕು. ಇದರಿಂದ ಪರಮಾತ್ಮನು ಸಂತುಷ್ಟನಾಗಿ ನಮಗೆ ಬರಬೇಕಾದ ದುಃಖ ಅನಿಷ್ಠಗಳನ್ನೂ ದೂರ ಮಾಡುವನು.

ಇದರ ನಂತರ ಅಂತಹನಿಗೆ ಸಮೀಚೀನ ಜ್ಞಾನ ಕೊಟ್ಟು ಅನುಗ್ರಹಿಸುವನು. **"ಅಜ್ಞಾನಾಂ ಜ್ಞಾನದೋ ವಿಷ್ಣುಃ"** ಶಾಶ್ವತ ಸುಖರೂಪ ಮುಕ್ತಿ ದಯಪಾಲಿಸುವನು.

**ವಿಚಾರ :** ಈ ಮಂತ್ರಕ್ಕೆ ಮಾಯಾವಾದಿಗಳು ಹೀಗೆ ವಿವರಣೆ ನೀಡುತ್ತಾರೆ.

ಮಂತ್ರದಲ್ಲಿ **"ಅವಿದ್ಯಯಾ ಇತ್ಯತ್ರ ಅಗ್ನಿ ಹೋತ್ರಾದಿ ಕರ್ಮೈಃಹಿ ಮೃತ್ಯಂ ತೀರ್ತ್ವಾ ಸ್ವಾಭಾವಿಕ ಕರ್ಮೇಣ ತಥಾ ಜ್ಞಾನಂ ತೀರ್ತ್ವಾ ದೇವತಾ ಜ್ಞಾನಾತ್ ಅಮೃತಂ ಅಶ್ನುತೆ ದೇವತ್ವ ಭಾವಂ ಪ್ರಾಪ್ಯತೆ"** ಎಂದು ಅರ್ಥಮಾಡಿರುತ್ತಾರೆ.

ಈ ವ್ಯಾಖ್ಯಾನವು ಅಪ್ರಾಸಂಗಿಕ ಸ್ವವ್ಯಾಹತವಾಗಿರುವುದು. ಮೂರು ಮಂತ್ರಗಳನ್ನು

ತಿಳಿಸಿದಾಗ ವಿದ್ಯಾವಿರೋಧವಾದ ಅಗ್ನಿ ಹೋತ್ರಾದಿ ಕರ್ಮಗಳನ್ನು ಅವಿದ್ಯೆ ಎಂದು ತಿಳಿಸಿದ್ದಾರೆ. ಆದರೆ ವಿದ್ಯಾ ಶಬ್ದಕ್ಕೆ ಬ್ರಹ್ಮವಿದ್ಯೆ ಎಂದು ಸ್ಪಷ್ಟವಾಗಿರಲು (ಸಾ ವಿದ್ಯಾಯಾ ವಿಮುಕ್ತಯೇ) ದೇವತಾ ಜ್ಞಾನವೆಂದು ಅವರು ಅರ್ಥ ಮಾಡಿದುದು ಎಷ್ಟು ಅಸಂಗತ. ಅಷ್ಟೇ ಅಲ್ಲದೇ ಮುಂದಿನ ಮಂತ್ರದಲ್ಲಿ ದೇವತಾಜ್ಞಾನ ರೂಪ ವಿದ್ಯೆಗೆ ಅಗ್ನಿ ಹೋತ್ರಾದಿ ಕರ್ಮವು ವಿರೋಧಿ ಎಂದು ಹೇಳಿದಾಗ ಸಮಾಖ್ಯೆಯನ್ನು ತಿಳಿಸಿದಾಗ ಸ್ವವ್ಯಾಹತಿ ಹಾಗೂ ಸ್ವಸಿದ್ಧಾಂತ ವಿರೋಧವೂ ಬರುವುದು. ಒಂದು ಕಡೆ ಅಗ್ನಿಹೋತ್ರಾದಿ ಕರ್ಮವನ್ನು ಅವಿದ್ಯೆ ಎಂದು ತಿಳಿಸಿ ಅದೇ ಮಂತ್ರದಲ್ಲಿ ವಿದ್ಯೆಯೂ ಎಂಬುದಕ್ಕೆ ದೇವತಾ ಜ್ಞಾನ ಅಂತೆ ಪರಸ್ಪರ ವಿರೋಧ ಅರ್ಥವನ್ನು ತಿಳಿಸಿರುತ್ತಾರೆ. ಇಷ್ಟು ಕಷ್ಟದಿಂದ ಅಪಾರ್ಥ ಮಾಡಲು ತಿಣುಕಿದ್ದಾರೆ ಎಂಬುದು ಸ್ಪಷ್ಟ. ಏನು ಹೇಳಲಾಯಿತೆಂದರೆ ಅಗ್ನಿ ಹೋತ್ರಾದಿಗಳನ್ನು ಅವಿದ್ಯೆ (ಜ್ಞಾನವಿರೋಧಿ) ಎಂದಾಗ ಕರ್ಮ ಪರಿತ್ಯಾಗವೇ ಎಂದು ಹೇಳಿರುತ್ತಾರೆ. ಇನ್ನು ಈ ರೀತಿ ಕರ್ಮ ಪರಿತ್ಯಾಗದಿಂದ ಬ್ರಹ್ಮಪ್ರಾಪ್ತಿ ಎಂದಿರುವುದು ಉಪನಿಷತ್ತಿನಲ್ಲಿನ ಹಿಂದೆ ಮುಂದೆ ತಿಳಿಸಿದನ್ನು ತಮಗೆ ತೋಚಿದ ಸ್ವಕಲ್ಪವೇ ಸರಿ.

ಏಕೆಂದರೆ ಎರಡನೇ ಮಂತ್ರದಲ್ಲಿ ಜ್ಞಾನಿಗಳಿಗೂ ಕರ್ಮ ತಿಳಿಸಲಾಗಿದೆ. ಇನ್ನು **ಅನ್ಯದಾಹುರ ವಿದ್ಯಯಾ** ಎಂಬಲ್ಲಿ ಕರ್ಮದಿಂದ ಪಿತೃಲೋಕ ಪ್ರಾಪ್ತಿ ಎಂದು ಹೇಳಿ ಅದೇ ಮಂತ್ರಕ್ಕೆ ಕರ್ಮಕ್ಕೆ ಮೃತ್ಯು ತರಣ ರೂಪ ಫಲವನ್ನು ತಿಳಿಸಿರುತ್ತಾರೆ. ಇದೂ ಸಹ ಅಸಂಗತ ಅಪಸಿದ್ಧಾಂತ.

ಅಲ್ಲದೆ ಮೃತ್ಯು ತರಣವೆಂದರೆ ಸಂಸಾರದಿಂದ ಬಿಡುಗಡೆ ಎಂಬುದನ್ನು (ಲಿಂಗದೇಹ ಭಂಗ) ಬಿಟ್ಟು ಸ್ವಾಭಾವಿಕ ಕರ್ಮ ಜ್ಞಾನವನ್ನು ದಾಟುವುದು ಎಂದು ಹೇಳಿದ್ದು ಅಯೋಗ್ಯವೇ ಸರಿ. ಅವರ ಮಾತು ವ್ಯಾಖ್ಯಾನಗಳಿಗೆ ಪ್ರಮಾಣವಿಲ್ಲ.

ಇಲ್ಲಿ ಬ್ರಹ್ಮವಿದ್ಯಾ ಪ್ರಕರಣವಿರುವುದರಿಂದ **ಅವಿದ್ಯಾ ವಿದ್ಯಾ** ಶಬ್ದಗಳಿಗೆ ತತ್ಸಂಬಂಧಿ ಅರ್ಥವನ್ನೇ ಹೇಳಬೇಕು. ಜ್ಞಾನ ಕರ್ಮಗಳನ್ನು ಒಂದುಗೂಡಿಸುವುದು ಪ್ರಸಂಗ ವಿರೋಧ.

**ಈ ವಿಷಯದಲ್ಲಿ ಅರವಿಂದರು Devine Life ಎಂಬ ತಮ್ಮ ಕೃತಿಯಲ್ಲಿ** ಇನ್ನೂ ವಿಚಿತ್ರ ರೀತಿಯ ವ್ಯಾಖ್ಯಾನ ಕಾಣಬಹುದು. ಅವರ ಅನುವಾದ ಇನ್ನೂ ವಿಚಿತ್ರವಾಗಿರುವುದು. ಆಧಾರ ಪ್ರಮಾಣ ರಹಿತ.

ಬ್ರಹ್ಮನು ಒಬ್ಬನೇ ಇದ್ದನು. ಭಾಗವತದಲ್ಲಿ ಉಲ್ಲೇಖಿಸಿದ (ಚತುಶ್ಲೋಕೀ ಭಾಗವತ ಪ್ರಥಮ ಚರಣ) **"ಅಹಮೇವಾಸಮೇವಾಗ್ರೆ"** ಎಂಬುದನ್ನಷ್ಟೇ ಸ್ವೀಕರಿಸಿ ಹೇಳಿದ್ದಾರೆ. ಉಳಿದ ಅಂಶವನ್ನು ಬಿಟ್ಟುಬಿಟ್ಟಿದ್ದಾರೆ.



**ಅರವಿಂದರ ವಿವರಣೆ**

ಬ್ರಹ್ಮನು ಒಬ್ಬನೇ ಇದ್ದ. ಆಮೇಲೆ ಅವನೇ ಅನೇಕ ಜೀವ ಸ್ವರೂಪಗಳನ್ನು ಪಡೆದನು. ಇದರಿಂದ ಬ್ರಹ್ಮನಲ್ಲಿ ಏಕತ್ವ ಅನೇಕತ್ವಗಳು ಇವೆ. ಪರಮಾತ್ಮನನ್ನು ತಿಳಿಯಬೇಕಾದರೆ ಈ ಏಕತ್ವ ಅನೇಕತ್ವ ಎಂಬ ಎರಡನ್ನು ತಿಳಿಯಬೇಕು ಬ್ರಹ್ಮನು. ಜೀವನು ಒಂದೇ ಆದರೂ (ಆಗಿದ್ದರೂ) ಬ್ರಹ್ಮನು ಸರ್ವಶಕ್ತ ಪರಿಪೂರ್ಣ ಆನಂದಮಯನು. ಆದರೆ ಜೀವನು ಮಾತ್ರ ಅಪೂರ್ಣ, ಬದ್ಧ, ದುಃಖಿಯಾಗಿರುತ್ತನೆ. ವಿದ್ಯೆ ಅಂದರೆ ಜೀವ ಬ್ರಹ್ಮೈಕ್ಯ ಜ್ಞಾನವು. ಅವಿದ್ಯೆ ಅಂದರೆ ಬ್ರಹ್ಮನೇ ಅನೇಕತ್ವ ಜ್ಞಾನವು ಆಗುವುದು. ಬ್ರಹ್ಮನು ಒಬ್ಬನೇ ಅಂದಾಗ ಏಕತ್ವ ಜ್ಞಾನವೆನಿಸುವುದು. ಅನೇಕತ್ವ ಜ್ಞಾನವು ಅವಿದ್ಯೆಯೆನಿಸುವುದು. ಕೇವಲ ಏಕತ್ವ ಜ್ಞಾನದಿಂದ ತಮಸ್ಸು ಪ್ರಾಪ್ತವಾಗುವುದು.

ಕೇವಲ ಅನೇಕತ್ವ ಜ್ಞಾನದಿಂದ (ಅವಿದ್ಯೆ) ಅದಕ್ಕಿಂತ ಹೆಚ್ಚಿನ ತಮಸ್ಸಾಗುವುದು. ಅದಕ್ಕಾಗಿ ಏಕತ್ವ ಅನೇಕತ್ವವೆಂಬೆರಡನ್ನೂ ತಿಳಿದಿರಬೇಕು. ಹೀಗೆ ತಿಳಿದು ಅನೇಕತ್ವ ಜ್ಞಾನದಿಂದ ಅಮೃತತ್ವವನ್ನು ಹೊಂದುತ್ತಾನೆ ಎಂದು ವಿವರಿಸಿದ್ದಾರೆ.

ಅವರ ವಿವರಣೆ ಎಷ್ಟು ದೋಷಯುಕ್ತವೆಂಬುದನ್ನು ತಿಳಿಯೋಣ.

(೧) ಬ್ರಹ್ಮನೇ ಜೀವನು ಎಂದಿದ್ದಾರೆ. ಅಂದ ಮೇಲೆ ಬ್ರಹ್ಮನು ಪರಿಪೂರ್ಣ ಸರ್ವಶಕ್ತನೆಂದು ಅದೇ ಬ್ರಹ್ಮ ಜೀವನಾದಾಗ ಅವನೂ ಪರಿಪೂರ್ಣ ಸರ್ವಶಕ್ತ ಆನಂದಮಯನಾಗಬೇಕಲ್ಲವೇ. ಆದರೆ ಅವರ ರೀತ್ಯಾ ಜೀವ ಅಪೂರ್ಣ ಬದ್ಧ ದುಃಖಿ ಹೇಗಾಗುತ್ತಾನೆ. ಒಂದು ಬ್ರಹ್ಮನಂತೆ ಜೀವರು ಪರಿಪೂರ್ಣ ಆನಂದಮಯರಾಗಬೇಕು ಅಥವಾ ಜೀವನು ದುಃಖಿ ಅಪೂರ್ಣ ಬದ್ಧ ಎಂದೆನಿಸಿದಾಗ ಬ್ರಹ್ಮನೂ ಅಪೂರ್ಣ ದುಃಖಿ ಅಜ್ಞಾನಿಯಾಗಬೇಕಾಗುವುದು. ಈ ವಿವರಣೆ ಹಾಸ್ಯಾಸ್ಪದ ಹಾಗೂ ಅರ್ಥಹೀನ.

(೨) ದುಃಖವು ಜೀವನಲ್ಲಿ ಪಾರಮಾರ್ಥಿಕವೆಂದರೆ ಅದು ಬ್ರಹ್ಮನಲ್ಲಿರಬೇಕಾಗುವುದು. ಹಾಗಲ್ಲ ಪಾರಮಾರ್ಥಿಕವಲ್ಲವೆಂದರೆ ಇದು ಕೇವಲ ಭ್ರಾಂತಿ ಎನ್ನಬೇಕು. ಹೀಗಾಗಿ ಭ್ರಾಂತಿ ಎನ್ನುವುದು ಬ್ರಹ್ಮನಿಗೂ ಅನ್ವಯಿಸುವುದು. ಬ್ರಹ್ಮನ ಪಾರಮಾರ್ಥಿಕ ಸತ್ಯವೆನ್ನುವುದು ಭ್ರಾಂತಿಯಾಗುವುದಿಲ್ಲವೇ ?

(೩) ಅನೇಕತ್ವವು ಏಕತ್ವದಿಂದ ಹುಟ್ಟಿದೆ ಎಂದರೆ ಸರಿಯಲ್ಲ. ಏಕನಾದ ಬ್ರಹ್ಮ ಅನೇಕನಾಗಬೇಕಾದರೆ (ಜೀವನಾಗಬೇಕಾದರೆ) ಬ್ರಹ್ಮನಿಗೆ ಅಜ್ಞಾನದ ಸಂಪರ್ಕವಾಗಬೇಕು. ಆದರೆ ಮಾಯಾವಾದಿಗಳು ಬ್ರಹ್ಮನಿಗೆ ಅಜ್ಞಾನದ ಸಂಪರ್ಕ ಅಸಂಭವವೆಂದೊಪ್ಪಿಕೊಂಡಿದ್ದಾರೆ.

ಇಲ್ಲಿ ಅರವಿಂದರು ಏಕತ್ವನಾದ ಬ್ರಹ್ಮನಿಗೆ ಅಜ್ಞಾನ ಕೂಡಿಸಲು ಜೆಗ್ಗಾಡಿದ್ದಾರೆ. ನಮಾಜು ಮಾಡಲು ಹೋಗಿ ಮಸೀದಿಯನ್ನು ಕೆಡವಿಕೊಂಡಂತೆ ಆಯಿತು.

ಹೋಗಲಿ. ಅನೇಕತ್ವವು ಮಾಯಾಕಲ್ಪಿತ ಅಂತ ಹೇಳಲೂ ಬರುವುದಿಲ್ಲ. ಮಾಯಾ ಎಂಬ ಉಪಾಧಿ ಸಂಬಂಧ ಬ್ರಹ್ಮನಿಗೆ ಸಂಪೂರ್ಣವಾಯಿತೇ ? ಅಥವಾ ಬ್ರಹ್ಮನ ಏಕದೇಶಕ್ಕೆ ಮಾತ್ರ ಆಯಿತೇ ಎಂಬ ಪ್ರಶ್ನೆಗೆ ಅವರಲ್ಲಿ ಉತ್ತರವಿಲ್ಲ.

ಏಕತ್ವ ದೋಷ ಬ್ರಹ್ಮನಿಗಾದರೆ ಅವನಿಗೆ ಅನೇಕತ್ವವು ಕೂಡುವುದಿಲ್ಲ. ಹೀಗಾಗಿ ಬ್ರಹ್ಮನಿಗೆ ಮಾಯಾತಟ್ಟಿ ಜೀವನಾದ ಎಂದರೆ ಬ್ರಹ್ಮ ಒಂದು ಸತ್ಯ. ಮಾಯಾ ಒಂದು ಸತ್ಯವಾದಾಗ ಅದ್ವೈತ ನಾಶವಾಯಿತು. ಅನವಸ್ಥಾ ದೋಷವು ಬರುವುದು. ಬ್ರಹ್ಮನ ಮೇಲೆ ಮಾಯಾ ಆರೋಪವಾಯಿತೋ ಅಥವಾ ಮಾಯಾವನ್ನೇ ಬ್ರಹ್ಮನು ಅಪ್ಪಿಕೊಂಡಿನೋ ಹೇಳಲು ಬರುವುದಿಲ್ಲ. ಆಗ ಎರಡೂ ಸತ್ಯವೇ ಎಂದು ಒಪ್ಪಲೇಬೇಕು.

ಇನ್ನು, ಏಕತ್ವಜ್ಞಾನಿಗೆ (ಏಕತ್ವವಷ್ಟೇ ಎಂದು ತಿಳಿದ) ಅಂತಹವನಿಗೆ ತಮಸ್ಸು ನಿತ್ಯ ನರಕ ಪ್ರಾಪ್ತವಾಗುವುದು. ಅನೇಕತ್ವ ಜ್ಞಾನವುಳ್ಳವನಿಗೆ ಅದಕ್ಕಿಂತ ಹೆಚ್ಚಿನ ತಮಸ್ಸಾಗುವುದು ಎಂದಿದ್ದಾರೆ. ಅಂತಹ ಅನೇಕತ್ವ ಜ್ಞಾನಿ ತಮಸ್ಸಿನಲ್ಲಿ ಬಿದ್ದು ಬಿಡುಗಡೆ ಹೊಂದದೇ ಇರುತ್ತಾನೆ. ಬ್ರಹ್ಮನು ಏಕನು. ಅನೇಕತ್ವವನ್ನು ಪಡೆದು ಜೀವನಾದ ಮೇಲೆ ಜೀವಾ ಭಿನ್ನ ಬ್ರಹ್ಮನೋ ತಮಸ್ಸಿನಿಂದ ಪಾರವೇ ಇಲ್ಲವೆಂದಾಯಿತು.

ಬ್ರಹ್ಮನ ಅನೇಕತ್ವ ಜ್ಞಾನವಿಲ್ಲದೇ ಜೀವನಾಗರಾಲ. ಏಕತ್ವ ಜ್ಞಾನವಾಗದೆ ಜೀವನು ಬ್ರಹ್ಮನಾಗಲಾರ. ಹೀಗಾಗಿ ಇಬ್ಬರೂ ಅಂಧಮ ತಮಸ್ಸಿನಲ್ಲಿ ಬಿದ್ದು ಹೊರಳಾಡಬೇಕಾಗುವುದು. ಕಾರ್ಯ ಕಾರಣಗಳಿಗೆ ಕೊನೆ ಇಲ್ಲದೇ ಅನವಸ್ಥಾ ದೋಷವಿರುವುದು. ಮದುವೆಯಾಗದೆ ಹುಚ್ಚುಹೋಗದು, ಹುಚ್ಚು ಹೋಗದೇ ಮದುವೆಯಾಗದು ಎಂಬಂತಾಯಿತು.

ಅರವಿಂದರು ಯಾವ ಶಾಸ್ತ್ರಾಭ್ಯಾಸ ಮಾಡಿದವರಲ್ಲವೆಂಬುದು ಸ್ಪಷ್ಟ ಎಂದೇ ತಿಳಿದು ಬರುವುದು. ಅವರು ಬೆಂಗಾಲ್‌ನಲ್ಲಿ ರಾಜಕಾರಣಿಗಳಾಗಿದ್ದರು. ಬ್ರಿಟೀಷರ ವಿರುದ್ಧ ಹೋರಾಡಿದವರು. ಕೊನೆಗೆ ಬೇಸತ್ತು ಸನ್ಯಾಸತ್ವ ಹೊಂದಿ ಪಾಂಡಿಚೆರಿಯಲ್ಲಿ ಒಂದು ಆಶ್ರಮ ಕಟ್ಟಿಕೊಂಡರು. (He was a disgruntled rejected political figure) ಇಲ್ಲಿ ಬಂದು ಕೆಲ ಅನುವಾದಿತ ಗ್ರಂಥಗಳನ್ನು ಇಂಗ್ಲೀಷಿನಲ್ಲಿ ಇರುವುದನ್ನು ಓದಿದರು. ಯಾವ ಗುರೂಪದೇಶ ಪಡೆದವರಲ್ಲ. ಹೀಗೆ Perverted knowledgeಯಿಂದ ತಮ್ಮದೇ ಆದ ಸ್ವಕಲ್ಪಿತ ತತ್ವವನ್ನು ಉಪದೇಶಿಸಿದರು ಅಂದಮೇಲೆ ಅಪಕ್ವ ಆಧಾರರಹಿತ ವ್ಯಾಖ್ಯಾನವು ಹೊರಟಿತು. ಅಪಾರ ರಮಣೀಯವಾಗಿ ಇರುವುದು. ಸಿದ್ಧಾಂತ ವೇದವಾಕ್ಯ ವಿರುದ್ಧಾರ್ಥ ಮಾಡುವುದರಲ್ಲಿ ಆಧರಿಸುವುದು ಆಗುವುದಿಲ್ಲ.

ಇವೆಲ್ಲಾ ಊಹಾಪೋಹ ವಿವರಣೆಗಳನ್ನು ಖಂಡಿಸುತ್ತಾ ಶ್ರೀಮದಾಚಾರ್ಯರು ಉಪನಿಷತ್ತಿನ ವಾಕ್ಯಕ್ಕೆ ಸಿದ್ಧಾಂತ ಪ್ರಾಮಾಣ್ಯವಾಗಿ ಭಾಷ್ಯ ಬರೆದು ಮಹೋಪಕಾರ



ಮಾಡಿದ ಏಕೈಕ ದಾರ್ಶನಿಕರು. ಕೂರ್ಮಪುರಾಣದಲ್ಲಿ ತಿಳಿಸಿರುವುದನ್ನು ಆಧರಿಸಿ ವ್ಯಾಖ್ಯಾನವು ಸಪ್ರಮಾಣಿಕವಾಗಿರುವುದು.

ಇಷ್ಟು **ವಿದ್ಯಾ ಅವಿದ್ಯಾ** ಬಗೆಗಿನ ವಿವರಣೆ ಸುದೀರ್ಘವಾಗಿದೆ. ಅದರಂತೆ ಯಥಾರ್ಥ ಜ್ಞಾನ ಸಂಪಾದನೆ ಎಷ್ಟು ಮುಖ್ಯವೋ ಅನ್ಯಥಾರ್ಥ, ಮಿಥ್ಯಾಜ್ಞಾನ ಖಂಡನೆಯೂ ಅಷ್ಟೇ ಮುಖ್ಯ. ಮುಕ್ತಿಗೆ ಹೇತುವೆಂದು ತಿಳಿಸಿ ಅಂತೆಯೇ ಭಗವಂತನು ಕೇವಲ ಸೃಷ್ಟಿಕರ್ತ ಅಂತ ತಿಳಿಯದೇ ಸಂಹಾರಕರ್ತನೂ (ಲಯಕರ್ತನೂ) ಎಂಬ ಜ್ಞಾನವೂ ಸಹ ಅವಶ್ಯಕತೆಯನ್ನು ತಿಳಿಸಲು ಮುಂದಿನ ಮೂರು ಮಂತ್ರಗಳು ಹೊರಟಿವೆ.

## ಶ್ರೀ ರಾಘವೇಂದ್ರ ಗುರುರಾಜರ ಖಂಡಾರ್ಥ

**ಮಿಥ್ಯಾಜ್ಞಾನ ಮನರ್ಥಹೇತುಃ ತತ್ವಜ್ಞಾನಮೇವ ಮುಕ್ತಿಹೇತುರಿವೆ ಪ್ರಾಗುಕ್ತಸ್ಯ ವಿವರಣಂ ಅಂಧಂತಮ ಇತ್ಯುಕ್ತೆರ ಮಂತ್ರೇ ತ್ರಯೇಣ ಕ್ರೀಯತೇ ॥ ತತ್ರಾದ್ಯಸ್ಯಾಯಮರ್ಥಃ। ಅಸಂಭೂತಿಂ ಜಗತ್ಸøಷ್ಟಿಕರ್ತಾ ನೇತ್ಯುಪಾಸತೆ ಇತ್ಯರ್ಥಃ**

**ಸಂಭೂತ್ಯಾಂ ಉಶಬ್ದಏವಾರ್ಥೋಽನೇನಾನ್ವೇತಿ । ಸಂಭೂತ್ಯಾಂ ಉ ಸೃಷ್ಟಿಕರ್ತೃತ್ವ ಏವ ರತಾಃ ।**

**ಭಗವಾನ್ಸøಷ್ಟಿಕರ್ತನಿವನ ಸಂಹಾರಕರ್ತ್ಯೇತ್ಯುಪಾಸತ ಇತ್ಯರ್ಥ್ಯಃ । ನ ಕೇವಲಂ ವಿಪಕ್ಷೇಽನರ್ಥಸತ್ವಾದೇವ ಸೃಷ್ಟಿ ಸಂಹಾರಯೋಃ ಕರ್ತೃತ್ವಂ ಹರೇರ್ಜ್ಞೇಯಂ ॥ ಕಿಂತು ದಲದ್ವಯಯುಕ್ತ ಮೋಕ್ಷೋಪಯೋಗಿತ್ವಾದಪೀತ್ಯಾಹ ॥**

**ಸೃಷ್ಟ್ಯುಪಲಕ್ಷಿತಾನಂತಗುಣಾತ್ಮಕತ್ವಜ್ಞಾನಾದಾನಂದಾನು ಭವಃ ವಿನಾಶಕರ್ತೃತ್ವ ಜ್ಞಾನಾದಖಿಲಕ್ಲೇಶ ನಿವೃತ್ತಿ ರಿತ್ಯುಭ ಯ ರೂಪಮೋಕ್ಷಯೋಭಯಜ್ಞಾನಮಾವಶ್ಯಕ ಮಿತಿಭಾವಃ ॥**

**ಮಂತ್ರ ೧೨**

> **ಅಂಧಃ ತಮಃ ಪ್ರವಿಶ್ಯಂತಿ ಯೇ ಅಸಂಭೂತಿ ಮುಪಾಸತೇ ।**
> **ತತೋ ಭೂಯ ಇವ ತೇ ತಮೋಯ ಉ ಸಂಭೂತ್ಯಾಂ ರತಾಃ ॥**

**ವಿವರಣೆ :** ಈ ಜಗತ್ತು ಪರಮಾತ್ಮನಿಂದ ಸೃಷ್ಟಿಸಿದೆ. ಅವನ ಸೃಷ್ಟಿಯಲ್ಲೇ ಇದ್ದು ನಿತ್ಯ ಜೀವನ ಸುಖಾದಿಗಳನ್ನು ಪಡೆಯುತ್ತಿರೋ ಓರ್ವ ಮಾನವ ತಿಳಿಯದೇ ಈ ಜಗತ್ತು Evolution –ಪರಿಣಾಮವಾಯಿತು. ನೈಸರ್ಗಿಕವಾಗಿ ತಾನಾಗಿಯೇ ಕ್ರಮಬದ್ಧವಾಗಿ ಮಾರ್ಪಟ್ಟಿತು. ಭಗವಂತನಿಂದ ನಿರ್ಮಿತವಾಗಿಲ್ಲ. ಭಗವಂತನ ಅವಶ್ಯಕತೆ ಏಕೆಬೇಕು ಎಂದು ತಿಳಿದ ನಾಸ್ತಿಕವಾದಿ ಕೃತಘ್ನರೇ ಅಜ್ಞಾನಿಗಳು. ಖಂಡಿತವಾಗಿ ನಿತ್ಯ ದುಃಖತೋಪ ಅಂಧಃ ತಮಸ್ಸನ್ನು ಹೊಂದುತ್ತಾರೆ.

ಆಸ್ತಿಕರಲ್ಲಿ ಕೆಲವರು ವೇದಶಾಸ್ತ್ರಗಳನ್ನು ಅಲ್ಪ ಸ್ವಲ್ಪ ತಿಳಿದು ಪರಮಾತ್ಮನು ಕೇವಲ ಸೃಷ್ಟಿಕರ್ತನಷ್ಟೆ. ಸಂಹಾರ ಲಯಾದಿಗಳನ್ನು ಮಾಡುವುದಿಲ್ಲವೆಂದು

ತಿಳಿದಿರುತ್ತಾರೆ. ಇನ್ನೂ ಕೆಲವರು ಚತುರ್ಮುಖ ಬ್ರಹ್ಮ ಸೃಷ್ಟಿ ಮಾಡುತ್ತಾನೆ. ನಾರಾಯಣನು ಸ್ಥಿತಿಕರ್ತ. ರುದ್ರದೇವರ ಸಂಹಾರಕರ್ತನೆಂದು ಮೂರು Departments (Portfolios) ಹಂಚಿ ಒಬ್ಬರು ಇನ್ನೊಬ್ಬರ ಅಧಿಕಾರ ವ್ಯಾಪ್ತಿ ಇರುವುದಿಲ್ಲ. The three are water tight compartments ಅಂತ ತಿಳಿದು ಸಾಧಿಸುತ್ತಾರೆ. ಇವರೆಲ್ಲಾ ಪರಮಾತ್ಮನ ಮಹಿಮೆಯನ್ನು ಅಲ್ಪವಾಗಿ ತಿಳಿದ ವಿಪರೀತ ಜ್ಞಾನಿಗಳು. ಇಂಥವರು ಮೊದಲು ತಿಳಿಸಿದ ಅಜ್ಞಾನಿಗಳಿಗಿಂತ ಹೆಚ್ಚಿನ ತಮೋ ದುಃಖವನ್ನು ಪಡೆಯುತ್ತಾರೆ.

**ತಾತ್ಪರ್ಯವೇನೆಂದರೆ :** ಪರಮಾತ್ಮನು ಸೃಷ್ಟಿಕರ್ತನು ಹೇಗೋ ಹಾಗೆ ಸಂಹಾರಕರ್ತನೂ ಆಗಿರುತ್ತಾನೆ. ಉಪಲಕ್ಷಣತಯಾ ಸೃಷ್ಟಿ ಸ್ಥಿತಿ ಸಂಹಾರ ನಿಯಮನ ಜ್ಞಾನ ಅಜ್ಞಾನಗಳಿಗೆ ಪ್ರವರ್ತಕನಾಗಿರುತ್ತಾನೆ ಎಂಬುದೇ ಸರಿಯಾದ ತತ್ವಜ್ಞಾನ. **"ಅಹಂ ಜಗತಃ ಪ್ರಭವ ಪ್ರಳಯಸ್ಥತಾ"** ಎಂಬ ಶ್ರೀಕೃಷ್ಣನ ಗೀತೆಯಲ್ಲಿ ಹೇಳಿರಬೇಕಾದರೆ ವಿಪರೀತವಾಗಿ ತಿಳಿಯುವುದು ದುಃಖಕ್ಕೆ ಕಾರಣವಾಗುವುದು ಬ್ರಹ್ಮದೇವರಿಗೆ ತನ್ನ ಪರವಾಗಿ ಆಜ್ಞೆಯಿಂದ ಸೃಷ್ಟಿಸುವ ಅಧಿಕಾರವನ್ನೂ, ರುದ್ರದೇವರಿಗೆ ಸಂಹಾರಕ ಕ್ರಿಯೆಯನ್ನು ಮಾಡಲು ಕೊಟ್ಟಿರುತ್ತಾನೆ. ಅವರಿಗೆ Respective Portfolios ಕೊಟ್ಟಿದ್ದಾನೆಯೇ ವಿನಃ ಅವರು ಸ್ವತಂತ್ರವಾಗಿ ಮಾಡಲು ಆಗುವುದಿಲ್ಲ. ಪರಮಾತ್ಮನ ಆಜ್ಞಾ ಅನುಗ್ರಹದಿಂದಲೇ ಶಕ್ತಿ ಸಂಪನ್ನರಾಗಿರುತ್ತಾರೆ ಎಂದು ತಿಳಿಯುವುದು ಯಥಾರ್ಥಜ್ಞಾನ ಮುಕ್ತಿಗೆ ಸೋಪಾನ.

ವೇದಪುರುಷ ಒಂದೆಚ್ಚರಿಕೆ ಮಾತನ್ನು ತಿಳಿಸುತ್ತಾನೆ. ಪರಮಾತ್ಮನು ಸೃಷ್ಟಿಕರ್ತನು ಎಂದಿಷ್ಟು ಉಪಾಸನೆ ಮಾಡಿದರೆ ಮೋಕ್ಷದಲ್ಲಿ ಏಕ ದೇಶ ಸುಖವಾಗುವುದು. ಶ್ರೀಶನು ಸಂಹಾರಕರ್ತನೆಂದಿಷ್ಟು ತಿಳಿದರೆ ಎರಡನೇ ದೇಶ ಸುಖವಾಗುವುದು. ಜ್ಞಾನಿಯಾದವನು ಶ್ರೀ ಹರಿಯು ಸೃಷ್ಟಿಕರ್ತನೂ ಹೌದು ಸಂಹಾರಕರ್ತನೂ ಹೌದು ಎಂದು ತಿಳಿದು ಉಪಾಸನೆ ಮಾಡಿದರೆ ಮುಕ್ತಿಯಲ್ಲಿ ಸಂಪೂರ್ಣ ಸುಖವಾಗುವುದು ಎಂದು ಮಂತ್ರದಿಂದ ತಿಳಿಸುತ್ತಾನೆ.

ಮಂತ್ರ ೧೩

**ಅನ್ಯದೇವಾಹುರ ಸಂಭವಾ ದನ್ಯದಾಹುರಸಂಭವಾತ್ ।**
**ಇತಿ ಶುಶ್ರುಮ ಧೀರಾಣಾಂ ಯೇ ನಸ್ತದ್ ವಿಚಚಕ್ಷಿರೇ ॥**

ಹೀಗೆ ಬ್ರಹ್ಮಜ್ಞಾನಿಗಳಿಂದ ನಾವು ಕೇಳಿ ತಿಳಿದಿದ್ದೇವೆ.

ಮಂತ್ರ ೧೪

**ಸಂಭೂತಿಂ ಚ ವಿನಾಶಂ ಚ ಯಸ್ತದ್ ವೇದೋಭಯ್ಂ ಸಹ ।**
**ವಿನಾಶೇನ ಮೃತ್ಯುಂ ತೀರ್ತ್ವಾ ಸಂಭೂತ್ಯಾಮೃತಮಶ್ನುತೆ ॥**



**ವಿವರಣೆ :** ಪರಮಾತ್ಮನು ಸೃಷ್ಟಿಕರ್ತನು ಎಂದು ಉಪಾಸನೆ ಮಾಡಿದವರಿಗೆ ಮುಕ್ತಿಯಲ್ಲಿ ಏಕಾಂಶವು ಲಭಿಸುವುದು. ಕೆಲವರು ಪರಮಾತ್ಮನು ಸಂಹಾರ ಕರ್ತನೆಂದಿಷ್ಟೇ ತಿಳಿದವರಿಗೆ ಮೋಕ್ಷದ ಎರಡನೇ ಅಂಶ ಪ್ರಾಪ್ತವಾಗುವುದು. ಆದ್ದರಿಂದ ಮುಕ್ತಿಯಲ್ಲಿ ಪೂರ್ಣ ಸುಖಾನುಭವವಾಗಬೇಕಾದರೆ ಶ್ರೀಹರಿಯು ಸೃಷ್ಟಿಕರ್ತನೂ ಹೌದು. ಸಂಹಾರಕರ್ತನೂ ಸತ್ಯವೆಂಬ ಯಥಾರ್ಥ ಜ್ಞಾನ ಹೊಂದಬೇಕು.

ಇದನ್ನು ವಿಪರೀತವಾಗಿ ತಿಳಿದು ಬ್ರಹ್ಮನು ಕೇವಲ ಸೃಷ್ಟಿಕರ್ತ ಮಾತ್ರವೆಂದೂ ಇನ್ನು ಕೆಲವರು ಬ್ರಹ್ಮ ಸಂಹಾರಕರ್ತನಿರಬಹುದು ಎಂದು ತಿಳಿದು ಉಪಾಸನೆ ಮಾಡುವವರು. ಮೊದಲಿನವರಿಗೆ ಲಭಿಸುವ ತಮಸ್ಸಿಗಿಂತ ಹೆಚ್ಚಿನ ಹಾನಿ ಎರಡನೇ ಅಜ್ಞಾನಿಗಳಿಗೆ ಲಭಿಸುವುದು. ಹೀಗೆ ಏಕದೇಶ ಉಪಾಸನೆ ಅಯೋಗ್ಯವು. ಉಪನಿಷತ್ತನ್ನು ಸರಿಯಾಗಿ ತಿಳಿದಿಲ್ಲವೆಂದು ಗೊತ್ತಾಗುತ್ತದೆ. ಶ್ರೀಮದಾಚಾರ್ಯರು ಈ ಕೃತಿ ವಾಕ್ಯಕ್ಕೆ ಸರ್ವೋತ್ತಮವಾದ ಭಾಷ್ಯ ಬರೆದಿರುತ್ತಾರೆ. **ಯಾಂತ್ಯೇವಂಸೃಷ್ಟಿಕರ್ತೃತ್ವ ನಾರಿಗೇ ಕುರ್ವಂತಿ ಯೇಹರೇಃ । ತೇಪೆ ಯಾತಿತಮೋಘೋರಂ ತಥಾ ಸಂಹಾರಕರ್ತೃತ್ವಂ**

**ಸರ್ವದೋಷ ವಿನಿರ್ಮುಕ್ತಂ ಗುಣರೂಪಂ ಜನಾರ್ದನಮ್ ।** (ಭಾಷ್ಯ)
**ನಮುಕ್ತಾನಾಮಪಿ ಹರೇಃ ನಾಮ್ಯಂ ವಿಷ್ಣೋರಭಿನ್ನತಾಂ ॥** (ಕೂರ್ಮಪುರಾಣ)

ಶ್ರೀಹರಿ ಸೃಷ್ಟಿಕರ್ತನೆಂದು ಅಂಗೀಕರಿಸದವರು, ಶ್ರೀಶನು ಸಂಹಾರಕರ್ತನೆಂದು ತಿಳಿಯುದವರೂ, ಪರಮಾತ್ಮನು ಗುಣಪೂರ್ಣ ಸರ್ವಕರ್ತ ಸರ್ವೋತ್ತಮ ಲಯಕರ್ತನೆಂದು ಸ್ವೀಕರಿಸದವರು ಎಲ್ಲರೂ ಘೋರ ನರಕ ತಮಸ್ಸಿಗೆ ಹೋಗುತ್ತಾರೆ.

ಹೀಗೆ ಅಸದುಪಾಸನೆ ಮಾಡದೆ ಶ್ರೀರಮಾರಮಣನು ಸರ್ವಕರ್ತ ಲಯಕರ್ತಾ ಆನಂದಗುಣಪೂರ್ಣ ನಿರ್ದೋಷನೆಂದು ಯಥಾವತ್ತಾಗಿ ತಿಳಿದ ಜ್ಞಾನಿಗಳು ಈ ದೇಹ ಬಂಧನದಿಂದ ಬಿಡುಗಡೆ ಹೊಂದಿ ಸಾರೂಪ್ಯ ರೂಪ ಮೋಕ್ಷವನ್ನು ಪಡೆಯುತ್ತಾರೆ. ಆದ್ದರಿಂದ ಜನಾರ್ದನನ್ನು ಸಮೀಚೀನವಾಗಿ ತಿಳಿಯಬೇಕು.

**ವಿ. ಅಂಶ :** ಅರವಿಂದರ ವಿವರಣೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಒಂದು ರೀತಿಯಿಂದ ದ್ವೈತಿಗಳಿಗೆ ಸರಿಯೇ ಅನಿಸುವುದು. ಅದು ಹೇಗೆ ಅಂದರೆ : ಪರಮಾತ್ಮನು ಏಕನೇ ಒಬ್ಬನೇ ಸತ್ಯ. ಅವನು ಅನೇಕತ್ವವನ್ನು ಹೊಂದಿದ ಅಂದಿದ್ದಾರೆ. ದ್ವೈತಿಗಳು ಹೀಗೆ ಅರ್ಥ ಮಾಡಿದ್ದಾರೆ.

(೧) ಪದ್ಮನಾಭರೂಪ ಶ್ರೀನಾರಾಯಣನು ಅನಾದಿ ಕಾಲದಿಂದಲೂ ಒಬ್ಬನೇ ಇದ್ದನು. ನಂತರ ತಾನೇ ಅನೇಕ ರೂಪಗಳನ್ನು ಪಡೆದ. (ಅವತಾರಗಳನ್ನು ಹೊಂದಿದ) ಅನೇಕ ರೂಪವೆಂದರೆ ಸ್ವರೂಪಾಂಶ, ಆವಿಷ್ಟರೂಪ ಮತ್ತೂ ಭಿನ್ನಾಂಶವೆಂದು. ಸ್ವರೂಪಾಂಶ ಅವತಾರಗಳು ಮೂಲ ರೂಪದಂತೆ ಪೂರ್ಣ, ಜ್ಞಾನ ಆನಂದಾದಿ

ಸಮಸ್ತ ಗುಣಗಳು ಸ್ವರೂಪಕ್ಕೂ ಅವತಾರಗಳಿಗೂ ಅಭೇದವಿರುವುದು. (ಪೂರ್ಣಮದ = ಪೂರ್ಣಮಿದಂ) ಕಪಿಲ, ರಾಮಕೃಷ್ಣ ಪರಶುರಾಮ ರೂಪಗಳು ಪೂರ್ಣವೇ ಅಂಶ– ಅಂಶದಲ್ಲಿ ಅಭೇದವಿರುವುದು.

(೨) ಆವಿಷ್ಠರೂಪ ಬಲರಾಮರಲ್ಲಿ ಆವಿಷ್ಠನಾಗಿದ್ದಾಗ ಮಾತ್ರ ಸ್ವಲ್ಪ ನಾರಾಯಣನ ವೀರ್ಯ ಜ್ಞಾನ ಕಾಣುತ್ತೇವೆ.

(೩) ಜೀವರಗಳು ಭಿನ್ನಾಂಶರು. ಭಗವಂತನ ಏಕದೇಶ ಗುಣವಿದ್ದರೂ ಪರಮಾತ್ಮನಿಗಿಂತ ಅತ್ಯಂತ ಭಿನ್ನರೇ. ಆದರೆ ಭಿನ್ನಾಂಶವಿದೆ ಅಂದರೆ ಜೀವರಗಳು ಅಜ್ಞಾನ ದುಃಖ ಬದ್ಧರು ಆಗಿರುತ್ತಾರೆ. ಜೀವರುಗಳು ದೇಹ ಪಡೆದಾಗ ಜನನ, ದೇಹ ಪತನವಾದಾಗ ಮರಣ ರೂಪ ದುಃಖವಿರುವುದು. ಭಗವಂತನಿಗೆ ಹಾಗೇನಿಲ್ಲ. ದೇಹದಿಂದಲು (ಸ್ವರೂಪದಿಂದಲೂ) ನಿತ್ಯ ಅವತಾರಗಳಲ್ಲಿಯೂ ನಿತ್ಯ. ಅಲ್ಲಿ ಸರ್ವಜ್ಞತ್ವ ಸರ್ವಕರ್ತೃತ್ವ ಜ್ಞಾನಾಂದಮಯ ಸೃಷ್ಟಿಕರ್ತೃತ್ವ ಎಲ್ಲವೂ ಇರುವುದು. ಭಗವಂತನು ಹುಟ್ಟಿದನೆಂದರೆ ಪ್ರಾದುರ್ಭವವೆಂದು ತಿಳಿಯಬೇಕು. ಮಾನವರಂತೆ ಜನನ ಮರಣಾದಿಗಳು ಶ್ರೀಶನಲ್ಲಿ ಇರುವುದಿಲ್ಲ.

ಇದನ್ನೇ ಶ್ರೀಮದ್ಭಾಗವತದಲ್ಲಿ **''ತೇಜೋವಾರಿ ಮೃದಾ''** ಎಂದು ತಿಳಿಸಲಾಗಿದೆ. ಹೀಗೆ ಪರಮಾತ್ಮನಲ್ಲಾದ ಏಕತ್ವವನ್ನು ಅವತಾರಗಳ ವಿಷಯ ತಿಳಿದಾಗ ಅನೇಕತ್ವವನ್ನು ತಿಳಿದರೂ ದೋಷಬರುವುದಿಲ್ಲ. ಹೀಗೆ ಅರ್ಥ ಮಾಡದೇ ಯದ್ವಾತದ್ವಾ ತೋಚಿದ ಅರ್ಥ ಬರೆದು ತಾವೂ ಕೆಡದೇ ಅನ್ಯರನ್ನು ಹಾಳುಮಾಡುತ್ತಾರೆ.

ಇಂತು ಶಾಸ್ತ್ರಸಮ್ಮತವಾದ ವಿಷಯಗಳನ್ನು ತಿಳಿದು ಭಗವಂತನ ಅನುಗ್ರಹಕ್ಕೆ ಪಾತ್ರರಾಗಿ ಶ್ರೀಹರಿಯನ್ನು ಕರುಣಿಸು ಎಂದು ಪ್ರಾರ್ಥಿಸಬೇಕು.

ಭಗವಂತ ಅಗೋಚರ. ಆದರೆ ಕಾಣಿಸುತ್ತಾನೆ. ಎಲ್ಲ ಅಂದರೆ ಸೂರ್ಯನಲ್ಲಿ ಅಂತರ್ಯಾಮಿಯಾಗಿ ನಿತ್ಯ ಬೆಳಗಿನಿಂದ ರಾತ್ರಿಯವರೆಗೂ ನೋಡುತ್ತೇವೆ.

ಇಂತಹ ಪ್ರತ್ಯಕ್ಷದೇವನಾದ ಸೂರ್ಯಾಂತರ್ಗತ ನಾರಾಯಣನನ್ನು ಪ್ರಾರ್ಥಿಸಿ ಹೇ ದೇವ ದೇವ ನಿನ್ನ ಭವ್ಯದರ್ಶನ ಕೊಡು. ನಾನು ನಿನ್ನನ್ನು ಕಾಣಲು ಅಧಿಕಾರವಿದೆ ಅಂತ ತಿಳಿದು ದರ್ಶನ ಭಾಗ್ಯಕೊಡು ಅಂತ ಪ್ರಾರ್ಥಿಸಬೇಕು. ಇದನ್ನು ಮುಂದಿನ ಮಂತ್ರವು ತಿಳಿಸುತ್ತದೆ.

**ಮಂತ್ರ ೧೫**

**ಹಿರಣ್ಮಯೇನ ಪಾತ್ರೇಣಸತ್ಯಸ್ಯಾಪಿಹಿತಂ ಮುಖಮ್ ।**
**ತತ್ತ್ವಮ್ ಪೂಷನ್ನಪಾವೃಣು ಸತ್ಯಧರ್ಮಾಯ ದೃಷ್ಟಯೇ ॥**

ಉಪನಿಷತ್ತಿನಲ್ಲಿ ಮೊದಲಿನ ಎರಡು ಮಂತ್ರಗಳಿಂದ ವೈರಾಗ್ಯ ಪ್ರಕರಣವನ್ನು



ತಿಳಿಸಿ ಕರ್ಮವನ್ನು (ಸ್ವವಿಹಿತ) ಅವಶ್ಯ ಮಾಡಬೇಕು. ಮಾಡುವಾಗ ನಿಷ್ಕಾಮನಾಗಿ ಪರಮಾತ್ಮನೇ ಸ್ವತಂತ್ರನು. ಅವನಿಂದ ಅನುಗ್ರಹದಿಂದಲೇ ಜೀವನ ನಡೆಸಬೇಕು. ಭಗವಂತನು ಪ್ರಸನ್ನನಾಗಿ ತನ್ನ ಸ್ವರೂಪವನ್ನು ಅವನ ವಿಷಯಕ ತತ್ವಜ್ಞಾನವನ್ನು ದಯಪಾಲಿಸಿ ಮೋಕ್ಷವನ್ನು ದಯಪಾಲಿಸುತ್ತಾನೆ ಎಂದು ಸಮೀಚೀನ ಜ್ಞಾನ ಪಡೆಯುವುದಷ್ಟೇ ಸಾಲದು. ಭಗವಂತನ ಅನುಗ್ರಹಕ್ಕೆ ಪಾತ್ರರಾಗಲು ಆ ಶ್ರೀಹರಿಯನ್ನು ಸ್ವಾಮೀ ನಿನ್ನ ಆನಂದಗುಣಮಯವಾದ ಸ್ವರೂಪವನ್ನು ನಾನು ನೋಡಲು ಯೋಗ್ಯನೆಂದು ನಿನಗೆ ಅನಿಸಿದರೆ ಆ ದಿವ್ಯ ರೂಪವನ್ನು ತೋರಿಸಿ ಕರುಣಿಸು ಎಂದು ಬೇಡಬೇಕು.

**ಮನ್ಯಸೇ ಯದಿ ತಚ್ಛಕ್ಯಂ ಮಯಾ ದ್ರಷ್ಟುಮಿತಿ ಪ್ರಭೋ ।**
**ಯೋಗೇಶ್ವರ ತತೋ ಮೇ ತ್ವಂ ದರ್ಶಯಾತ್ಮಾನಮವ್ಯಯಮ್ ॥** (ಗೀತಾ ಅ.–೧೧)

ಹೇ ಸ್ವಾಮಿಯೇ, ನಿನ್ನ ರೂಪವು ಬಂಗಾರದಂತೆ ಅದರಿಗಿಂತಲೂ ಅತ್ಯಂತ ಪ್ರಕಾಶಮಾನದ ಸರ್ವ ವಸ್ತುಗಳ ರಸಗಳನ್ನು ಹೀರುವುದರಿಂದ ಪಾತ್ರ. ಜಗತ್ತನ್ನು ರಕ್ಷಿಸುವುದರಿಂದ ನೀನು ಸೂರ್ಯಮಂಡಲದಲ್ಲಿ ತದಂತರ್ಯಾಮಿಯಾಗಿದ್ದುಕೊಂಡಿರುವ ಸಕಲ ಸದ್ಗುಣಗಳಿಂದ ಪರಿಪೂರ್ಣನಾಗಿರುವಿ. ಇಂತಹ ನಿನ್ನಯ **ಪೂಷನ್** ಸರ್ವ ವಿಷಯಗಳನ್ನು ಮುಖ್ಯ ಜ್ಞಾನಕ್ಕೆ ಕಾರಣನಾದುದರಿಂದ **ಏಕರ್ಷ** ಶಬ್ದ ವಾಚ್ಯವಾಗಿದ್ದ ನಿನ್ನ ಮುಖವನ್ನು (ಮುಖವೇ ಆದಿಯಾಗಿ) ನಿನ್ನ ಪೂರ್ಣ ರೂಪ ವನ್ನು ಪ್ರಕಾಶವನ್ನಾಗಿ ಮಾಡು ಏಕೆಂದರೆ ಸೂರ್ಯಮಂಡಲವು ಮೇಘಗಳಿಂದ ಮುಚ್ಚಲ್ಪಟ್ಟಿದೆ. ಆ ಆವರಣವನ್ನು ದೂರಸರಿಸು. ಆಗ ನಾನು ನಿನ್ನ ಸತ್ಯನಾಮಕ ನಿನ್ನನ್ನು ನನ್ನ ಹೃದಯದಲ್ಲಿ ಧರಿಸೇನು. ಈ ಒಂದು ಪರಮೋಪಕಾರ ನನ್ನಗೋಸ್ಕರ ಪ್ರಕಾಶಿಸುವಂತೆ ಮಾಡಿ ನಿನ್ನ ದರ್ಶನ ಪಡೆದೆನು.

ಭಕ್ತನಾದ ನನಗೆ ದಿವ್ಯದೃಷ್ಟಿ ಪ್ರಧಾನ ಮಾಡಿ ನಿನ್ನ ಕಲ್ಯಾಣತಮವಾದ ರೂಪ ಸೌಂದರ್ಯವನ್ನು ಕಂಡು ನನ್ನ ಹೃದಯದಲ್ಲಿ ದೃಢವಾಗಿ ಧರಿಸುತ್ತೇನೆ.

**ಮಂತ್ರ ೧೬**

**ಪೂಷನ್ನೇಕರ್ಷೇ ಯಮಸೂರ್ಯ ಪ್ರಾಜಾಪತ್ಯ**
**ವ್ಯೂಹರಶ್ಮೀನ್ ಸಮೂಹತೇಜೋ ।**
**ಯತ್ತೇರೂಪಂ ಕಲ್ಯಾಣತಮಂ ತತ್ತೇಪಶ್ಯಾಮಿ**
**ಯೋಽಸಾವಸೌ ಪುರುಷಃ ಸೋಽಹಮಸ್ಮಿ ॥**

**ವಿವರಣೆ :** ಹೇ ಸ್ವಾಮಿ ನೀನು ಪರಿಪೂರ್ಣನು ಸರ್ವನಿಯಾಮಕನು ಸರ್ವಜ್ಞನು **ಏಕರ್ಷಿ** ಶಬ್ದ ವಾಚ್ಯನಾದ ಒಬ್ಬ ಋಷಿಯಲ್ಲಿ ಸನ್ನಿಹಿತನಾಗಿರುವೆ. ಸರ್ವರಿಗೂ ನಿಯಾಮಕನು (ಯಮ ಶಬ್ದ ವಾಚ್ಯನಾದ ಯಮಾಂತರ್ಯಾಮಿಯಾಗಿ ಜ್ಞಾನಗಮ್ಯನು ಸೂರ್ಯಾಂತರ್ಯಾಮಿಯಾಗಿ ಹೇ ನಾರಾಯಣನೇ) ಪ್ರಜಾಪತಿ ವಾಚ್ಯನಾದ

ಚತುರ್ಮುಖ ಬ್ರಹ್ಮದೇವರಲ್ಲಿ ಸನ್ನಿಹಿತನಾಗಿ ಲೋಕದಲ್ಲಿ ಎಲ್ಲಾ ಪ್ರಜೆಗಳಿಗೆ ತಂದೆಯಂತೆ ಪಾಲನ ಲಾಲನ ಕರ್ತನಾಗಿರುವೆ. ಇಂತಹ ಅನೇಕ ಗುಣಭರಿತನಾದ ನೀನು ನನ್ನ ಸ್ವರೂಪಜ್ಞಾನವನ್ನು ನನ್ನ ಯೋಗ್ಯತೆಗೆ ತಕ್ಕಂತೆ ವಿಸ್ತರಿಸು. ಇದರಿಂದಾಗಿ ನಿನ್ನ ಅನಂತಾನಂತ ಕಲ್ಯಾಣ ಗುಣಗಳುಳ್ಳ ಕಲ್ಯಾಣ ಮಂಗಳಕರವಾದಿ ರೂಪವನ್ನು ನೋಡಬಯಸುವವನಾದ ನನಗೆ ಪ್ರಕಟನಾಗು.

**ವಿಶೇಷಾಂಶ :** ಈ ಲೋಕವು ಪರಮಾತ್ಮನಿಂದ ಪ್ರೇರಿತವಾದ ಮಹತ್ವವನ್ನು (ಸ್ಪಂದನ ಲಹರಿ) Vibrations ಹಾಗೂ ಬ್ರಹ್ಮಾಂಡಕಿರಣ (Cosmic Rays)ಗಳ ವಿಶಿಷ್ಟ ಸಯುಕ್ತಿಕವಾಗಿ ಕಾರ್ಯವನ್ನು ಮಾಡುತ್ತದೆ. (Modern Science) ಆಧುನಿಕ ವಿಜ್ಞಾನ ತಿಳಿಸಿದಂತೆ ಈ ಭೌತಿಕ ಜಗತ್ತಿನ ಪಾರಿಭಾಷಿಕ (Technical words)ವಿಚಾರವನ್ನು ಸಂವಾದಿಯಾಗಿರುವುದು. Solar Energy ಸೌರಶಕ್ತಿ ಬಗ್ಗೆ ವಿಸ್ತಾರವಾದ ಲೇಖನ Dr. Harman Overth ಎಂಬುವವರು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ಸೂರ್ಯನಲ್ಲಿ ಇಷ್ಟೊಂದು ಮಹಾಶಕ್ತಿ ಬಂದಿದೆ ಅಂದರೆ ಆ ಶಕ್ತಿಪ್ರದನೊಬ್ಬ ವ್ಯಕ್ತಿ ಒಳಗಿರಲೇಬೇಕು. Sun is an inanimate object by itself cannot emit crores of rays with which solar energy can be converted into Electrical energy. This energy helps to travel anywhere and it sources innummerable life cells. This is no ordinary power as we see today. There must be some Hidden unseen animate source of power. Such hidden power according to Vedic Scholars is the Lord of this Universe ಹೀಗೆ ವಿವರಿಸಲಾಗಿದೆ.

ಜಗತ್ತಿನ ಆಗು ಹೋಗುಗಳನ್ನು ನಮ್ಮ ಭೌತಿಕ ಕಣ್ಣಿನಿಂದ ಕಾಣಬಬುದು. ಹೀಗಿರಬೇಕಾದರೆ ಸೂರ್ಯಾಂತರ್ಯಾಮಿಯಾಗಿ ಕಾಣದೇ ಇರುವ ಆ ಪ್ರತ್ಯಕ್ಷನಾದ ಸ್ವಾಮಿ ಅದೆಷ್ಟು ಉಪಕಾರ ಮಾಡಿರುತ್ತಾನೆ ಎಂದು ತಿಳಿಯಲು ನಮ್ಮ ಕಲ್ಪನೆಗೆ ಮೀರಿದೆ. ಹೀಗೆ ವೇದ ಪುರುಷ ಪರಮಾತ್ಮನನ್ನು ಪ್ರಾರ್ಥಿಸುತ್ತಾನೆ.

ಇಂತಹ ಅಚಿಂತ್ಯಾದ್ಭುತ ಶಕ್ತಿವುಳ್ಳ ಪರಮಾತ್ಮನೇ ತಾನು ಪುರುಷವಾಚ್ಯನಾಗಿ ತಾನು ಸರ್ವಾಂತರ್ಯಾಮಿಯಾಗಿ ಜ್ಞಾನಿಯೂ ಜ್ಞೇಯನೂ ಆಗಿರುವನೆಂದು ತಿಳಿಸುತ್ತಾರೆ.
**"ಯೋಽಸಾವಸೌ ಪುರುಷಃ ಸೋಽಹಽನುಸ್ಮಿ"**

**ವಿವರಣೆ : ಅಸೌ** = ಅಂದರೆ ಮುಖ್ಯಪ್ರಾಣನೇ ಆದಿ. ಎಲ್ಲಾ ದೇವತೆಗಳ ಅಂತರ್ಯಾಮಿ ಇರುವ **ಅಸೌ** = ಪುರುಷ ಅತ್ಯದ್ಭುತ ಮಹಿಮೆಯುಳ್ಳ ಹಾಗೂ ಷಡ್ಗುಣೈಶ್ವರ್ಯ ಸಂಪನ್ನನಾದ ಶ್ರೀಹರಿ **ಯಃ:ಸ:** = ಅಂತ ತಿಳಿದಿರುವವನು ತಾನೇ ಅವನು ಆಗಿದ್ದಾನೆ. ನಾನೇ ಆ ಗುಣಭರಿತನಾಗಿರುತ್ತೇನೆ ಅಂತ ತಿಳಿಸಲು **ಅಹಾ** = ಸರ್ವಾಂತರ್ಯಾಮಿ ಆಗಿರುತ್ತೇನೆ. (ಅಹೇಯನಾದ ದೋಷದೂರನಾದ್ದರಿಂದ ಅಹಂ ಶಬ್ದಿತನಾಗಿರುತ್ತೇನೆ. **ಅಸ್ಮಿ** – ಸದಾಕಾಲದಲ್ಲಿಯೂ ಇರುವೆನೆಂದು ಹೀಗೆ ಯೋಗ್ಯ ಸಾತ್ವಿಕರು ತಿಳಿದಿರುತ್ತಾನೆ.



ಹಿಂದಿನ ಮಂತ್ರಗಳಲ್ಲಿ ಭಗವನ್ಮಹಿಮೆಯನ್ನು ನಿರವಕಾಶ ವಾಕ್ಯಗಳಿಂದ ತಿಳಿಸಿ ಅಂತಹ ಅನಂತಗುಣಪೂರ್ಣ ನಾನೇ. ಎಲ್ಲರ ಪ್ರೇರಕನಾಗಿದ್ದೇನೆ. ಅಂತೆ **ಅಹಂ** ಆಗಿರುವೆನು. **"ಮದಂತರ್ಯಾಮಿ"** ಎಂದು ಅರ್ಥೈಸಬೇಕು. ಅಹಂ ಶಬ್ದದಿಂದ ಜೀವನು ಬ್ರಹ್ಮನೇ ಆಗಿದ್ದೇನೆ ಅಂತ ಅರ್ಥ ಮಾಡಬಾರದು. ಏಕೆಂದರೆ **ಅಹಂ** ವಾಕ್ಯವು ಹೇಯದೋಷರಹಿತನೆಂದು ತಿಳಿದು ಬರುವಾಗ ಜೀವನನ್ನು ತಿಳಿಸುತ್ತದೆ ಅಂತ ಹೇಳಿದರೆ ವ್ಯಾಹತವಾಗುವುದು.

**ಒಂದು ವಾಕ್ಯಕ್ಕೆ** ಶ್ರೀಮದಾಚಾರ್ಯರು ಹಾಗೂ ಮಂತ್ರಾಲಯ ಪ್ರಭುಗಳು ಸಮೀಚೀನ ಅರ್ಥ ಮಾಡಿದ್ದಾರೆ.

**ಖಂಡಾರ್ಥ : ಯೋಽಸೌ ಸಿದ್ಧೋಽಸೌ ಮುಖ್ಯಂ ಪ್ರಾಣೇಸ್ಥಿತಃ ಇತಿ ತೇಷಃ । ಸೋ ಅಹೇತ್ವದಹಮತ್ಯುಕ್ತ ಸದಾ ಅಸ್ತಿತ್ವೇನ ಮೇಯತ್ವ ಹೇ ತುನ ಅಸ್ಮೀತೀ ತಿಃ ಈ ಪ್ರತಿರೂಪ ಕಾವ್ಯ ಯುಪವಾಚಕೆ । ತಂ ಪಶ್ಚಾಮೆ ಇತ್ಯರ್ಥಃ । ಯದ್ವಾ ಅಸಾವಸಾವಿತಿ ದ್ವೇ ಯುಮಪಿ ಪ್ರಥಮಾಂತ ಮೇ (ವಾ) ವೀಪ್ಸಾಯಾಂ ದ್ವಿರುಕ್ತಿ ಪೂರ್ವಂ ಪೂಷಾದಿಶಬ್ದೇಕರೂಪಲಕ್ಷಣತಯೋ ಪ್ರಾಣಾದ್ಯನೇಕ ಪ್ರತೀಕಸ್ಥತ್ವಂ ವಿಷ್ಣೋಪಕ್ತಂ। ತತ್ರಭೇಧಶಂಕಯಾಂ ಯಾಽನಾವಿತಿ ವಾಕ್ಯಮುಚ್ಯತೆ । ಯೋಽವಸಾ ಪುರುಷಃ (ಪೂಷಾಡ್ಯ) ಪ್ರಾಣಾದ್ಯನೇಕ ಪ್ರತೀಕೇಷಂ ಸ್ಥಿತಃ ಸೋಽಹಮಸ್ಮಿ ಮದಂತರ್ಯಾಮಿತಯಾಽಸ್ಥಿತ್ಯರ್ಥಃ। ಸರ್ವಪ್ರತೀಕೇಷ ॥ ಮಯೀಚೆ ಸ್ಥಿತಂ ಏಕ ಏವೇತಿ ಫಲಿತಾಽರ್ಥೋಃ ಅಹಂಪದಸ್ಯ ಪ್ರತ್ಯಗಾತ್ಮ ಜೀವಾಂತರ್ಯಾಮಿತಯಾತತ್ಸಮಭಿ ವ್ಯಾಹಾರಾದಸ್ಮಿತ್ಯುಕ್ತ ಮ ಪುರುಷ ಪ್ರಯೋಗೇಽಪಿ ಸಾಧುರೇವೇತಿಜ್ಞೇಯಂ**

ಇಷ್ಟು ಸ್ಪಷ್ಟವಾಗಿ ಮುಖ್ಯಪ್ರಾಣಾದಿಗಳಲ್ಲಿ ಹೇಗೆ ಅಂತರ್ಯಾಮಿಯಾಗಿರುವನೋ ಅಂತೆಯೇ ಜೀವನಾದ ನನ್ನಲ್ಲಿಯೂ ಅಂತರ್ಯಾಮಿ ಆಗಿರುತ್ತಾನೆ ಅಂತ ತಿಳಿಸಲು ಪ್ರವೃತ್ತವಾಗಿದೆ. ಎಲ್ಲಿಯೂ ಯಾವ ರೀತಿಯಿಂದಲೂ ಹಿಂದೆ ಮುಂದೆ ವಿಚಾರ ಮಾಡಿದಾಗ ಜೀವ ಬ್ರಹ್ಮೈಕ್ಯ ಭಾವ ಯುಕ್ತಿಯಿಂದಲೂ ಕೂಡುವುದಿಲ್ಲ. ಆಯಿತು **ಇಲ್ಲಿ ಪ್ರಶ್ನೆ ಏನೆಂದರೆ** ಪರಮಾತ್ಮನು ಸರ್ವಾಂತರ್ಯಾಮಿ ಹಾಗೂ ಮನುಷ್ಯ ದೇಹಾಂತರ್ಯಾಮಿ ಅಂತ ತಿಳಿಸಿದಿರಿ. ಆಗ ಮಾನವ ಶರೀರ ನಾಶವಾದಾಗ ತದಂತರ್ಯಾಮಿಯಾದವನೂ ನಾಶ ಹೊಂದಬಹುದಲ್ಲ. ಏಕೆಂದರೆ, ಶರೀರ ನಾಶೇ ಜೀವ ನಾಶ. ಜೀವನಾಶೇ ಅಂತರ್ಯಾಮ್ಯಪಿ ಕಿಂನಾಶೋ ಭವತೀ । ಕಥಃ ಇತ್ಯಾದಿ ಶಂಕಾ ನಿರಸಯತಿ **"ವಾಯುರ ನಿಲೇತಿ"**

ಈ ರೀತಿಯ ಶಂಕೆಗೆ ಅವಕಾಶವೇ ಇರುವುದಿಲ್ಲ. ಪ್ರಥಮತಃ ಶರೀರ ನಾಶೇ ಜೀವನಾಶಃ ಎಂಬ ತಾರ್ಕಿಕರ ಮಾತು ಇಲ್ಲಿ ಕೂಡುವುದಿಲ್ಲ. ಶರೀರ ನಾಶವಾದಾಗ

ಜೀವ ನಾಶವಾಗುತ್ತಾನೆ ಎಂದು ಎಲ್ಲಿಯೂ ಹೇಳಿಲ್ಲ. ಇದು ಅಸಂಗತ ಅಪ್ರಮಾಣ. ಇನ್ನು ಶರೀರ ನಾಶವಾಗುವುದು ನಿಶ್ಚಯ. ಆದರೆ ಜೀವನು ನಿತ್ಯನು, ನಾಶರಹಿತನು ಎಂಬ ವಿವರಣೆ ವಿಷದವಾಗಿ ಗೀತೆಯಲ್ಲಿ ಶ್ರೀಕೃಷ್ಣಪರಮಾತ್ಮನು ಎಷ್ಟೋ ಸಲ ಹೇಳಿರುತ್ತಾನೆ. **ಅಜೋ ನಿತ್ಯ ಶಾಶ್ವತೋಽಯಂ ಪುರಾಣಂ ನಹನ್ಯತೇ ಹನ್ನ ಮಾನೇ ವಿದೇಹೇ** (ಶರೀರೆ)

ಜೀವನು ಶಾಶ್ವತ, ನಿತ್ಯ ದೇಹಾದಿಗಳು ಎಂದಿಗಾದರೂ ನಾಶ ಹೊಂದಲೇಬೇಕು. ಇದೇ ಎಲ್ಲರ ಅನುಭವ. ಹೀಗೆ ಜೀವನು ನಾಶರಹಿತನಾದಾಗ ತದಂತರ್ಯಾಮಿ ಪ್ರಾಣಾದಿ ದೇವತೆಗಳು ಹಾಗೂ ಸರ್ವಸ್ವಾಮಿ ನಿತ್ಯರೆಂದು ಕೌಮುತ್ಯ ನ್ಯಾಯದಿಂದ ತಿಳಿದುಬರುತ್ತೆ.

ಮನುಷ್ಯ ಗುಣದೋಷಗಳೆಂಬ ಉಪಾಧಿಗಳಿಗೆ ಪರಮಾತ್ಮನು ಇದಕ್ಕೆ ಅಪವಾದವಾಗಿರುತ್ತಾನೆ. ಆದರೂ ಶಂಕ, ಶ್ರೀಹರಿ ನಾಶವಾಗುವ ದೇಹದಲ್ಲಿ ಆಶ್ರಿತನಾದ್ದರಿಂದ ಅನಿತ್ಯನೆಂದು ಅನಿಸಿಕೊಳ್ಳುವುದಿಲ್ಲವೇ ? ಇದು ಅಪ್ರಾಮಣ ಶಂಕ ಶರೀರಾದಿಗಳಲ್ಲಿ ದೇಹಕ್ಕೆ ಆಶ್ರಯನೇ ಹೊರತು ದೇಹಾದಿಗಳಿಗೆ ಆಶ್ರಿತನಾಗುವುದಿಲ್ಲ. ಕಾರಣ ಸ್ವಾಮೀ ಪರಮನಿತ್ಯನು ಆಶ್ರಿತ ಪದಾರ್ಥ ನಾಶವಾಗಬಹುದು. ಆದರೆ, ಆಶ್ರಯನಾದ ಸ್ವಾಮಿಗೆ ನಾಶವೆಂಬುದು ಬರುವುದಿಲ್ಲ. ಅದೇ ರೀತಿ ಮುಖ್ಯಪ್ರಾಣದೇವರು ಲಿಂಗಶರೀರ ನಾಶವಿದ್ದರೂ (ಜೀವನಿಗೆ) ಮಾತ್ರ ನಿತ್ಯವಾದ ಜ್ಞಾನ ಸಹಿತರು ಎಂದೇ **ಮಾತರಿಶ್ವಾ** ಎಂಬುದನ್ನು ಬ್ರಹ್ಮಸೂತ್ರದಲ್ಲಿ ನಿರ್ಣಯಿಸಲ್ಪಟ್ಟಿದೆ. ಪ್ರಾಣದೇವರು ಸ್ವತಂತ್ರರಲ್ಲ. ಅವರು **"ಅ"**ಕಾರ ಶಬ್ದ ವಾಚ್ಯನಾದ ಪರಮಾತ್ಮನಲ್ಲಿ ಆಶ್ರಿತರಾಗಿದ್ದಾರೆ. **(ಅಕಾರ ಸರ್ವವಾಗಾತ್ಮ ಪರಬ್ರಹ್ಮಾದಿ ದಾಯಕಃ)** ಆಶ್ರಿತರಾದ ವಾಯುದೇವರೇ ನಿತ್ಯರಾಗಿದ್ದಾರೆಂದ ಮೇಲೆ ಇನ್ನೂ ಆಶ್ರಯದಾತನಾದ ಪರಮಾತ್ಮನು ನಿತ್ಯನಷ್ಟೇ ಅಲ್ಲ. ಪರಮನಿತ್ಯನೆಂದು ಪ್ರತ್ಯೇಕ ಹೇಳಬೇಕಿಲ್ಲ.

**"ವಾಯುರನಿಲಯ ಮೃತ ಮಥೇದಂ ಭಸ್ಮಾಂತಗುಂ ಶರೀರಮ್"** ಎಂಬ ಮಂತ್ರದಲ್ಲಿ ತಿಳಿಸಲಾಗಿದೆ. ಪರಮಾತ್ಮನೊಬ್ಬನೇ ನಿತ್ಯನಷ್ಟೇ ಅಲ್ಲದೆ ಚತುರ್ವಿಧ ನಾಶರಹಿತನು.

**ಅನಿತ್ಯತ್ವಂ ದೇಹಹಾನಿಃ ದುಃಖ ಪ್ರಾಪ್ತಿರಪೂರ್ಣತಾ ।**
**ನಾಶಶ್ಚತುರ್ವಿಧ ಪ್ರೋಕ್ತ ತದಭಾವೋ ಹರಿಃ ಸದಾ ॥** ಎಂಬುದು ಪ್ರಮಾಣ.

ಶ್ರೀಮದಾಚಾರ್ಯರು ಭಾಷ್ಯದಲ್ಲಿ ಸಯುಕ್ತವಾಗಿ ಪ್ರಮಾಣಗಳಿಂದ ಸಾಧಿಸಿರುತ್ತಾರೆ. ಆದರೆ ಮಾಯಾವಾದಿಗಳು ಈ ಮಂತ್ರದಲ್ಲಿ ಮರುಣೋನ್ಮುಖನಿಗಾಗಿ ಉಪಾಸನಾ ಮಾಡುವ ವಿಧಿಯನ್ನು ಹೇಳಿದೆ ಅಂತ ತಿಳಿಸಿರುತ್ತಾರೆ. ಇದು ಕೇವಲ



ಕಾಲ್ಪನಿಕ ಮಕ್ಕಳ ಮಾತಿನಂತೆ ಇರುವುದು. ಇಂತು ಭಗವಂತನ ಮಹಿಮೆಯನ್ನು ತಿಳಿಸಿ ಅದನ್ನು ಯೋಗ್ಯ ಸಾತ್ವಿಕ ಜೀವಿ ಪ್ರಾರ್ಥಿಸಿ ಭಗವಂತನನ್ನು ಹೇ ದೇವಾದಿ ದೇವಾ ನಾನು ಏನಾದರೂ ಅಲ್ಪಸಾಧನೆಯನ್ನು ಮಾಡಿದ್ದರೆ ಅದೂ ಸಹ ನಿನ್ನ ಪರಮಾನುಗ್ರಹದಿಂದಲೇ ಮಾಡಿದ್ದೇನೆ ಅಂತ ನಿನ್ನ ಚಿತ್ತಕ್ಕೆ ಬಂದರೆ ಅದನ್ನು ರಕ್ಷಿಸಿ ನನ್ನ ಮೇಲೆ ಅನುಗ್ರಹೋನ್ಮುಖನಾಗು. ನೀನು ಸರ್ವಜ್ಞ. ಎಲ್ಲವನ್ನೂ ತಿಳಿದಿರುವೆ. ನಿನಗೆ ಜ್ಞಾಪಿಸಬೇಕೆಂಬುದಿಲ್ಲ. ಆದರೂ ನಾನು ಅಲ್ಪನು. ಪ್ರಾರ್ಥನೆ ಮಾಡುತ್ತೇನೆ. ಪರಮೇಶ

**ಓಂ ಕೃತೋ ಸ್ಮರ ಕೃತಂ ಸ್ಮರ ಕ್ರತೋ ಸ್ಮರ ಕೃತಂ ಸ್ಮರ**

ಕೊನೆಗೆ ಪ್ರಣವ ಪ್ರತಿಪಾದ್ಯ ಶ್ರೀಹರಿಯನ್ನು ಸ್ತೋತ್ರ ಮಾಡಲಾಗಿದೆ.

**ಓಂ** = ಸಕಲಗುಣ ಪರಿಪೂರ್ಣನೆಂದೂ ತಿಳಿಯಲು ಪ್ರಣವ ಮಂತ್ರವನ್ನು ತಿಳಿಸಲಾಗಿದೆ.

**ಸ್ಮರ** ಶಬ್ದಕ್ಕೆ ಜ್ಞಾಪಕಕ್ಕೆ ತಂದುಕೋ ಎಂಬ ಅರ್ಥ ಮಾಡಿದ್ದರೆ ಭಗವಂತ ಮರೆತು ಹೋಗಿದ್ದಾನೆ. ಈಗ ನೆನಪಿಗೆ ತಂದುಕೋ ಎಂಬುದು ಶ್ರೀಹರಿಯಲ್ಲಿ ದೋಷಾರೂಪಣೆ ಮಾಡಿದಂತೆ ಆಗುವುದು. ಅದಕ್ಕಾಗಿ **ಸ್ಮರ** ಶಬ್ದಕ್ಕೆ ಅನುಗ್ರಹಿಸಿ ಎಂದು ಭಗವಂತನಲ್ಲಿ ಬೇಡ ಬೇಕು ಎಂದು ಶ್ರೀಮದಾಚಾರ್ಯರು ಬ್ರಹ್ಮತರ್ಕದ ಪ್ರಮಾಣ ತಿಳಿಸಿದ್ದಾರೆ.

**ಭಕ್ತಾನಾಂ ಸ್ಮರಣಂ ವಿಷ್ಣೋಃ ನಿತ್ಯಜ್ಞಪ್ತಿಸ್ವರೂಪತಃ । ಅನುಗ್ರಹೋನ್ಮುಖತ್ವೆಂತು ಗೈವಾನ್ಯತ್ಕ್ವಚಿತ್ ॥**

**ಖಂಡಾರ್ಥ = ಅಥ ಪ್ರಣವ ಪ್ರತೀಕಂ ಪ್ರಾರ್ಥಯತೇ । ಓಂ ಇತಿ ॥ ಓಂ ತತ್ವಾದಿ ಗುಣರ್ಯುಕ್ತತಯಾ ಓಂ ಮಿತ್ಯಚ್ಯಮಾನ ॥ ಕ್ರತೋ ಜ್ಞಾನ ರೂಪಹರೇ । ಮಾಮಿತಿಶೇಷಃ। ಸ್ಮರ ಅನುಗ್ರಹಣ ಕೃತಂ ಮದೀಯಂ ಧ್ಯಾನಾದಿಕಂ ಕರ್ಮ ಸ್ಮರ॥ ಧ್ಯಾನಾದಿನಾ ಮಯಾ ಕೃತೇನ ಮಯ್ಯೈನುಗ್ರಹೋನ್ಮುಖೋ ಭವೇತ್ಯರ್ಥಃ। ನಿತ್ಯಜ್ಞಪ್ತಿ ಸ್ವರೂಪಸ್ಯ ಸಂಸ್ಕಾರ ಜನ್ಯಸ್ಮರಣಾಯೋಗತ್ ಅಭ್ಯಾಸಸ್ತಾತ್ಪರ್ಯಃ॥**

**ಸ್ಮರ ಸ್ಮರ** ಎಂದು ಎರಡು ಸಲ ಹೇಳಿರುವುದು ಪ್ರಾರ್ಥನಾಯಾಂದ್ವಿರುಕ್ತಿಃ ಎಂದು ತಿಳಿಯಬೇಕು. (ಎರಡು ಸಲ ಸ್ಮರ ಸ್ಮರವೆಂದಿದೆ. ಇದು ದ್ವಿರುಕ್ತ ಎಂಬುದು ದೋಷವು. ಆದರೆ ವ್ಯಾಕರಣ ಪ್ರಕಾರ **"ಆದರಾರ್ಥೇ ವೀಪ್ಸಾಯಾಂ ಪ್ರಾರ್ಥನಾಯಾಂ ದ್ವಿರುಕ್ತಿ"** ಎಂದು ತಿಳಿದಾಗ ದೋಷವಲ್ಲ. (೧) ಆದರೆ ಗೌರವವನ್ನು ಸೂಚಿಸಲು ಹೇಳುವುದು (೨) ಯಾಥ್ಯಾರ್ಥದಲ್ಲಿಯೂ ಎರಡು ಸಲ ಉಪಯೋಗಿಸುವುದು.

ಉದಾ: (೧) ಗುರುಗಳೇ ನಮಸ್ಕಾರ ನಮಸ್ಕಾರ. (೨) ಕೃಷ್ಣಾ ಬಾ ಎಂದು ಕೂಗಿದಾಗ ಬಂದೆ ಬಂದೆ ಎಂದು ಎರಡು ಸಲ ಹೇಳಿದಾಗ ಬರುತ್ತೇನೆ ಎಂಬುದನ್ನು ಸೂಚಿಸುತ್ತದೆ.

(೨) ವೀಪ್ಸಾಯಾಂ ದ್ವಿರುಕ್ತಿಃ ಕಾರ್ಯವು ನೆರವೇರುತ್ತಿರುವುದನ್ನು ಇನ್ನೂ ಮುಂದಕ್ಕೆ ನಡೆಯಲಿ ಎಂದು ಸೂಚಿಸಲು ಎರಡು ಸಲ ಪ್ರಯೋಗ ಮಾಡುವುದುಂಟು.

ಉದಾ : ವೃಕ್ಷಂ ವೃಕ್ಷಂ ಸಿಂಚತಿ -- ಅಂದರೆ ಗಿಡಕ್ಕೆ ನೀರು ಹಾಕುವಾಗ ಗಿಡಕ್ಕೆ ಅಂತ ಅಲ್ಲದೇ ಎಲ್ಲಾ ವೃಕ್ಷಗಳಿಗೆ ನೀರೆರೆಯಬೇಕೆಂದು ಅರ್ಥವಿರುವುದು.

(೩) ಹಾಗೇ ಪ್ರಾರ್ಥನಾಯಾಂ ದ್ವಿರುಕ್ತಿಃ ಪ್ರಾರ್ಥನೆ ಎನ್ನುವುದು ಲೋಟ್ ಪ್ರಯೋಗವಿರುವುದು. ಪ್ರಾರ್ಥನೆ ಮಾಡುವಾಗ ಭಕ್ತನು ದೇವರನ್ನು ಎರಡು ಸಲ ಬೇಡುವುದು ಎಂಬರ್ಥದಿಂದ ಇಲ್ಲಿ "ಕ್ರತೋಸ್ಮರ ಕ್ರತೋಸ್ಮರ" ಎಂಬುದು ಮಂತ್ರದಲ್ಲಿ ಕಾಣುತ್ತೇವೆ. ಈ ಒಂದು ವಾಕ್ಯಕ್ಕೆ ಅದ್ವೈತ ಭಾಷ್ಯಕ್ಕೆ ವ್ಯಾಖ್ಯಾನವಾದ **"ರತ್ನಪ್ರಭಾ"**ದಲ್ಲಿ ವಿಚಿತ್ರವಾಗಿ ಬರೆದಿರುತ್ತಾರೆ.

**ಓಂ ಹೇ ಓಂಕಾರಾಭಿಧೇಯೇಶ್ವರಾಭಿನ್ನ ಆದಿತ್ಯಕ್ರತೋ ಹೇ ಆದಿತ್ಯಾಭಿನ್ನಸಂಕಲ್ಪಾತ್ಮನ್ ಹೇ ಯಜ್ಞ ರೂಪೇತಿ ವಾ ಸ್ಮರ । ತ್ವದುಪಾಸಕಂ ಮಾಂ ಸ್ಮರ ಕೃತಂ ಮರ್ಯಾನುಷ್ಠಿತಂ ಜ್ಞಾನಂ ಕರ್ಮಚ ಸ್ಮರಸ್ಪಷ್ಟಮ್ । ದ್ವಿರುಕ್ತಿರಾದರಾರ್ಥೋ ॥**

ಆದಿತ್ಯ (ಸೂರ್ಯ) ಭಿನ್ನನಾದ ಈಶ್ವರನೇ ಯಜ್ಞರೂಪೀ ನಿನ್ನ ಉಪಾಸನೆ ಮಾಡುವ ಹಾಗೂ ಕರ್ಮವನ್ನೂ ಸ್ಮರಣೆಗೆ ತಂದುಕೋ ಎಂದು ಆದರದಿಂದ ಕೇಳುತ್ತಾನೆ.

ಈ ವ್ಯಾಖ್ಯಾನ ಅಸಂಗತ ಹಾಗೂ ಸ್ವವ್ಯಾಹತವೇ ಆಗಿದೆ. **ಓಂ ಕ್ರತೋ** ಎಂದಾಗ ಅವರ ಪ್ರಕಾರ ಆದಿತ್ಯ (ಅಗ್ನಿ) ಬ್ರಹ್ಮರಿಗೆ ಅಭೇದವನ್ನು ತಿಳಿಸುತ್ತಾರೆ. ಇನ್ನು ಕ್ರತೋ, **"ಸಂಕಲ್ಪಾಕ ಮನಸ್ಸು"** ಎಂದರ್ಥೈಸುವುದು ದುವ್ಯಾಹಕವಾಗಿರುವುದು.

ಎಲ್ಲವನ್ನೂ ಬಲ್ಲವನಾದ ಸರ್ವಜ್ಞನಾದ ಭಗವಂತನನ್ನು "ನೀನು ಮರೆತಿರುವೆ, ನಾನು ಏನು ಸಾಧನೆ ಮಾಡಿರುತ್ತೇನೆಂದು ತಿಳಿಸಬೇಕಾಗಿದೆ. ಅವೆಲ್ಲವನ್ನೂ ಜ್ಞಾಪಿಸಿಕೋ" ಎಂದು ಹೇಳಿದ್ದು ಪರಮಾತ್ಮನಲ್ಲಿ ಮರೆವು ಎಂಬ ದೋಷ ಆರೋಪಿಸಿರುವುದು ಮಹಾ ಅಪರಾಧ. ಇಂತಹ ಅಪವ್ಯಾಖ್ಯಾನವನ್ನು ಶ್ರೀಮದಾಚಾರ್ಯರು ಖಂಡಿಸಿ ಮಂತ್ರದ ನಿಜಾರ್ಥವನ್ನು ತಿಳಿಸಿ ಮಹೋಪಕಾರ ಮಾಡಿರುತ್ತಾರೆ.

**ತಾತ್ಪರ್ಯ :** ಕ್ರತೋಸ್ಮರ ಮಂತ್ರವನ್ನು ಎರಡು ಸಲ ಹೇಳಿದ್ದು "ನಿತ್ಯ ನಿರತಿಶಯ ಜ್ಞಾನ ರೂಪಿ ಶ್ರೀಹರಿಯನ್ನು ಪ್ರಾರ್ಥಿಸಲಾಗಿದೆ. ಹೇ ಸ್ವಾಮಿ ಸ್ವವರ್ಣೋಚಿತ ಸತ್ಕರ್ಮಗಳಿಂದ ನಿನ್ನನ್ನು ಸರ್ವೋತ್ತಮತ್ವೇನ ಜ್ಞಾನಾಂದಪೂರ್ಣ ಸರ್ವಜ್ಞನೆಂದು ತಿಳಿದು ಈವರೆಗೂ ಮುಂದೆಯೂ ಆರಾಧಿಸಿ ಭಕ್ತಿಯಿಂದ ಬೇಡುವೆನು.



ಅನುಗ್ರಹೋನ್ಮುಖನಾಗು. ಇದೇ ಜೀವನದ ಪರಮ ಮುಖ್ಯ ಉದ್ದೇಶವೆಂಬುದನ್ನು ಈ ಉಪನಿಷತ್ತು ತಿಳಿಸುವುದು.

**ವಿಶೇಷಾಂಶ : ಕ್ರತು** = ಜ್ಞಾನರೂಪಿ ಎಂಬ ಅರ್ಥ. ಕ್ರತು ಶಬ್ದವು ಯಜ್ಞದ ಪರ್ಯಾಯ ವಾಚ್ಯವಾಗಿದೆ. ಯಜ್ಞ ಶಬ್ದವು **"ಯದಸ್ತಿತಜ್ಜಾನಾತಿ ಇತಿಯಜ್ಞಃ"** = ಸರ್ವಜ್ಞನು ಸರ್ವವನ್ನು ತಿಳಿದಿರುವವನು ಎಂಬ ವ್ಯುತ್ಪತ್ತಿ ಪ್ರಕಾರ **"ಜ್ಞಾನಮೂರ್ತಿ"** ಜ್ಞಾನಪೂರ್ಣ ಎಂಬ ಅರ್ಥವು ಹೊಂದುತ್ತದೆ.

ಭಕ್ತನೆಂದೂ ತಿಳಿದು ಅವನಿಗೆ ವೈರಾಗ್ಯ ಜ್ಞಾನಗಳನ್ನು ಕೊಟ್ಟೇಕೊಡುತ್ತಾನೆ. ಉದ್ಧರಿಸುತ್ತಾನೆ. **"ನಮೋ ಭಕ್ತಪ್ರಣಶ್ಯತಿ"** ಈ ಉಪನಿಷತ್ತಿನಲ್ಲಿ **ಕ್ರತು** = ಯಜ್ಞರೂಪಗಳಿಂದ ಸ್ತೋತ್ರ ಮಾಡಲಾಗಿದೆ. ಹೀಗೆ ಶ್ರೀಮದಾಚಾರ್ಯರು ಈ ಉಪನಿಷತ್ತಿಗೆ ಭಾಷ್ಯ ರಚಿಸುವಾಗ್ಗೆ ಮಂಗಳಾಚರಣೆಗಳಲ್ಲಿ **"ಜ್ಞಾನಮೂರ್ತಿಯೇ ಸರ್ವಯಜ್ಞಭುಜೇ ಜ್ಞಾನಸ್ಫೂರ್ತಿಃ"** ಎಂಬ ವಿಶೇಷಣಗಳನ್ನು ಉಪಯೋಗಿಸುತ್ತಾರೆ. ಹೀಗಾಗಿ ಈ ಉಪನಿಷತ್ತಿಗೆ ಯಜ್ಞನಾಮಕ ಶ್ರೀಹರಿಯೇ ದೇವತೆಯಾಗಿದ್ದಾನೆ. ಇಲ್ಲಿ ಯಜ್ಞನ ಸ್ತುತಿ ರೂಪವಾಗಿರುವುದು ಶ್ರೀಮದಾಚಾರ್ಯರು ಮಂಗಲಾಚರಣೆಗಳಲ್ಲಿ ಎರಡು ಸಲ ಜ್ಞಾನ ಎಂದಿದ್ದಾರೆ. ಮೊದಲನೇ ಎರಡು ಅಕ್ಷರಗಳಿಂದ ಯಜ್ಞ ಶಬ್ದ ಸೂಚಿಸಿರುತ್ತಾರೆ. **"ಯಸ್ಮಾತ್ -- (೧) ಜ್ಞಾನ ಸ್ಫೂರ್ತಿ (ಯ–ಜ್ಞ) (೨) ಸರ್ವಯಜ್ಞಭುಜೇ"** ಯಜ್ಞೇಶನ ಸ್ತುತಿ ಇದೆ.

ಶ್ರೀಮದಾಚಾರ್ಯರು ಇಲ್ಲಿ ಸಾಧಕನು ತನ್ನ ಸೋಚಿತ ಕರ್ಮಗಳಿಂದ ಭಗವಂತನನ್ನು ಆರಾಧಿಸಿ ಭಕ್ತಿಯಿಂದ ಬೇಡಿದರೆ ಅವನ ಅನುಗ್ರಹ ಸಂಪಾದಿಸುವುದೇ ಜೀವನದ ಮುಖ್ಯಗುರಿಯಾಗಬೇಕೆಂದು ಸೂಚಿಸಿರುತ್ತಾರೆ.

**ಖಂಡಾರ್ಥ : ಕೃತ ಶ್ರವಣಾದಿನಾಂ ಪುರುಷೇಣ ಸಾಕ್ಷಾತ್ಕಾರಾರ್ಥಂ ಹರೇಃ ಪ್ರಾರ್ಥನಂ ಕಾರ್ಯಮಿತ್ಯತಸ್ತತ್ಪ್ರಕಾರಂ ಹಿರಣ್ಮಯೇನೇತ್ಯಾದಿನೋಕ್ತ್ವಾ ಅಧುನಾ ಪ್ರಾಪ್ತ ಸಾಕ್ಷಾತ್ಕಾರೇಣಾಪಿಪುಂಸಾಂ ಮೋಕ್ಷಾರ್ಥಂ ಭಗವದುಪಾಸನಂ ಕಾರ್ಯಮಿತಿ ಭಾವೇನ ಅಗ್ನಿ ಪ್ರತೀಕಸ್ಥ ಭಗವತ್ಪ್ರಾರ್ಥನಾಪ್ರಕಾರಮಾಹ ॥ ಅಗ್ನ ಇತಿ ॥**

೧೫ನೇ ಮಂತ್ರದಲ್ಲಿ ಭಗವಂತನ ದರ್ಶನವನ್ನು ಹಂಬಲಿಸಿ ಸ್ವಾಯಂಭು ಮನುವಿನ ಪ್ರಾರ್ಥನೆಯನ್ನು ಆಲಿಸಿ ಮನ್ನಿಸಿ ಶ್ರೀಹರಿ ಯಜ್ಞನಾಮಕನಾಗಿ ಅವತರಿಸಿ ದುಷ್ಟ ರಾಕ್ಷಸರನ್ನು ಸಂಹರಿಸಿದನು. ಈಗ ಮನು ಪ್ರತ್ಯಕ್ಷನಾದ ಪರಮಾತ್ಮನನ್ನು ಮುಕ್ತಿ ದಯಪಾಲಿಸು ಎಂದು ಬೇಡಿಕೊಳ್ಳಲು ಈ ೨೦ನೇ ಮಂತ್ರದಿಂದ ಸ್ತುತಿಸುತ್ತಾನೆ "ಅಗ್ನೇ" ಎಂಬ ಮಂತ್ರದಿಂದ.

ಮಂತ್ರ ೨೦

**ಅಗ್ನೇ ನಯ ಸುಪಥಾ ರಾಯೇ ಅಸ್ಮಾನ್ ವಿಶ್ವಾನಿ ದೇವವಯುನಾನಿ ವಿದ್ವಾನ್ ।**
**ಯುಯೋಧ್ಯಸ್ಮಜ್ಜುಹುರಾಣಮೇನೋ ಭೂಯಿಷ್ಠಾಂತೇ ನಮಉಕ್ತಿಂ ವಿಧೇಮ ॥**

**ವಿವರಣೆ :** ಅಂಗಾಂಗಗಳನ್ನು ವಾ ತದುಪ ಲಕ್ಷಣವಾದ ಜಗತ್ತನ್ನು ಪ್ರೇರಿಸುವ ನಿಯಮಿಸುವುದರಿಂದ ಅಗ್ನಿ ಶಬ್ಬವಾಚ್ಯನಾದ ಹೇ ಹರೆ. ಈವರೆಗೂ ನಾವೇನಾದರೂ ಸಂಪಾದಿಸಿದ ಸತ್ಯಧರ್ಮಗಳು ಭಗವದ್ಪ್ರೀತ್ಯರ್ಥವಾಗಿ ಆಚರಿಸಿದ ಕರ್ಮಗಳಿಂದ ಮೋಕ್ಷ ಹೇತುವಿಗೆ ಬೇಕಾಗಿರುವ ಜ್ಞಾನವನ್ನು ಸಂಪಾದಿಸಿದ್ದದೇ ಆದರೆ ಎಲ್ಲವನ್ನೂ ಬಲ್ಲವನಾದ ನಿನಗೆ ಪ್ರತ್ಯೇಕವಾಗಿ ತಿಳಿಸಬೇಕಾ ದೇವಾ ! ಆದ್ದರಿಂದ ಶ್ರೀರಮಾಪತೇ ನಾವು ಯಾವ ಮಾರ್ಗದಿಂದ ನಡೆದರೆ ಪುನಃ ಈ ಸಂಸಾರಕ್ಕೆ ಬರುವುದಿಲ್ಲವೋ (ಪುನರಾವರ್ತಿ) ಅಂತಹ ಅರ್ಚಿರಾದಿ ಮಾರ್ಗದಲ್ಲಿ ನಮ್ಮನ್ನು ಕೊಂಡೊಯ್ದು ಕಾಪಾಡು ನಾವಾದರೂ ಅಲ್ಪರು ಪುನಃ ಈ ಸಂನಾರಾಖ್ಯ ಕೊಳಕಿನಲ್ಲಿ ಬೀಳದಂತೆ ಅನುಗ್ರಹಿಸು. ಇಷ್ಟೊಂದು ಕರುಣಾಪೂರಿತ ಅನುಗ್ರಹ ಮಾಡಿದೆ, ತತ್ಪ್ರತಿಫಲವಾಗಿ ನಾವು ನಿನಗೆ ಏನು ತಾನೆ ಕೊಡಬಲ್ಲೆವು. ಸ್ವತಂತ್ರವಾಗಿ ಕೊಡುವುದು ಏನಿದೆ. ಆದರೂ ನೀನೇ ದಯಪಾಲಿಸಿ ಈ ಜೀವನವನ್ನು ಪುಣ್ಯ ಭಾಗಿಯಾಗುವಂತೆ ಮಾಡಿದೆ. ಈ ದೇಹ ನೀನೇ ದಯಪಾಲಿಸಿದ್ದೀಯ. ಆದರೂ ನಾವು ಭಕ್ತಿಪೂರ್ವಕ ಸ್ತುತಿರೂಪ ಶಿರಸಾಷ್ಟಾಂಗ ನಮಸ್ಕಾರ ಮಾಡುತ್ತೇವೆ. ನಮ್ಮ ಈ ನಮಸ್ಕಾರವನ್ನು ಕೃಪಯಾ ಸ್ವೀಕರಿಸು ದಯಾನಿಧೆ ಶ್ರೀಹರಿ ನಿನಗೆ ನಮೋ ನಮಃ ನಮಃ

**ವಿಶೇಷಾಂಶ :** ಮಂತ್ರದಲ್ಲಿ **''ಅಗ್ನೆ''** ಎಂಬ ಸಂಬೋಧನವಿದೆ. ಅಗ್ನೆ ಎಂದರೆ ಭೂತಾಜ್ಞ್ನೆ ಎಂದು ಸಾಧಾರಣ ಅರ್ಥ ಕೆಲವರು ಮಾಡಿದ್ದಾರೆ. ಆದರೆ, **ಅಗ್ನಿ** ಶಬ್ದ ವಾಚ್ಯನಾದ **ಅಗ್ನ್ಯಂತರ್ಯಾಮಿ ವೈಶ್ವಾನರ**ನೇ ಈ ಅಗ್ನಿ ಹೆಸರಿನಿಂದ ಹವಿಸ್ಸುಗಳನ್ನು ಸ್ವೀಕರಿಸುವವನೆಂದು ನಮ್ಮ ಶರೀರಗಳ ಅಂಗಾಂಗಗಳನ್ನು ಚಲಿಸುವಂತೆ ಪ್ರೇರೇಪಿಸುವ ಶ್ರೀಹರಿ ಅಗ್ನಿ ಎಂದೆನಿಸಿದೆ. ಅಲ್ಲದೆ ಋಗ್ವೇದ ಆರಂಭದಲ್ಲಿ ಅಗ್ನಿಸೂಕ್ತ

**''ಅಗ್ನಿಮೀಳೇ ಪುರೋಹಿತಂ''**ದ ಪ್ರತಿಪಾದ್ಯನಾದ **''ಸದೇವಾನಾಂ ನಾಮಧಾ ಏಕ ಏವಾ''** ಎಂಬ ಪ್ರಮಾಣದ ಪ್ರಕಾರ ಅಗ್ನಿ, ಇಂದ್ರ, ವರುಣ ಇತ್ಯಾದಿ ಎಲ್ಲಾ ಶಬ್ದಗಳು ಶ್ರೀಮನ್ನಾರಾಯಣನನ್ನೇ ಸ್ತುತಿಸಲಾಗಿದೆ.

ಕೇವಲ ಋಗ್ವೇದವಲ್ಲದೆ, ಯಜು ಅಥರ್ವಸಾಮ ವೇದಗಳಿಂದ ಮುಖ್ಯ ಪ್ರತಿಪಾದ್ಯನಾಗಿರುವವನು ಇವನೇ. **ಭೂ ಇಷ್ಟಾಂತೆ ನಮ ಉಕ್ತಂ ವಿಧೇಮ** = ಸ್ವಾಮೀ ನೀನು ಅತ್ಯಂತ ಶ್ರೇಷ್ಠ ಸರ್ವೋತ್ತಮನೆಂಬ ಜ್ಞಾನ ಸದಾ ಕೊಟ್ಟು ನನ್ನಿಂದ ಮಾಡಲ್ಪಟ್ಟ ನಮಸ್ಕಾರವನ್ನು ಸ್ವೀಕರಿಸು. **''ಸ್ವಾವಧಿಕ ಉತ್ಕೃಷ್ಟತ್ವ ಪ್ರಕಾರದ ಜ್ಞಾನಾನುಕೂಲ ವ್ಯಾಪಾರಃ ನಮಸ್ಕಾರಃ''** ಶ್ರೀಹರಿಗೆ ಏಕೆ ನಮಸ್ಕಾರ ಮಾಡುವಿರಿ ಎಂದರೆ ಬ್ರಹ್ಮ ರುದ್ರ ಇಂದ್ರಾದಿ ದೇವತೆಗಳಿಗೆ ನಮಸ್ಕಾರ ಮಾಡಿದರೆ ಅವರು ಪುನಃ



ಶ್ರೀಹರಿಯಲ್ಲಿ ಅರ್ಪಿಸುತ್ತಾರೆ. **''ಸರ್ವದೇವ ನಮಸ್ಕಾರಃ ಕೇಶವಂ ಪ್ರತಿಗಚ್ಛತಿ''** ಆದ್ದರಿಂದ Round about ನಮಸ್ಕಾರ ಮಾಡಿ ರಮೇಶನಾದ ಪ್ರಾಣವಲ್ಲಭನಾದವನಿಗೆ ನೇರ ನಮಸ್ಕಾರವೆಂಬುದು ತಿಳಿಯಬೇಕು. ಈ ಮಂತ್ರಕ್ಕೆ ಶ್ರೀಮದಾಚಾರ್ಯರ ಭಾಷ್ಯ ಗುರುರಾಜರ ಖಂಡಾರ್ಥಗಳ ಸಾರವೇ ತಿಳಿಸಲಾಗಿದೆ.

**ವಿಶೇಷಾಂಶ :** ಸಮಸ್ತ ಜಗತ್ತಿನಲ್ಲಿ ವ್ಯಾಪ್ತನಾಗಿ ಹಾಗೂ ನಮ್ಮ ಶರೀರದಲ್ಲಿರುವ ಅಂಗಾಂಗಗಳನ್ನು ಪ್ರೇರಿಸುವವನೇ ಶ್ರೀಹರಿ. ನೀನು ಅನಾದಿ ಸರ್ವೋತ್ತಮನು ಎಂಬುದಾಗಿ ಸ್ತೋತ್ರ ಮಾಡಲಾಗಿದೆ.

**''ವಯುನ''** ಎಂಬ ವಾಕ್ಯವು ಮಂತ್ರದಲ್ಲಿ ಜ್ಞಾನಪ್ರದನು, ನಮ್ಮನ್ನು ಉದ್ಧಾರ ಮಾಡುವವನು ಎಂಬುದೂ ಸೂಚಿತವಾಗಿರುತ್ತದೆ. **''ಜುಹುರಾಣಮೇನೋ''** ಎಂಬ ಪದದಲ್ಲಿ ಏನಃ = ಪಾಪಗಳನ್ನು (ಅನಿಷ್ಟ ಕರ್ಮಗಳಿಂದ) ಯುಯೋಧೀ = ದೂರಮಾಡು (ಅನಿಷ್ಟ ಕರ್ಮಗಳಿಂದ ಉದ್ಭವಿಸುವ ಪಾಪಗಳು ನನ್ನನ್ನು ಬಾಧಿಸದಂತೆ ಮಾಡು)

ಅಪರೋಕ್ಷವನ್ನು ಹೊಂದಿದ ಜ್ಞಾನಿಗಳಿಗೆ, ಅನಿಷ್ಟ ಕರ್ಮ ಪಾಪವನ್ನು ತಪ್ಪದೇ ಅನುಭವಿಸಲೇಬೇಕು. ಇದನ್ನೆ ಪ್ರಾರಬ್ಧಕರ್ಮವೆನ್ನಲಾಗಿದೆ. ಪ್ರಾರಬ್ಧವು ಸುಖರೂಪವಾಗಲೂ ದುಃಖರೂಪವಾಗಲೂಬಹುದು. ಇವೆರಡರಲ್ಲಿ ಒಂದಿದ್ದರೂ ಮೋಕ್ಷಪ್ರಾಪ್ತಿಗೆ ಪ್ರತಿಬಂಧಕವು. ಪ್ರಾರಬ್ಧವನ್ನು ಅನುಭವಿಸಿಯೇ ಕಳೆದುಕೊಳ್ಳಬೇಕು. ಆ ತನಕ ಸಂಸಾರವೆಂಬ ಚಕ್ರದಲ್ಲಿ ತಿರುಗುತ್ತಿರಬೇಕು. ಆದ್ದರಿಂದ ನಾವು ಭಗವಂತನನ್ನು ಇಂತಹ ಪಾಪಗಳಿಂದ ದೂರಮಾಡು ಎಂದು ಪ್ರಾರ್ಥಿಸಬೇಕೆಂದು ಉಪನಿಷತ್ತು ತಿಳಿಸುತ್ತದೆ.

**''ಸುಪಥಾರಾಯೇ ನಯಃ''** ಎಂಬ ವಾಕ್ಯಕ್ಕೆ ಸ್ವಾಮಿ ನಮ್ಮನ್ನು ಉತ್ತಮ ಮಾರ್ಗದಲ್ಲಿ ಕರೆದೊಯ್ಯಬೇಕು. ಪುನಃ ಪುನರಾವೃತ್ತಿರಹಿತ ದಾರಿಯಲ್ಲಿ ಹೋಗುವಂತೆ ಮಾಡು.

ಇದರ ಅರ್ಥ : ನನಗೆ ಅದು ಬೇಕು ಇದು ಬೇಕು ಎಂಬ ನಶ್ವರ ಕ್ಷುಲ್ಲಕ ಫಲಾಪೇಕ್ಷೆ ಮಾಡದೆ ಶ್ರೀಹರಿ ಅನುಗ್ರಹದಿಂದ ಅವನ ಲೋಕವನ್ನು (ಮುಕ್ತಿಯನ್ನು) ದಯಪಾಲಿಸು ಎಂದು ಬೇಡಬೇಕು. ಇದೇ ಮುಖ್ಯ ಪುರುಷಾರ್ಥ.

**ನಮ ಉಕ್ತಿಂ ವಿಧೇಮ :** ನಮಸ್ಕಾರವೆಂದು ತಿಳಿಸಿದರೂ ನಮಸ್ಕಾರವು ಶ್ರೀಹರಿಯನ್ನು ಬಿಟ್ಟು ಅನ್ಯರು ನಮಸ್ಕಾರಕ್ಕೆ ಯೋಗ್ಯರಲ್ಲವೆಂದು ತಿಳಿಸಿ ನಮಸ್ಕಾರದ ಅರ್ಥವು ಹೀಗಿದೆ. ಹೇ ಪರಮಾತ್ಮನೇ, ನೀನು ನನಗಿಂತ ಅಷ್ಟೇ ಅಲ್ಲ ಎಲ್ಲರಿಗೂ ರಮಾದೇವಿಗಿಂತ ಅತ್ಯಂತ ಶ್ರೇಷ್ಠನಾಗಿರುವಿ. ಆದ್ದರಿಂದ ಮನಃಪೂರ್ವಕವಾಗಿ ನಮಿಸುತ್ತೇನೆ, ನನ್ನ ಹೃದಯದಲ್ಲಿ ಸದಾ ನೆಲೆಸು ಎಂದು ಪ್ರಾರ್ಥಿಸುತ್ತೇನೆ.

ನಮಸ್ಕಾರ ಮಾಡುವುದನ್ನು ಬಿಟ್ಟು ನನಗೆ ಬೇರೆ ಯಾವ ಸ್ವಾತಂತ್ರ್ಯವೂ ಇರುವುದಿಲ್ಲ. ಹೀಗೆ ಹೇಳಿದಾಗ **"ನಮ ಉಕ್ತಿಂ ವಿಧೇಮ"** ಉಪನಿಷತ್ತಿನಲ್ಲಿ ಉಪಕ್ರಮ ಉಪಸಂಹಾರಗಳಲ್ಲಿ ಏಕವಾಕ್ಯತೆ ಕಂಡುಬರುವುದು.

ಇದರಿಂದ ಶ್ರೀಹರಿಯ ಸರ್ವೋತ್ತಮತ್ವವು ಸ್ವಾತಂತ್ರ್ಯತ್ವವು ಜೀವರ ಅಸ್ವಾತಂತ್ರ್ಯವು ಅಲ್ಪ ಜ್ಞಾನತ್ವವಗಳನ್ನು ತಿಳಿಸಲು ಹಿಂದಿನ ಮಂತ್ರಗಳೂ ಸಹ ಇದೆ. ವಿಷಯವನ್ನು ವ್ಯಕ್ತಪಡಿಸುತ್ತಿರುವಾಗ ಅನ್ಯರು ಅರ್ಥೈಸಿದಂತೆ **"ನಾನೇ ದೇವರು (ಅಹಂ ಬ್ರಹ್ಮಾಸ್ಮಿ)"** ಎಂಬುದು ಉಪನಿಷತ್ತಿನ ಅಭಿಪ್ರಾಯವಲ್ಲ. ಕೇವಲ ಕಾಲ್ಪನಿಕವೇ ಆಗಿರುತ್ತದೆ.

ಈ ಮಂತ್ರದ ಅರ್ಥವನ್ನು ವಿವರಣೆ ರೂಪ ಭಾಷ್ಯ ಆಚಾರ್ಯರ ವಾಕ್ಯಗಳು ಹೀಗಿರುವುದು

**ಭಾಷ್ಯ : "ವಯುನಂ ಜ್ಞಾನಂ । ತ್ವದ್ದತ್ತಯಾ ವಯ ನಾಯಾ ಇದಮಚಷ್ಟವಿಶ್ವಮ್" ಇದಿವಚನಾತ್ । ಜುಹುರಾಣಂ ಅಸ್ಮಾನ್ ಅಲ್ಪೀ ಕುರ್ವತ್ । ಯುಯೋಧೀ ವಿಯೋಜಯ । ಯದಸ್ಮಾನ್ ಕುರುತೇಽತ್ಯಲ್ಪಾನ್ ತದೇನೋಸ್ಮದ್ ವಿಯೋಜಯ । ನಯ ನೋ ಮೋಕ್ಷ ವಿತ್ತಾ ಯೇತ್ಯ ಸ್ತಾದ್ ಯಜ್ಞಂ ಮನುಃ । ಸ್ವರಾಟ್ ಇತಿಸ್ಕಾಂದೇ ॥ ಯುಯು ವಿಯೋಗ ಇತಿಧಾತುಃ । ಭಕ್ತಿಜ್ಞಾನಾಭ್ಯಾಂ ಭೂಯಿಷ್ಟಾಂ ನಮಉಕ್ತಿಂ ವಿಧೇಮ ಇತಿ**

ಶ್ರೀಮದಾಚಾರ್ಯರು ಉಪನಿಷತ್ತಿಗೆ ಭಾಷ್ಯ ರಚಿಸಿ ಉಪಸಂಹಾರ ಅಂತಿಮ ಶ್ಲೋಕ **ಪೂರ್ಣ ಶಕ್ತಿ ಚಿದಾನಂದ ಶ್ರೀತೇಜಃ । ಸ್ಪಷ್ಟ ಮೂರ್ತಯೇ ಮಮಾಭ್ಯಾದಿಕ ಮಿತ್ರಾಯ ನಮೋ ನಾರಾಯಣಾಯ.**

**ಶ್ರೀಮಜ್ಜಯತೀರ್ಥ ಟೀಕಾ ಅಂತಿಮ ಶ್ಲೋಕ**

**ಕಮಲ ವದನಾಂಭೋಜ ರಾಜಸಂಹಾಯ ವಿಷ್ಣವೇ ।**
**ನಮೋಜಗಜ್ಜನಿಸ್ಥೇ ಮಹೇತವೇ ಪರಮಾತ್ಮನೇ ॥**

**ಶ್ರೀರಾಘವೇಂದ್ರ ಗುರುರಾಜರ ಖಂಡಾರ್ಥ ಅಂತ್ಯ ಮಂಗಳಶ್ಲೋಕ**

**ಸಮಸ್ತ ಗುಣಾರ್ಯ ದೋಷದೂರಾಯ ವಿಷ್ಣವೇ ।**
**ನಮಃ ಪ್ರಾಣನಾಥಾಯ ಭಕ್ತಾಭೀಷ್ಟದಾಯನೇ ॥**
**ಈಶಾವಾಸ್ಯೋಪನಿಷದೋ ಭಾಷ್ಯದ್ಯುಕ್ತಾರ್ಥ ಸಂಗ್ರಹಃ**
**ರಾಘವೇಂದ್ರೇಣ ಯತೀನ ಕೃತೋಯಂ ಶಿಷ್ಯಯಾಂ ಭಯ**

ಭಾಗವತರತ್ನ ಆದಿ ಬಿರುದಾಂಕಿತರಾದ ಅಸ್ಮತ್ ಮಾತಾ ರುಕ್ಮಿಣೀಪತಿ ಪಂಡಿತ ಶೇಖರ ಘೂಳೀ ಕೃಷ್ಣಮೂರ್ತಿ ಆಚಾರ್ಯ ಸುತನಾದ (ಶಿಷ್ಯನೂ ಆದ)



ಬದರೀನಾಥಾಚಾರ್ಯ ಘೂಳಿಯಿಂದ ಕನ್ನಡದಲ್ಲಿ ಅನುವಾದಿತ ಶ್ರೀ ಈಶಾವಾಸ್ಯೋಪನಿಷತ್ತು ಎಂಬ ಕುಸುಮವನ್ನು ಅವರ ಅಂತರ್ಯಾಮಿ ಶ್ರೀಹರಿ ಗುರು ಚರಣಗಳಲ್ಲಿ ಭಕ್ತಿಯಿಂದ ಅರ್ಪಿಸುತ್ತೇನೆ. ಈ ಪುಣ್ಯಕಾರ್ಯದಿಂದ ಲಬ್ಧವಾದ ಫಲವು ನನ್ನ ಮಾತಾಪಿತೃಗಳಲ್ಲಿ ಅರ್ಪಿತ.

ಶ್ರೀಕೃಷ್ಣಾರ್ಪಣಮಸ್ತು

ಇತಿ ಶ್ರೀ ಈಶಾವಾಸ್ಯೋಪನಿಷತ್ ಭಾಷ್ಯ ಟೀಕಾ ಖಂಡಾರ್ಥಾನುಸಾರೇಣ ಕನ್ನಡ ಭಾಷಾಯಾಂ ಯತ್ಕೃತಂ ಈ ಲಕ್ಷ್ಮೀಯಜ್ಞೇಸಃ ತೇನ ಸುಪ್ರೀತೋಭವತು

**ಬದರೀನಾಥಾಚಾರ್ಯ ಘೂಳೀ**

೧೮-೦೭-೨೦೦೮
ಸರ್ವಧಾರಿ ನಾಮ ಸಂ॥ ಆಷಾಢ ಪೌರ್ಣಮ್ಯಾಂ
ಶುಕ್ರವಾಸರೇ ಸಮರ್ಪಿತಂ
ಶ್ರೀಹರಿ ಗುರು ಚರಣಯೋಃ ॥ ಓಂ ॥

ಈ ಅನುವಾದವನ್ನು ಮಾಡಲು ಈ ಕೆಳಕಂಡ ಗ್ರಂಥಗಳ ಸಹಕಾರ ಪಡೆದಿದ್ದೇನೆ.

೧. ಶ್ರೀಮದಾಚಾರ್ಯರ ಭಾಷ್ಯ ಹಾಗೂ ಶಂಕರ ಭಾಷ್ಯ
೨. ಶ್ರೀಜಯತೀರ್ಥರ ಟೀಕಾವಿವೃತ್ತಿ
೩. ಶ್ರೀರಘುನಾಥತೀರ್ಥರ ಭಾಷ್ಯಟೀಕಾ ವಿವೃತ್ತಿ
೪. ಶ್ರೀರಾಘವೇಂದ್ರರ ಖಂಡಾರ್ಥ
೫. ಹಾಗೇ ಅನೇಕ ಇಂಗ್ಲೀಷ್ ಪುಸ್ತಕಗಳ ಸಹಾಯವೂ ಆಗಿರುತ್ತೆ.
೬. ಡಾ. ರಾಧಾಕೃಷ್ಣನ್
೭. ಅರವಿಂದೋ ವೇದಾಂತದೀಪ (ಇಂಗ್ಲೀಷ್)ನಲ್ಲಿ

ಹರಿಃ ಓಂ

* * * * *

॥ ಹರಿಃ ಓಂ ॥

# ಶ್ರೀ ತಲವಕಾರ ಉಪನಿಷತ್
# (ಕೇನೋಪನಿಷತ್)

## ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರ ಭಾಷ್ಯ ಶ್ರೀಮದ್ರಾಘವೇಂದ್ರ ಗುರುರಾಜರ ಖಂಡಾರ್ಥಾನು ಸಾರಿ ತಲವಕಾರೋಪನಿಷತ್ತಿನ ಭಾವಾನುವಾದ

**ಆಪ್ಯಾಯಂತು ಮಮಾಂಗಾನಿ ವಾಕ್ಪ್ರಾಣಶ್ಚಕ್ಷುಃ**
**ಶ್ರೋತ್ರಮಥೋ ಬಲವೊಂದ್ರಿಯಾಣಿ ಚ ಸರ್ವಾಣಿ ಸರ್ವಂ ॥**
**ಬ್ರಹ್ಮೌಪನಿಷದಂ ಮಾಹಂ ಬ್ರಹ್ಮ ನಿರಾಕುರ್ಯಾಂ ಮಾಮಾ**
**ಬ್ರಹ್ಮನಿರಾಕರೋತ್ ಅನಿರಾಕಣಮಸ್ತು ಅನಿರಾಕರಣಂ ಮೇ**
**ಅಸ್ತುತದಾತ್ಮನಿ ನಿರತೇಯ ಉಪನಿಷತ್ಸುಧರ್ಮಾಃ ತೇ ಮಯಿ**
**ಸಂತುತೇಮಯಿಸಂತು**
**ಓಂ ಶಾಂತಿಃ ಶಾಂತಿಃ ಶಾಂತಿಃ ॥**

**ವಿವರಣೆ :** ಸಾಧಕನು ಪರಮಾತ್ಮನಲ್ಲಿ ಹೀಗೆ ಪ್ರಾರ್ಥಿಸಿ ಉಪನಿಷತ್ತು ಅಧ್ಯಯನ ಮಾಡಬೇಕು. ಸ್ವಾಮೀ ಶ್ರೀಹರಿ. ಈ ನನ್ನ ಶರೀರದ ಅಂಗಗಳು ನನ್ನ ಮಾತು, ಪ್ರಾಣ, ಕಿವಿ, ಕಣ್ಣು ಎಲ್ಲವೂ ಆಪ್ಯಾಯಮಾನವಾಗುವಂತೆ ಆಗಲಿ (**ಆಪ್ಯಾಯ = ಸಂತೃಪ್ತಿ ಹೊಂದಿ ವೃದ್ಧಿಯಾಗಲಿ. ಆ + ಪ್ಯಾಯ ಲುಟ್ ಪ್ರಯೋಗ**) ಅಂತೆಯೇ ಬಲ, ಜತೆಗೆ ಇತರೇ ಎಲ್ಲಾ ಇಂದ್ರಿಯಗಳು ಸಮರ್ಥವಾಗಲಿ. ಉಪನಿಷತ್ತಿನಲ್ಲಿ ಪ್ರತಿಪಾದ್ಯನಾದ ಭಗವನ್, ಸರ್ವತ್ರ ವ್ಯಾಪ್ತನಾದ ನಿನ್ನನ್ನು ನಾನು **ನಿರಾಕರಿಸುವುದಿಲ್ಲ** (ತಿರಸ್ಕರಿಸುವುದಿಲ್ಲ..ಬಿಡುವುದಿಲ್ಲ). ಸ್ವಾಮೀ ನೀನೂ ಸಹ **ನಿರಾಕರಿಸಬೇಡ** (ನೀನೂ ಸಹ ಬಿಡಬೇಡ, ತಳ್ಳಿಹಾಕಬೇಡ) ನೀನು ಸರ್ವದಾ ಸ್ವಕಾರವಾಗುವಂತೆ ಆಗಲಿ. ಉಪನಿಷತ್ತಿನಲ್ಲಿ ಹೇಳಿದ ಧರ್ಮಗಳು ನನ್ನಲ್ಲಿ ಸ್ಥಿರವಾಗಿರಲಿ ಸ್ಥಿರವಾಗಿರಲಿ ಓಂ.

ಈ ಉಪನಿಷತ್ತು **ಸಾಮವೇದದ ತಲವಕಾರ ಶಾಖೆ**ಗೆ ಸೇರಿದ್ದೆಂದು ತಿಳಿದುಬರುತ್ತೆ. ೨೦ ಮಂತ್ರಗಳಿಂದ ಕೂಡಿದ (೧ನೇ ಖಂಡದಲ್ಲಿ ೯ ಮಂತ್ರಗಳು, ೨ನೇ ಖಂಡದಲ್ಲಿ ೪ ಮಂತ್ರಗಳು, ೩ನೇ ಖಂಡದಲ್ಲಿ ೩ ಮಂತ್ರಗಳು ಹಾಗೂ ೪ನೇ ಖಂಡದಲ್ಲಿ ೪ ಮಂತ್ರಗಳು ಒಟ್ಟು ೨೦ ಮಂತ್ರಗಳು) ಈ ಉಪನಿಷತ್ತು ಬ್ರಹ್ಮ ರುದ್ರದೇವರ ಸಂವಾದ ರೂಪಿಯಾಗಿ ಭಗವಂತನ ಅನಂತ ಮಹಿಮೆಗಳನ್ನು ತಿಳಿಸಿಕೊಡುತ್ತದೆ. ಈ ಉಪನಿಷತ್ತಿಗೆ ಬ್ರಹ್ಮ ರುದ್ರರೇ ಋಷಿಗಳು. ಬ್ರಹ್ಮವಾಚ್ಯ



ಶ್ರೀಹರಿಯೇ ದೇವತಾ. ಅಕ್ಷರ ಗಣನೆಯಿಂದ ಛಂದಸ್ಸನ್ನು ತಿಳಿಯತಕ್ಕದ್ದು. ಉಪನಿಷತ್ತಿನಲ್ಲಿ **ನಾಲ್ಕು ಖಂಡಗಳಿರುತ್ತವೆ. ೧. ಋಷಿಕೇಶ ೨. ಅಪ್ರಮೇಯ ೩. ಅಸುರಾರಿ ೪. ದೇವಾನಾಂಪ್ರಿಯ** ಎಂಬ ಪ್ರಮೇಯಗಳನ್ನು ತಿಳಿಸಿಕೊಡುತ್ತದೆ.

ಈ ಉಪನಿಷತ್ತನ್ನು (೧) ತಲವಕಾರ ಉಪನಿಷತ್ತೆಂದೂ (೨) ಕೇನೋಪನಿಷತ್ತೆಂದೂ ಕರೆಯಲಾಗಿದೆ.

(೧) ತಲವಕಾರ ಎಂಬ ಋಷಿಗೆ ಗೋಚರವಾಯಿತೆಂದು ಅವರೇ ಈ ಉಪನಿಷತ್ತಿಗೆ ಋಷಿಗಳೆಂದು ಒಂದು ಕಡೆ ಹೇಳಲಾಗಿದೆ. ಆದರೆ ಈ ಉಪನಿಷತ್ತನ್ನು (೨) ಕೇನೋಪನಿಷತ್ತೆಂದೇ ಹೆಚ್ಚಿಗೆ ಖ್ಯಾತಗೊಂಡಿದೆ.

**'ಕೇನ'** ಎಂಬ ಪ್ರಶ್ನಾರೂಪದಿಂದ ಆರಂಭಗೊಂಡಿರುವುದರಿಂದ ಕೇನೋಪನಿಷತ್ತೆಂದು ಹೆಸರು ಪಡೆದಿದೆ. ಇದನ್ನು **'ಪ್ರಶ್ನೋಪನಿಷತ್'** ಎಂದೂ ಕರೆಯಲಾಗಿದೆ. ಕಾರಣ ಇಲ್ಲಿ ಆರಂಭದಲ್ಲಿ ಮಹಾರುದ್ರದೇವರು ಬ್ರಹ್ಮದೇವರನ್ನು ತಾತ್ವಿಕ ವಿಷಯ ತಿಳಿಯಲು ಪ್ರಶ್ನಿಸಿದ್ದರಿಂದ ಹಾಗೆ ಕರೆಯಲು ಅಡ್ಡಿಯಿಲ್ಲ.

ಈ ಉಪನಿಷತ್ ಸಾಮವೇದದಲ್ಲಿ ತಲವಕಾರ ಶಾಖೆಗೆ ಸೇರಿದೆ ಎಂದು ತಿಳಿದುಬರುತ್ತದೆ. ಸಾಮವೇದದ ಶಾಖೆಗಳು ಪತಂಜಲಿ ಹಾಗೂ ಶೌನತರು. ಸಾಮವೇದದಲ್ಲಿ ೧೦೦೦ ಶಾಖೆಗಳಿರುವುದೆಂದು ತಿಳಿಸುತ್ತಾರೆ. "ಸಹಸ್ರ ವರ್ತ್ಮಾ ಸಾಮವೇದಃ ತತ್ರ ಸಾಮವೇದಃ ಸಹಸ್ರಧಾ..." ಇವುಗಳಲ್ಲಿ ಎರಡನೇ ಪ್ರಕರಣವಾದ ಪ್ರಪಂಚ ಹೃದಯವು ಹಾಗೇ ತಿಳಿಸಿದ್ದರೂ ಈಗ ಉಪಲಬ್ಧವಾದ ೧೨ ಶಾಖೆಗಳನ್ನು ಮಾತ್ರ ಕಾಣುತ್ತೇವೆ. ಅವುಗಳ ಪೈಕಿ ತಲವಕಾರ, ಛಾಂದೋಗ್ಯ, ಇತ್ಯಾದಿ ಉಲ್ಲೇಖವಿದೆ.

ಶ್ರೀಮದಾಚಾರ್ಯರು ಸಾಮವು ಸಾವಿರ ಶಾಖೆಗಳನ್ನು ಹೊಂದಿದೆ ಅಂತ ತಿಳಿಸಿ ಸ್ಕಾಂದಪುರಾಣದಲ್ಲಿನ ವಿಷಯವನ್ನು ತಿಳಿಸಿರಿತ್ತಾರೆ.

**ತತ್ರ ಸಾಮವೇದಸ್ಯ ಶಾಖಾ ಸಹಸ್ರ ಮಾಸೀತ್** (ಚರಣವ್ಯೂಹ)

**ತಥೈವಚ ಸಹಸ್ರಧಾ** (ಸೂತ್ರಭಾಷ್ಯ)

ಹೀಗೆ ತಲವಕಾರ ಉಪನಿಷತ್ತು ಸಾಮವೇದದಲ್ಲಿನ ೧೦೦೦ ಶಾಖೆಗಳಲ್ಲಿ ಒಂದಾಗಿದೆ ಎಂದು ತಿಳಿದುಬರುವುದು.

ತಲವಕಾರ ಉಪನಿಷತ್ತಿಗೆ ಆಚಾರ್ಯ ಶ್ರೀ ಮಧ್ವರು ಭಾಷ್ಯ ರಚಿಸಲು ಪೂರ್ವದಲ್ಲಿ ಹರಿನಮನ ರೂಪ ಮಂಗಳಾಚರಣೆ ಶ್ಲೋಕ ಹೀಗಿದೆ.

**ಅನಂತಗುಣಪೂರ್ಣತ್ವಾದಗಮ್ಯಯಸುರೈರಪಿ ।**
**ಸರ್ವೇಷ್ಟ್ರದಾತ್ರೇ ದೇವಾನಾಂ ನಮೋ ನಾರಾಯಣಾಯತೇ ॥**

ಹೇ ನಾರಾಯಣನೇ ನೀನು ಅನಂತಾನಂತ ಗುಣಗಳಿಂದ ಪರಿಪೂರ್ಣನು. ಇಂತಹ ಅಚಿಂತ್ಯಾದ್ಭುತವುಳ್ಳ ನಿನ್ನನ್ನು ದೇವತೆಗಳು ಪೂರ್ಣವಾಗಿ ತಿಳಿಯಲಾಗಿಲ್ಲ. ಆದರೂ ನೀನು ಎಲ್ಲರ ಅಭೀಷ್ಟಗಳನ್ನು ಕೊಡುವ ಸ್ವಾಮಿಯೇ ನಿನಗೆ ನಮಸ್ಕಾರಗಳು. ದೇವತೆಗಳಷ್ಟೇ ಅಲ್ಲದೇ ಶ್ರೀ ರಮಾದೇವಿಯೂ ನಿನ್ನ ಅನಂತ ಗುಣಗಳನ್ನು ಪೂರ್ಣವಾಗಿ ತಿಳಿಯಲಾಗಿಲ್ಲ ಅಂದ ಮೇಲೆ ನಮ್ಮಂಥವರ ಪಾಡೇನು ?

**ನ ರಮಾऽಪಿ ಪದಾಂಗುಲೀಲಸನ್–**
**ನಖಧೂರಾಜದನಂತಸದ್ಗುಣಾನ್ ।**
**ಗಣಯೇದ್ ಗಣಯಂತ್ರನಾರತಂ**
**ಪರಮಾನ್ ಕೋऽಸ್ಯ ಪರೋ ಗುಣಾನ್ ವದೇತ್ ॥**
**(ಸು.ಮ.ವಿ. ೭–೪೬)**

ಹೀಗೆ ರಮಾದೇವಿಯು ಅನವರತ ಬಿಡುವಿಲ್ಲದೆ ಶ್ರೀಹರಿಯ ಗುಣಗಳನ್ನು ಎಣಿಸುತ್ತಿದ್ದಾಳೆ. ಅವನ ಅವಯವಗಳಲ್ಲಿನ ಕಾಂತಿಯೂ ಗುಣಪೂರ್ಣವಾಗಿರುವುದು.

ಹೀಗೆ ಶ್ರೀ ರಮಾರಮಣನ ಅನಂತ ಗುಣಗಳನ್ನು ವರ್ಣಿಸಲಸಾಧ್ಯವೆಂದು ದೇವೋತ್ತಮರಾದ ವಾಯುದೇವಾಂಶ ಶ್ರೀ ಆನಂದತೀರ್ಥರೇ ಹೇಳಿರುತ್ತಾರೆ.

## ಶ್ರೀಮದ್ ರಾಘವೇಂದ್ರ ಗುರುಸಾರ್ವಭೌಮರ ಮಂಗಳಪದ್ಯ

**ಅನಂತಗುಣಪೂರ್ಣಾಯ ದೋಷದೂರಾಯ ವಿಷ್ಣವೇ ।**
**ನಮಃ ಶ್ರೀ ಪ್ರಾಣನಾಥಾಯ ಭಕ್ತೇಭ್ಯೋऽಭೀಷ್ಟದಾಯಿನೇ ॥**

ಅನಂತಗುಣಪೂರ್ಣನೂ ಯಾವ ದೋಷವೂ ಇಲ್ಲದವನೂ ಆದ ಮಹಾವಿಷ್ಣುವಿಗೆ ನಮಸ್ಕಾರಗಳು. ನೀನು ಶ್ರೀ ಪ್ರಾಣರಿಗೆ ಸ್ವಾಮಿಯು ಆಗಿರುವೆ. ಶ್ರೀರಮಾದೇವಿಗೆ ನಾಥನೂ ಪ್ರಾಣದೇವರಿಗೂ ನಮನವು. ಭಕ್ತರ ಅಭೀಷ್ಟಗಳನ್ನು ಪೂರ್ಣಗೊಳಿಸುವವನು.

## ತಲವಕಾರ ಉಪನಿಷತ್ತಿಗೆ ಹಿನ್ನೆಲೆ

**ವೈಜಯಂತೇ ಸಮಾಸೀನಂ ಏಕಾಂತೇ ಚತುರಾನನಂ ।**
**ವಿಷ್ಣೋರ್ವಿವಿದುಷುಸ್ತತ್ತ್ವಂ ಪರ್ಯ ಪೃಚ್ಛತ್ ಸದಾಶಿವಃ ॥**

**ವಿವರಣೆ :** ವೈಜಯಂತಿ ಎಂಬುದು ಮೇರುಪರ್ವತದ ಒಂದು ಚಿಕ್ಕ ಬೆಟ್ಟ. ಈ ಬೆಟ್ಟವು ಬ್ರಹ್ಮದೇವರಿಗೆ ಭೂಲೋಕದಲ್ಲಿಯ ಸದನ (It was like a summer palace) ಬ್ರಹ್ಮದೇವರು ಇಲ್ಲಿಗೆ ಆಗಾಗ್ಗೆ ಬರುತ್ತಿದ್ದರು. ಹೀಗೆ ಒಮ್ಮೆ ಬ್ರಹ್ಮದೇವ ಬಂದರು. ಬಂದಿರುವ ವಿಷಯ ತಿಳಿದು ಉಮಾಪತಿ ಬರುತ್ತಾರೆ. ಬಂದವರು ಬ್ರಹ್ಮದೇವರಿಗೆ ನಮಸ್ಕರಿಸಿ ತಮಗೆ ಒದಗಿರುವ ಸಂಶಯಗಳಿಗೆ ಪರಿಹಾರ ರೂಪ ಉತ್ತರ ಬಯಸಿದರು. ರುದ್ರದೇವರು ಯದ್ಯಪಿ ಮಹಾಜ್ಞಾನಿಗಳೇ ಆಗಿದ್ದರೂ ಸಹ



ಸರ್ವೋತ್ತಮನಾದ ಭಗವಂತನ ವಿಷಯ ಇನ್ನಷ್ಟು ಹೆಚ್ಚಾಗಿ ತಿಳಿಯಬೇಕೆಂದು ಬ್ರಹ್ಮದೇವರಲ್ಲಿ ವಿನಂತಿಸುತ್ತಾರೆ.

ಈ ಶ್ಲೋಕದಲ್ಲಿ ನಾಲ್ಕು ಅಂಶಗಳಿವೆ.

೧) ವೈಜಯಂತಿಯು ಜನಋಷಿಗಳಿಂದ ನಿಬಿಡವಾಗದಿರುವ ಪ್ರಶಾಂತ ಸ್ಥಳ. ಇಲ್ಲಿ ಬ್ರಹ್ಮದೇವರು ಶ್ರೀಹರಿಯನ್ನು ಚಿಂತಿಸಬೇಕೆಂದು ಬಂದಿದ್ದರು. ಅವರೊಬ್ಬರೇ ಏಕಾಂಗಿಯಾಗಿ ಸಮಾಧಾನ

೨) ಚಿತ್ತರಾಗಿ ಯುಕ್ತ ಆಸೀನರಾಗಿದ್ದರು.

೩) ಇಂತಹ ಉತ್ತಮ ವಾತಾವರಣವಿದ್ದಿತು. ಆಗ ರುದ್ರದೇವರು ಬಂದರು. ಇಲ್ಲಿ ಬ್ರಹ್ಮದೇವರು ಏಕಾಂತರಾಗಿದ್ದಾರೆಂಬ ವಿಷಯ ತಿಳಿದು ರುದ್ರದೇವರು ಬಂದರೆಂದಿದೆ. ತಾತ್ವಿಕ ಬ್ರಹ್ಮಜ್ಞಾನ ಪಡೆಯಲು ಗುರುಗಳು ಒಬ್ಬರೇ ಸುಖಾಸೀನರಾಗಿದ್ದಾಗ ಪ್ರಶ್ನೆ ಕೇಳಬೇಕು. ಆಗ ಗುರುಗಳು ಸಮೀಚೀನ ಉಪದೇಶ ಸಂಶಯ ಪರಿಹಾರ ಮಾಡುತ್ತಾರೆ. ಇಂಥದ್ದೇ ಒಂದು ಪ್ರಸಂಗವು ಶ್ರೀಮದಾಚಾರ್ಯರು ಬದರೀಕಾಶ್ರಮಕ್ಕೆ ಹೋಗಿ ಶ್ರೀನಾರಾಯಣನ ದರ್ಶನ ಪಡೆದಾಗ ಶ್ರೀಮದಾಚಾರ್ಯರ ಮನೋಹರವಾದ ಮುಖವನ್ನು ನೋಡುತ್ತಾ ಏಕಾಂತದಲ್ಲಿ ಹೇಳಿದನು.

**ಶೃಣು ದೇವಕಾರ್ಯಮವಧಾರ್ಯ ಧೈರ್ಯವನ್**
**ಯದುದೀರ್ಯಮಾಣಮಿದಮಾರ್ಯಸಮ್ಮತಮ್** (ಸು.ಮ.ವಿ. ೮–೪೪)

ಆನಂದತೀರ್ಥರಿಗೆ ಶ್ರೀನಾರಾಯಣನು ಏಕಾಂತದಲ್ಲಿ ಬ್ರಹ್ಮಸೂತ್ರಗಳಿಗೆ ಭಾಷ್ಯ ಬರೆಯಲು ಆಜ್ಞಾಪಿಸಿದರೆಂದಿದೆ.

ಇಲ್ಲಿ ಬ್ರಹ್ಮದೇವರು ಏಕಾಂತದಲ್ಲಿ ಇದ್ದಾಗ ಬ್ರಹ್ಮದೇವರು ಬಂದು ಪ್ರಶ್ನೆ ಕೇಳಿದರು. ಏನು ಕೇಳಿದರು ? ಹೇ ಸ್ವಾಮಿ, ಭಗವಂತನ ವಿಷಯವಾಗಿ ನನ್ನ ಯೋಗ್ಯತೆಗೆ ತಕ್ಕಂತೆ ತಿಳಿದಿದ್ದೇನೆ. ಆದರೆ ಶ್ರೀಹರಿಯ ಮಹಾಮಹಿಮೆ ಬಗ್ಗೆ ಇನ್ನಷ್ಟು ಈಗ ಹೆಚ್ಚು ತಿಳಿಯಬಯಸುತ್ತೇನೆ ಎಂದಿದೆ ಅಥವಾ ತಾನು ತಿಳಿದಿರುವುದನ್ನು ದೃಢಪಡಿಸಿಕೊಳ್ಳಲೂ ಆಗಬೇಕು ಮತ್ತೂ ಇದರಿಂದ ಲೋಕದಲ್ಲಿ ಸಜ್ಜನರ ಅನುಗ್ರಹವಾಗಬೇಕೆಂದು ಸರ್ವೇಂದ್ರಿಯ ಪ್ರೇರಕನ ಬಗ್ಗೆ ಕೇಳುತ್ತಾರೆಂದು ತಿಳಿಯಬೇಕು.

೪) ಇಲ್ಲಿ ರುದ್ರದೇವರನ್ನು ಸದಾಶಿವನೆಂದು ತಿಳಿಸಲಾಗಿದೆ.

ಶಿವ ಅಂದರೆ ಮಂಗಳ = ನಾರಾಯಣನ ವಿಷಯ ತಿಳಿಯ ಬಂದಾಗ, ಬರೀ ಶಿವನಾಗಿರದೇ ಸದಾಶಿವನಾದನು. ಯಾವಾಗಲೂ ಮಂಗಳರೂಪನಾದನು ಎಂಬರ್ಥದಿಂದಾಗಿ ಸದಾಶಿವನಾದನು ಎಂಬ ಧ್ವನಿ ಇದೆ. ಶಿವನು ಸ್ಮಶಾನ ವಾಸಿ ಮಂಗಳರೂಪನು ಯಾವಾಗ ಆದ ಎಂಬುದಕ್ಕೆ ಶ್ರೀಮದ್ಭಾಗವತದಲ್ಲಿ

**"ಸಂಚಂತಯೇತ್ ಭಗವತ್ಪಾದಾರವಿಂದಂ__________
ಯಚ್ಛೌನಿಶ್ರಿತ ಪರಿಶೃತೋತೀರ್ಥೇನ ಮೂರ್ಧ್ನಿಧತ್ತೇನ ಶಿವಃ ಶಿವೋಭೂತ್"**

ಶ್ರೀವಿಷ್ಣುಪಾದತಲದಿಂದ ಹೊರಟ ಪವಿತ್ರ ಗಂಗೆಯನ್ನು ತನ್ನ ಶಿರಸ್ಸಿನ ಜಟಾದಲ್ಲಿ ಧರಿಸಿದ ದಿನದಿಂದ ಬರೀ ಶಿವನಾಗದೇ, ಸದಾಶಿವನಾದ (ಸದಾ ಮಂಗಳರೂಪ, ಮಂಗಳಪ್ರದನಾದನಂದಿದೆ)

**"ಕೇನೇಶಿತಂ"** ಎಂಬ ಪ್ರಥಮ ಮಂತ್ರದಿಂದ ಆರಂಭವಾಗುವುದರಿಂದ ಈ ಉಪನಿಷತ್ತನ್ನು **"ಕೇನೋಪನಿಷತ್"** ಎಂದೂ ಸಹ ಕರೆಯಲ್ಪಡುತ್ತದೆ.

ಮೇರುಪರ್ವತ ಪ್ರಾಂತ್ಯದಲ್ಲಿ ವೈಜಯಂತಿ ಎಂಬ ಬ್ರಹ್ಮದೇವರ ಸದನವಿರುವುದು. ಬ್ರಹ್ಮದೇವರು ಇಲ್ಲಿಗೆ ಆಗಾಗ ಬರುತ್ತಿರುತ್ತಾರೆ. ಒಮ್ಮೆ ಬ್ರಹ್ಮದೇವರು ಆಗಮಿಸಿದ್ದರು. ಹೀಗೆ ಬ್ರಹ್ಮದೇವರು ಬಂದ ಸಮಯವನ್ನು ಗಮನಿಸಿ ಸರ್ವರ ಮನೋನಿಯಾಮಕರಾದ ರುದ್ರದೇವರು ಬಂದರು. ಬಂದ ರುದ್ರದೇವರು ಚತುರ್ಮುಖರನ್ನು ಏಕಾಂತದಲ್ಲಿ ಪ್ರಶ್ನೆಮಾಡುತ್ತಾರೆ.

ಸ್ವಾಮಿ ನನ್ನ ಮನಸ್ಸು ಯಾರಿಂದ ಪ್ರೇರಿತವಾಗಿ ಅವಶವಾಗಿ ಹೋಗುವುದು ?

ಲೋಕದಲ್ಲಿ **ಸಾಧು** ಮತ್ತು **ಅಸಾಧು** ಎಂದು ವಿಷಯಗಳಿವೆ. ನಮ್ಮ ಮನಸ್ಸೆಂಬ ಇಂದ್ರಿಯವು ನಮ್ಮ ಅಧೀನವಿಲ್ಲದೆ, ಇಷ್ಟವಿಲ್ಲದ ಅಸಾಧು ವಿಷಯದಲ್ಲೇ ಹೋಗುತ್ತದೆ. ಇದು ಯಾರಿಂದ ಪ್ರೇರಿತವಾಗಿ ಪ್ರವೃತ್ತವಾಗುವುದು ? ಬ್ರಹ್ಮದೇವ, ನೀವಂತೂ ಪ್ರೇರಕರಲ್ಲ. ಹೋಗಲಿ, ಮುಖ್ಯಪ್ರಾಣದೇವರೆಂದು ಹೇಳಲು ಬರುವುದಿಲ್ಲ. ಕಾರಣ ಅವರಿಗೂ ಪ್ರೇರಕ ಶಕ್ತಿ ಬೇರೊಬ್ಬನಿದ್ದಾನೆ. ಆ ಅದ್ಭುತ ಪ್ರೇರಕ ಶಕ್ತಿ ಯಾರು ? ಎಂದು ಮನೋನಿಯಾಮಕರಾದ ಮಹರುದ್ರದೇವರು ಬ್ರಹ್ಮದೇವರನ್ನು ಕುರಿತು ಪ್ರಶ್ನೆ ಮಾಡುತ್ತಾರೆ. ಅಂದರೆ, ಮನಸ್ಸೇ ಮೊದಲಾದ ಸರ್ವ ಇಂದ್ರಿಯ ಪ್ರೇರಕನಾದ ಆ ಮಹಾವ್ಯಕ್ತಿ ಯಾರು ? ಎಂಬುದೇ ಈ ಪ್ರಶ್ನೆಯ ಸಾರಾಂಶ.

ಇಂಥದೇ ಪ್ರಸಂಗ ಮಹಾಭಾರತ ಶಾಂತಿ ಪರ್ವದ ಮೋಕ್ಷಧರ್ಮ ಪರ್ವದಲ್ಲಿ ಸದಾಶಿವನಿಗೆ ಬ್ರಹ್ಮದೇವರು ಇದೇ ರೀತಿ ಪ್ರಶ್ನೆಗೆ ಉತ್ತರ ರೂಪವಾಗಿ ತತ್ತ್ವೋಪದೇಶ ಮಾಡಿದ ಒಂದು ಅಧ್ಯಾಯವಿರುವುದು. ಶ್ರೀಮದಾಚಾರ್ಯರು ಮ.ಭಾ.ತಾ.ನಿ.ದಲ್ಲಿಯೂ **"ಆಹ ಬ್ರಹ್ಮೈತ ಮೇವಾರ್ಥಂ ಮಹಾದೇವಾಯ ಪೃಚ್ಛತೇ"** ಎಂದು ತಿಳಿಸಿರುತ್ತಾರೆ.

**"ಅಹಂ ಬ್ರಹ್ಮಾದ್ಯಈಶಃ ಪ್ರಜಾನಾಂ ತಸ್ಮಾತ್ ಪ್ರಸೂತಸ್ತ್ವಂಚಮತ್ತಃ ಪ್ರಸೂತಃ ।
ಮತ್ತ್ತೋ ಜಗತ್‌ಸ್ಥಾವರಂ ಜಂಗಮಂ ಚ ಸರ್ವೇವೇದಾಸರಹಾಸ್ಯಶ್ಚಪುತ್ರೆ ॥"**

ಈ ಮೊದಲನೇ ಮಂತ್ರದಿಂದ ತಾರತಮ್ಯವು ತಿಳಿಸಲ್ಪಡುತ್ತದೆ. ರುದ್ರದೇವರು ತಮ್ಮ ಸಂದೇಹ ಪರಿಹಾರಕ್ಕಾಗಿ ಬ್ರಹ್ಮದೇವರನ್ನು ಕೇಳಿದರು. ಅಂದ ಮೇಲೆ



ರುದ್ರದೇವರಿಗಿಂತ ಜ್ಞಾನದಲ್ಲಿ ಬ್ರಹ್ಮದೇವರು ಉತ್ತಮರೆಂದು. ಬ್ರಹ್ಮದೇವರು ಉತ್ತರಿಸುತ್ತಾ ಭಗವಂತನೇ ಸರ್ವೇಂದ್ರಿಯ ಪ್ರೇರಕನಾಗಿರುತ್ತಾನೆ ಎಂದು ಹೇಳಿದಾಗ ಶ್ರೀಹರಿಯೇ ತಮಗೆಲ್ಲರಿಗಿಂತ ಉತ್ತಮನಷ್ಟೆ. ಅಲ್ಲದೇ ಸರ್ವೋತ್ತಮನೆಂದು ತಿಳಿಸುತ್ತಾರೆ. ರುದ್ರದೇವರು ಮಹಾಜ್ಞಾನಿಗಳಾಗಿದ್ದರೂ ವಿಷ್ಣುವಿನ ವಿಷಯಕ ಹೆಚ್ಚಿನ ಜ್ಞಾನ ಪಡೆಯಲು ಬ್ರಹ್ಮದೇವರನ್ನು ಕೇಳಿದರೆಂದು ತಿಳಿಯಬೇಕು. ಇದರಿಂದ ಮೊದಲನೇ ಖಂಡದ ಋಷೀಕೇಶ **(ಋಷೀಕಾಣಾಂ=ಇಂದ್ರಿಯಾಣಾಂ + ಈಶಃ)**ವೆಂಬ ತತ್ವವು ತಿಳಿಸಿದಂತಾಯಿತು.

ಕೇನೇಷಿತಂ ವಾಕ್ಯದಲ್ಲಿ "ಇಷಿತಂ" = ಅಂದರೆ ಇಚ್ಛಿಸುವುದು, ಪ್ರೇರೇಪಿಸುವುದು = ಮನಸ್ಸು ಎನ್ನುವುದು ಇಷ್ಟವಾದುದನ್ನು ಅಥವಾ ಅನಿಷ್ಟ (ಕೆಟ್ಟ) ವಿಷಯಗಳ ಕಡೆಗೆ ಹೋಗುವುದು. ಇಲ್ಲಿ ಮನಸ್ಸು ಅಚೇತನವಾಗಿರುವಾಗ ತಾನಾಗಿ ಉಭಯ ವಿಷಯಗಳ ಕಡೆ ಸೆಳೆಯುವುದು. ಇದಕ್ಕೆ ಯಾರ ಪ್ರೇರಣೆಯಿಂದ ಆಗುವುದು ?

**ವಿವರಣೆ :** ನನ್ನ ಮನಸ್ಸು ನನಗೆ ತಿಳಿಯದೇ ಒಮ್ಮೊಮ್ಮೆ ಬಲವಂತವಾಗಿ ಅಸಾಧು ವಿಷಯಗಳ ಕಡೆಗೆ ಸೆಳೆಯಲ್ಪಡುವುದು. ಅಂದರೆ ಮನಸ್ಸು ನನ್ನ ಅಧೀನದಲ್ಲಿರುವುದಿಲ್ಲ. ಹೀಗಿರುವಾಗ ಯಾವ ದೇವರಿಂದ ಪ್ರೇರಿತವಾಗಿ ಹೋಗುವುದು ?

ಈ ಪ್ರಶ್ನೆ ಮನೋನಿಯಕರಾದ ರುದ್ರದೇವರು ಹೇಳಿದ್ದಾರೆಂದ ಮೇಲೆ ಅವರು ಮನಃಪ್ರೇರಕತ್ವವನ್ನು ಸ್ವತಂತ್ರವಾಗಿ ಮಾಡುವುದಿಲ್ಲವೆಂಬ ಅಂಶ ಸ್ಪಷ್ಟ – ಭಾಗವತ ಸಮುದ್ರ ಮೋಹಿನಿ.

ಬ್ರಹ್ಮದೇವರು ಉತ್ತರಿಸುತ್ತಾರೆ. "ಮಹಾವಿಷ್ಣುವೇ ಸರ್ವಪ್ರೇರಕ ಮಹಾಶಕ್ತಿ. ಅವನೇ ಮುಖ್ಯಪ್ರೇರಕ"ನೆಂದು ಹೇಳಿದಾಗ ಬ್ರಹ್ಮದೇವರು ಪ್ರೇರಕರಲ್ಲವೆಂಬುದೂ ತಿಳಿಸಿದಂತಾಯಿತು. ಬ್ರಹ್ಮದೇವರಿಗೂ ಪ್ರೇರಕನು ಶ್ರೀಹರಿ ಅಂತ ಹೇಳಿದ್ದರಿಂದ ಹರಿಯೇ ಸರ್ವೋತ್ತಮನು ಎಂದು ತಾರತಮ್ಯ ಪ್ರಮೇಯವು ಸೂಚಿಸಿದಂತಾಯಿತು.

ಶ್ರೀಮದಾಚಾರ್ಯರ ಭಾಷ್ಯದ ಸಾರವು ಈ ಉಪನಿಷತ್ತಿನ್ನಲ್ಲಿ ಸ್ಪಷ್ಟ ಗೋಚರವಾಗುವುದು.

ಹೀಗಿರುವಲ್ಲಿ, ಅದ್ವೈತ ಭಾಷ್ಯದಲ್ಲಿ "ಯಾವನೋ ಒಬ್ಬ ಶಿಷ್ಯ ಬ್ರಹ್ಮಜ್ಞಾನಿಯಾದ ನಿಷ್ಠಾವಂತ ಗುರುಗಳಲ್ಲಿ ಹೋಗಿ ಪ್ರಶ್ನಿಸಿದರು" ಎಂದು ಕಾಲ್ಪನಿಕವಾದ ಸಂಗತಿ ಅಲ್ಲದೇ ಅಸಂಗತ ವಿಚಾರ ರಹಿತ ಶ್ರೀಶಂಕರ ಭಾಷ್ಯದಲ್ಲಿ **"ಕಶ್ಚಿತ್ (ಶಿಷ್ಯಃ) ಗುರುಂ ಬ್ರಹ್ಮನಿಷ್ಠ ವಿಧಿವತ್ ಉಪೇಯ ಪ್ರತ್ಯಗಾತ್ಮವಿಷಯಾತ್ ಅನ್ಯತ್ರ ಶರಣಂ ಅಪಶ್ಯನ್ ಅಭಯಂ ಶಿವಂ ಅಚಲಂ ಇಚ್ಛನ್ ಪಪ್ರಚ್ಛ ಇತಿ ಕಲ್ಪ್ಯತೆ"** ಎಂದು ಕಾಲ್ಪನಿಕ ಮಾಡಬೇಕಾಗುವುದು ಎಂದಿದ್ದಾರೆ.

ಆದರೆ ಶ್ರೀಮದಾಚಾರ್ಯರು ತಾವು ಬರೆದ ಭಾಷ್ಯದಲ್ಲಿ ಈ ಉಪನಿಷತ್ತಿನ ಆಗತಿಕ್ರಮ ಅವತಾರಿಕಾ ರೂಪದಲ್ಲಿ ಆಧಾರಸಹಿತ ತಲವಕಾರ ಉಪನಿಷತ್ತಿನ ಆರಂಭದಲ್ಲಿ ವಿವರಿಸುವುದು ಬಹಳ ಮುಖ್ಯವೆಂದು ತಿಳಿಯಬೇಕು.

ಅಪ್ರಮೇಯ ಎಂಬ ಎರಡನೇ ಖಂಡದಲ್ಲಿ ಭಗವಂತನನ್ನು ಯಾರಿಂದಲೂ ಸಂಪೂರ್ಣವಾಗಿ ತಿಳಿಯಲಾಗುವುದಿಲ್ಲ. ಕಾರಣ ಅವನು ಅಪರಿಚ್ಛಿನ್ನನು, ಅಪ್ರಮೇಯನು. ಒಂದು ವೇಳೆ ಯಾರಾದರೊಬ್ಬನು ತಾನು ಭಗವಂತನನ್ನು ತಿಳಿದಿದ್ದೇನೆಂದು ಹೇಳಿಕೊಂಡರೆ ಅವನು ಏನನ್ನೂ ತಿಳಿದಿರುವುದಿಲ್ಲ. ಆದರೆ ತಾನು ಭಗವಂತನು ಅಪರಿಚ್ಛಿನ್ನನು ತನ್ನ ಯೋಗ್ಯತೆಗೆ ಅನುಗುಣವಾಗಿ ತಿಳಿದಿದ್ದೇನೆ. ಇನ್ನೂ ಪೂರ್ತಿ ತಿಳಿದಿಲ್ಲವೆಂದು ಹೇಳಿದವನು ನಿಜವಾಗಿಯೂ ತಿಳಿದಿರುತ್ತಾನೆ. ಹೀಗೆ ಪ್ರತಿ ಜ್ಞಾನಿಯು ಭಗವಂತನ ವಿಷಯಕ ಜ್ಞಾನವನ್ನು ಯಥಾಯೋಗ್ಯ ಈ ಮಾನವ ಜನ್ಮ ತತ್ರಾಪಿ ವೈಷ್ಣವ ಜನ್ಮ ಬಂದಾಗ ತಿಳಿಯಲು ಪ್ರಯತ್ನ ಪಡೆದಿಲ್ಲವೆಂದಾದರೆ ಮಹತ್ತಾದ ನಷ್ಟವೇ ಆಗುವುದೆಂದು ಉಪನಿಷತ್ತು ಎಚ್ಚರ ಕೊಡುತ್ತದೆ. ಪ್ರಯತ್ನಶೀಲನು ಶಾಶ್ವತ ಸುಖಾನುರೂಪ ಮೋಕ್ಷವನ್ನೇ ಹೊಂದುತ್ತಾನೆ.

ಅಸುರಾರಿ ಎಂಬ ಮೂರನೇ ಖಂಡದಲ್ಲಿ ದೇವತೆಗಳಿಂದಲೂ ಭಗವನ್ಮಹಿಮಾ ಸಾಕಲ್ಯೇನ ತಿಳಿಯಲಾಗಲಿಲ್ಲ ಎಂಬ ತತ್ತ್ವವನ್ನು ಒಂದು ಕಥಾರೂಪದಿಂದ ತಿಳಿಸಿಕೊಡುತ್ತದೆ.

ಒಮ್ಮೆ ದೇವತೆಗಳಿಗೂ ದಾನವರಿಗೂ ಯುದ್ಧವಾಯಿತು. ಆಗ ಶ್ರೀಹರಿಯು ದೇವತೆಗಳಲ್ಲಿ ಪ್ರವಿಷ್ಠನಾಗಿ ದೈತ್ಯರನ್ನು ಪರಾಜಯಗೊಳಿಸಿದನು. ಆದರೆ ದೇವತೆಗಳಿಗೆ ಆ ಕಾಲದಲ್ಲಿ ಕಿಂಚಿತ್ ಅಸುರಾ ವೇಶಯುಕ್ತರಾಗಿ ದೇವತೆಗಳು ಭಗವಂತನ ಅನುಗ್ರಹದಿಂದಲೇ ಜಯವು ಪ್ರಾಪ್ತವಾಯಿತೆಂಬುದನ್ನು ಮರೆತು ಅಜ್ಞಾನಿಗಳಂತೆ ತಮ್ಮ ತಮ್ಮ ಸ್ವಸಾಮರ್ಥ್ಯದಿಂದಲೇ ಈ ಜಯವು ಲಭ್ಯವಾಯಿತೆಂದು ಜಂಭ ಕೊಚ್ಚಿಕೊಂಡರು. ಆಗ ಅಸುರಾವಿಷ್ಟರಾದ ದೇವತೆಗಳಿಗೆ ತನ್ನ ಯಥಾರ್ಥ ತತ್ತ್ವವನ್ನು ತಿಳಿಸುವ ಉದ್ದೇಶದಿಂದ ಶ್ರೀವಿಷ್ಣುವು ಚತುರ್ಮುಖ ಬ್ರಹ್ಮದೇವರು ಮುಖ್ಯಪ್ರಾಣದೇವರಿಂದ ಉಮಾಪರಮೇಶ್ವರ ಸಪತ್ನೀಕರಾಗಿ ತಾನು ಯಕ್ಷರೂಪದಿಂದ ಕಾಣಿಸಿಕೊಂಡನು. ಆದರೆ ತನ್ನನ್ನು ಬಿಟ್ಟು ಇತರರು ಆ ದೇವತೆಗಳಿಗೆ ಕಾಣಿಸಲಿಲ್ಲ. ಶ್ರೀಹರಿ ಬ್ರಹ್ಮಾದಿ ದೇವತೆಗಳಿಗಿಂತಲೂ ಉತ್ತಮರೆಂದು ಪರಿವಾರ ಭೂತರಾದವರಾದ್ದರಿಂದ ಅಜ್ಞಾನಾವಿಷ್ಟ ದೇವತೆಗಳೇ ಜಯವು ನಿಮ್ಮಿಂದ ಪಡೆಯಲಾಗಿದೆ ಎಂಬ ಭ್ರಾಂತಿಯನ್ನು ಹೊಂದಬೇಡಿರಿ ಎಂಬ ವಿಷಯವನ್ನು ತಿಳಿಸಿ ಅನ್ಯಥಾ ಜ್ಞಾನವನ್ನು ಪರಿಹಾರ ಮಾಡಲು **ಯಕ್ಷ** ರೂಪದಿಂದ ಆವಿರ್ಭೂತನಾದನು. ನನ್ನ ಪರಿವಾರ ದೇವತೆಗಳನ್ನೇ ತಿಳಿಯಲಸಮರ್ಥರಾದ ನೀವು ನನ್ನನ್ನೇನೆಂದು ತಿಳಿಯುವಿರಿ ?



ಇಲ್ಲಿ ಎರಡು ವಿಷಯ ಪ್ರಸ್ತಾಪವಾಗಿದೆ. **(೧) ಪ್ರೇಷಿತಂ ಮನಃ (೨) ಯಕ್ಷ** ಎಂಬೆರಡೂ ನಪುಂಸಕಲಿಂಗ ಶಬ್ದಗಳು ತಿಳಿಸುವುದರಿಂದ **ಮನಃ** – ಸ್ತ್ರೀಪುರುಷರಲ್ಲಿ ಸಮವಾಗಿ ಇರುತ್ತದೆ. ಇನ್ನು ಯಕ್ಷನು ಯಾರೆಂದು ಜಿಜ್ಞಾಸೆ ಬಂದಿರುವುದರಿಂದ **ಬ್ರಹ್ಮನ್** ಶಬ್ದವೂ ನಪುಂಸಕಲಿಂಗವಾಗಿರುವುದರಿಂದ ನಾರಾಯಣನೇ ಎಂದು ನಿರ್ಧಾರವಾಗುತ್ತದೆ. **ಯಕ್ಷ** ಶಬ್ದವು **ಬ್ರಹ್ಮ** ಶಬ್ದದ ಪರ್ಯಾಯವಾಗಿದೆ.

ಆಗ ದೇವತೆಗಳು **ಯಕ್ಷ**ನನ್ನು ಕಂಡವರಾಗಿ ಅವನು ಯಾರೆಂಬುದು ತಿಳಿಯಲು ಇಂದ್ರಾದಿ ದೇವತೆಗಳು ಮೊದಲಿಗೆ ಅಗ್ನಿಯನ್ನು ನಂತರ ನಾಸಿಕ್ಯ ವಾಯುವನ್ನು ಕಳಿಸುತ್ತಾರೆ. ಆದರೆ ಅವರುಗಳು ಯಕ್ಷನು ಯಾರೆಂದು ತಿಳಿಯಲು ಅಶಕ್ಯರಾದಾಗ ಇಂದ್ರನೇ ಸ್ವಯಂ ಹೋಗುತ್ತಾನೆ. ಆ ಕ್ಷಣದಲ್ಲಿ ಯಕ್ಷ ಅದೃಶ್ಯನಾಗುತ್ತಾನೆ. ಆ ಪ್ರದೇಶದಲ್ಲಿ ಹಿಮವಂತನ ಪುತ್ರಿ ಅತಿಸುಂದರೀ ಸುವರ್ಣ ಪ್ರಕಾಶಳಾದ ಉಮಾದೇವಿಯು ಕಾಣಿಸುತ್ತಾಳೆ. ಆಗ ಇಂದ್ರ ಆಕೆಯನ್ನು "ಈವರೆಗೆ ಇಲ್ಲಿದ್ದ ಯಕ್ಷನು ಯಾರು ? ಮತ್ತು ನೀನ್ಯಾರು ?" ಎಂದು ಪ್ರಶ್ನಿಸುತ್ತಾನೆ.

ಪಾರ್ವತಿಯನ್ನು ಹೊರತು ಇತರೇ ದೇವತೆಗಳು ಹಾಗೂ ಯಕ್ಷನು ಅದೃಶ್ಯರಾಗುತ್ತಾರೆ. ಕಾರಣ ಆ ಸಮಯದಲ್ಲಿ ಇಂದ್ರನಿಗೆ ಯಥಾರ್ಥ ಜ್ಞಾನ ಕೊಡಲು ಪಾರ್ವತಿಯು ಇಂದ್ರನಿಗೆ ನಿಯತ ಗುರುಗಳೆಂದು ತಿಳಿಯುವುದು. ಇಂದ್ರನಿಂದ ಪ್ರಶ್ನಿಸಲ್ಪಟ್ಟ ಪಾರ್ವತಿಯು **"ಈವರೆಗೆ ನಿಮಗೆ ಗೋಚರವಾದ ಯಕ್ಷನು ಸಾಕ್ಷಾತ್ ಪರಬ್ರಹ್ಮನೇ ಎಂದು ತಿಳಿಸಿದಳು. ಹೇ ಇಂದ್ರಾದಿ ದೇವತೆಗಳೇ ಅಮರಾಸುರ ಸಮರದಲ್ಲಿ ಜಯವನ್ನು ನಿಮಗೆ ತಂದುಕೊಟ್ಟವನು ಆ ಪರಮಾತ್ಮನು."** ಆದರೆ ನೀವು ಅಹಂಕಾರದಿಂದ ವಿಜಯವು ನಿಮ್ಮಿಂದಲೇ ಆಯಿತೆಂದು ತಿಳಿದಿರುವಿರಿ ಎಂದು ಹೇಳಿದಾಗ ದೇವತೆಗಳಿಗೆ ಕವಿದುಕೊಂಡಿರುವ ಅಜ್ಞಾನವು ಪರಿಹಾರವಾಗಿ ಯಕ್ಷರೂಪನು ಶ್ರೀಹರಿಯೇ ಮತ್ತು ದೈತ್ಯ ಪರಾಜಯಕ್ಕೆ ತಮ್ಮಲ್ಲಿ ಪ್ರವಿಷ್ಠನಾದ ಶ್ರೀ ಭಗವಂತನಿಂದಲೇ ಆಯಿತೆಂದು ತಿಳಿದುಕೊಂಡರು. ಯಕ್ಷರೂಪನಾದ ಭಗವಂತನು ಪರಿವಾರ ಸಮೇತ ಬಂದಿದ್ದರಿಂದ ಅವರುಗಳು ಇಂದ್ರನಿಗಿಂತ ಉತ್ತಮನೆಂದು, ಇಂದ್ರನು ಪಾರ್ವತಿಯನ್ನು ಯಕ್ಷನ ವಿಷಯ ಕುರಿತು ಪ್ರಶ್ನಿಸಿದನಾದ್ದರಿಂದ ಅಗ್ನಿ ವಾಯುಗಳಿಗಿಂತ ಉತ್ತಮನು. ಇಂದ್ರನು ಅಗ್ನಿವಾಯುಗಳಿಗೆ ಉಪದೇಶಿಸಿದನಾದ್ದರಿಂದ ಅವರಿಗಿಂತ ಉತ್ತಮನು.

**ದೇವಾನಾಂಪ್ರಿಯ** ಎಂಬ **ನಾಲ್ಕನೇ ಖಂಡ**ದ ಸಾರಾಂಶವು, ದೇವತೆಗಳ ತಾರತಮ್ಯವು ತಿಳಿಸಲ್ಪಡುತ್ತದೆ. ಉಮಾ, ರುದ್ರ, ಗರುಡ, ಶೇಷ ಸಪತ್ನೀಕರು ನಿಗರ್ವಿಗಳು ಮತ್ತು ಇತರೆ ದೇವತೆಗಳಿಗಿಂತ ಉತ್ತಮರು, ಇವರಿಗಿಂತ ಬ್ರಹ್ಮದೇವರು ಉತ್ತಮರು. ಗರ್ವಿಷ್ಠರಾದ ಇಂದ್ರಾದಿ ದೇವತೆಗಳು ಪರಮಾತ್ಮನ ಜ್ಞಾನೇಚ್ಛುಗಳಾದ್ದರಿಂದ ತಮಗಿಂತ ಅವರು ಉತ್ತಮರು. ಹೀಗಿದ್ದರೂ ಪರಮಾತ್ಮನ ವಿಷಯಕ ಜ್ಞಾನಕ್ಕಾಗಿ ಪ್ರಥಮತಃ

ತಿಳಿದವನಾದ್ದರಿಂದ ಉಮಾದೇವಿಗೆ ಮಾತ್ರ ಅವರು ಕಾಮಾದಿ ಸುರರು ಸಮಾನರು. ಇದೇ ಉಪದೇಶವು.

ಆ ಬ್ರಹ್ಮ **ಕಪಿಲಾಖ್ಯ** ರೂಪದಿಂದ ಕಣ್ಣು ಮುಚ್ಚಿಕೊಂಡು ಎಲ್ಲಾ ವಸ್ತುಗಳನ್ನು ಪ್ರಕಾಶಿಸಿದನು. ಅಂತಹ ಭಗವಂತನು ಕ್ಷೀರ ಸಮುದ್ರದಲ್ಲಿ ಯೋಗ ನಿದ್ರಾರೂಢನಾಗಿರುತ್ತಾನೆ. ಇದೇ **ಅಧಿದೈವತಃ,** ನಂತರ ಶರೀರಗಳಲ್ಲಿದ್ದು **ಆಧ್ಯಾತ್ಮ**ವೆಂಬುದನ್ನು ಉಪದೇಶಿಸುವನು. ಅವನಿಂದಲೇ ಪ್ರೇರಿತವಾದ ಮನಸ್ಸೂ ಸಹ ಸಂಪೂರ್ಣವಾಗಿ ವಿಷಯೀಕರಿಸಲು ಸಮರ್ಥವಲ್ಲ. ಆದ್ದರಿಂದ **ಅನಿರುದ್ಧಾಖ್ಯ** ಹರಿಯಿಂದಲೇ ವಿಷಯಗಳು ಸ್ಮರಣೆಗೆ ಬರುವಂತೆ ಆಗುವುದು. ಆ ಪರಬ್ರಹ್ಮನು ವ್ಯಾಪ್ತನಾದುದರಿಂದ ತದ್ವನಂ (ಭಜನೀಯನೆಂದು) ಅವನನ್ನು **ವನಂ** ಎಂದು ಉಪಾಸನಾ ಮಾಡತಕ್ಕದ್ದು. ಆ ಬ್ರಹ್ಮ ವಿದ್ಯೆಗೆ ತಪೋರೂಪವಾದ ಚಾಂದ್ರಾಯಣಾದಿ ವ್ರತಗಳು ಮತ್ತು ಶಾಸ್ತ್ರಾಧ್ಯಯನವು, ಇಂದ್ರಿಯನಿಗ್ರಹ ಸ್ವವಿಹಿತ ಕರ್ಮಾನುಷ್ಠಾನ ಸಹಿತದಿಂದ ಅಧಿಕಾರಿಯು ಆಗುತ್ತಾನೆ. ಈ ಉಪನಿಷತ್ತಿನಲ್ಲಿ ತಿಳಿಸಿದ ಪ್ರಕಾರ ಜ್ಞಾನಿಯು ಸರ್ವಪಾಪಗಳಿಂದ ಸ್ವಸ್ವರೂಪಾನಂದವನ್ನು ಆನಂದಾದಿ ಗುಣಪೂರ್ಣನಾದ ಸರ್ವೋತ್ತಮನಾದ ಶ್ರೀಮಹಾವಿಷ್ಣುವಿನಲ್ಲಿ ಪ್ರತಿಷ್ಠಿತನಾಗುತ್ತಾನೆ ಅಂದರೆ ಮುಕ್ತಿಯನ್ನು ಪಡೆಯುತ್ತಾನೆ.

**"ಯೋ ಹ ವಾ ಏತೇಮುಪನಿಷದಮೇವಂವೇದಾಪಹತ ಪಾಪ್ಮಾನಮಂತೇ ಸ್ವರ್ಗೇ ಲೋಕೇ ಜ್ಯೆಯೆ ಪ್ರತಿತಿಷ್ಠತಿ । ಜ್ಯೆಯೆ ಪ್ರತಿತಿಷ್ಠತಿ"** ಎಂದು ಉಪನಿಷತ್ತು ಕೊನೆಗೊಳ್ಳುವುದು.

ಶ್ರೀಮದಾಚಾರ್ಯರು **"ವೆದೈತಾಮೇವಮಖಿಲಂ ಯೋ ವಿಷ್ಣೋ ಪ್ರತಿಷ್ಠತಿ"** ಎನ್ನುವ ಬ್ರಹ್ಮಸಾರ ಗ್ರಂಥದಲ್ಲಿ ಕೊನೆಯ ವಾಕ್ಯಾಧಾರದಿಂದ ತಿಳಿಸುತ್ತಾರೆ.

**"ಯಶ್ಚಿದಾನಂದ ಸಚ್ಛಕ್ತಿ ಸಂಪೂರ್ಣ ಭಗವಾನ್ ಹರಿಃ ।**
**ನಮೋಸ್ತು ವಿಷ್ಣವೇ ತಸ್ಮೈ ಪ್ರೇಷ್ಠಾಯ ಪ್ರೇಯಸೇ ಮಮ ॥"**
**(ಶ್ರೀಮದಾಚಾರ್ಯರ ಭಾಷ್ಯ ಅಂತಿಮ ಶ್ಲೋಕ)**

**ಶ್ರೀ ರಾಘವೇಂದ್ರ ಗುರುರಾಜರ ಖಂಡಾರ್ಥ ಅಂತಿಮ ಶ್ಲೋಕ**

**ಅನಂತಗುಣಪೂರ್ಣಾಯ ದೋಷದೂರಾಯ ವಿಷ್ಣವೇ ।**
**ನಮಃ ಶ್ರೀಪ್ರಾಣನಾಥಾಯ ಭಕ್ತಾಭೀಷ್ಟಪ್ರದಾಯಿನೇ ॥**

* * * * *



॥ ಹರಿಃ ಓಂ ॥

# ಶ್ರೀಮತ್ಕಾಠಕೋಪನೊಷತ್‌ಭಾಷ್ಯಭಾವಂ

## ಭಾಷ್ಯ ಮಂಗಳಾಚರಣ ಶ್ಲೋಕ

**ನಮೋ ಭಗವತೇ ತಸ್ಮೈಸರ್ವತಃ ಪರಮಾಯತೇ ।**
**ಸರ್ವಪ್ರಾಣಿ ಹೃದಿಸ್ಥಾಯ ವಾಮನಾಯ ನಮೋ ನಮಃ ॥**

ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರು ವೇದಸಮ್ಮತವಾದ ಶ್ರೀಮನ್ನಾರಾಯಣನ ಅನಂತ ಗುಣಪೂರ್ಣತ್ವವನ್ನು ಸಯುಕ್ತಿಕವಾಗಿ ಪ್ರಮಾಣ ಪುಂಜಗಳಿಂದ ಈ ಉಪನಿಷತ್ತಿಗೆ ಭಾಷ್ಯವನ್ನು ರಚಿಸಿರುವುದನ್ನು ಗಮನಿಸಬೇಕು.

ಈ ಉಪನಿಷತ್ತು ಕೃಷ್ಣ ಯಜುರ್ವೇದ ಶಾಖೆಗೆ ಸೇರಿದಂತೆ ತಿಳಿದುಬರುವುದು. ಬ್ರಹ್ಮಾಂಡಪುರಾಣದಲ್ಲಿ ಈ ಉಪನಿಷತ್ತು ಕೃಷ್ಣ ಯಜುರ್ವೇದದಲ್ಲಿನ ಈಗ ಉಪಲಬ್ಧವಾಗಿ ೪೧ ಶಾಖೆಗಳಲ್ಲಿ ಒಂದಾಗಿದೆಂಬುದು ಸಮ್ಮತವಾಗಿದೆ. ಮುಕ್ತಿಕೋಪನಿಷತ್‌ನಲ್ಲಿ ತಿಳಿಸಿದಂತೆ ೧೦೦ ಉಪನಿಷತ್ತುಗಳು ಇವೆ ಎಂದು ಮತ್ತು ತೈತ್ತರೀಯ ಬ್ರಾಹ್ಮಣದಲ್ಲಿ ನಚಿಕೇತೋಪಾಖ್ಯಾನವು ಉಲ್ಲೇಖಿಸಲ್ಪಟ್ಟಿದೆ. ಆದ್ದರಿಂದ ಈ ಉಪನಿಷತ್ ಕೃಷ್ಣ ಯಜುರ್ವೇದ ಶಾಖೆಗೆ ಸೇರಿದೆ ಎಂದು ಖಚಿತವಾಗಿ ಹೇಳಬಹುದು.

**ಸೂತ್ರಾರ್ಥ ವಿವರಣೆ : ತ್ರಯಾಣಮೇವ** = ಪಿತೃಸೌಮನ ಸಸ್ವರ್ಗಾಗ್ನಿ ಮತ್ತೂ ಬ್ರಹ್ಮಜ್ಞಾನ ಪರವಾಗಿ ಮೂರು ವಿಷಯಗಳು.

ಬ್ರಹ್ಮಸೂತ್ರದಲ್ಲಿ ಉಕ್ತವಾದ **"ಓಂ ತ್ರಯಾಣಾಮೇವ ಚೈವಮುಪನ್ಯಾಸಃ ಪ್ರಶ್ನಶ್ಚ ಓಂ" (ಬ್ರಹ್ಮಸೂತ್ರ ೧–೪–೭)** ಉಪನ್ಯಾಸವಾಗಿದೆ. ಉತ್ತರ ರೂಪವಾಗಿ ವಿವರಿಸಲಾಗಿದೆಯಷ್ಟೇ ಎಂಬ ವಿರೋಧವನ್ನು ಪರಿಹರಿಸುತ್ತಾರೆ.

**ಭಾಷ್ಯ :** **ತ್ರಯಾಣಾಮೇವ ಪಿತೃಸಾಮನಸ್ಯ ಸ್ವರ್ಗಾಗ್ನಿ ಪರಮಾತ್ಮಾನಾಂ ಪಶ್ಯ ಉಪನ್ಯಾಸಶ್ಚ । ಅವಿಜ್ಞಾತ ಪ್ರಾರ್ಥನಂ ಚ ಪ್ರಶ್ನ ಇತ್ಯಧೀಯತೆ ಇತಿ ವಚನಾನ್ನ ವಿರೋಧಃ ॥**

**ಭಾಷ್ಯಾರ್ಥಸಾರ :** ಈ ಉಪನಿಷತ್ತಿನಲ್ಲಿ ನಚಿಕೇತನು ಯಮರಾಜನನ್ನು ಮೂರು ಪ್ರಶ್ನೆ ಕೇಳುತ್ತಾನೆ. ನನ್ನ ತಂದೆ ಸಿಟ್ಟಾಗಿ ಶಾಪಬಲದಿಂದ ಬಂದಿರುವೆ. ಆದರೆ ಯಮರಾಜನು ಮೂರು ವರಗಳನ್ನು ಕೇಳೆಂದಾಗ ನಚಿಕೇತನು ತನ್ನ ತಂದೆಯ ಕೋಪವು ಹೋಗಿ ಶಾಂತನಾಗಿ ನನ್ನನ್ನು ಸ್ವೀಕರಿಸಲು ಎಂದು. ಸ್ವರ್ಗಾಗ್ನಿ ವಿಷಯ ಮತ್ತು ಬ್ರಹ್ಮವಿದ್ಯಾ ವಿಷಯಕ ವಿಷಯ ಮಾಡಿದ್ದಾನೇ ಆಗಲಿ, ಅವ್ಯಕ್ತಾದಿ ಗತಿಗಳ ಪ್ರಸಕ್ತಿಯನ್ನು ಏಕೆ ಮಾಡದಿರುವುದು ? ಅಯುಕ್ತವು ಎನ್ನುವ ಆಕ್ಷೇಪವನ್ನು ನಿರಸನ ಮಾಡುತ್ತಾ ಬ್ರಹ್ಮವಿಷಯಕ ತಿಳಿಯದೇ ಇರುವ ಅರ್ಥ, ಹೇಳಿಸಿಕೊಳ್ಳುತ್ತದೆ. ಹೀಗೆ ಮಾಡುವ ಎದೆ ಎಂಬ ಪ್ರಮಾಣಾನುಸಾರ ವಿರೋಧವಿರುವುದಿಲ್ಲ.

ಈ ಕೃತಿಯಲ್ಲಿ ಪಿತೃಸೌಮನಸ್ಯ, ತಂದೆ ಶಾಂತ ಮನಸ್ವತೆ, ಸ್ವರ್ಗಾಗ್ನಿ ವಿಷಯ

ಮತ್ತು ಪರಬ್ರಹ್ಮನ ಕುರಿತು ಹೀಗೆ ಮೂರು ವಿಷಯಗಳನ್ನು ನಚಿಕೇತನ ಪ್ರಶ್ನೆಗೆ ಯಮರಾಜರಿಂದ ಉತ್ತರರೂಪವಾಗಿ ಉಪನ್ಯಾಸವಾಗಿದೆ. ಈ ಉಪನಿಷತ್ತಿನಲ್ಲಿ ಎರಡು ಅಧ್ಯಾಯಗಳಿಂದ ಕೂಡಿರುತ್ತೆ. ಒಂದೊಂದು ಅಧ್ಯಾಯದಿಂದ ಮೂರು ಮೂರು ವಲ್ಲಿಗಳಿರುತ್ತೆ. ಪ್ರಥಮ ವಲ್ಲಿಯ ೧೪ನೆಯ ಮಂತ್ರ **"ಅನಂತಲೋಕಾಪ್ತಿ ಮಥೋಪ್ರತಿಷ್ಠಾಂ"** ಎಂದು ಹೇಳಿದುದರಿಂದ ಅನಂತನ ಅನಂತಲೋಕಪ್ರಾಪ್ತಿಗೆ ಸಾಧನ ಮಾಧ್ಯಮವಾದ "ಸ್ವರ್ಗಾಗ್ನಿ" ವಿದ್ಯೆಯನ್ನು ಬೋಧಿಸುವ ಮುನ್ನ ವಿದ್ಯೆಯಲ್ಲಿ ಶ್ರದ್ಧಾ (ಆದರ) ಹುಟ್ಟಿಸಲು ಒಂದು ಆಖ್ಯಾಯಿಕಾ ರೂಪದಲ್ಲಿ ತಿಳಿಸಲ್ಪಟ್ಟಿದೆ.

ಯಮ ನಚಿಕೇತರ ಸಂವಾದ ರೂಪವಾದ ಈ ಉಪನಿಷತ್ತಿಗೆ ಯಮ ನಚೀಕೇತರೇ ಋಷಿಗಳು. ಉಪನಿಷತ್ ಪ್ರತಿಪಾದ್ಯ ಶ್ರೀ ವಾಮನರೂಪಿ ಶ್ರೀಹರಿಯೇ ದೇವತಾ ಮತ್ತು ಅಕ್ಷರ ಎಣಿಕೆಯಿಂದ ಛಂದಸ್ಸನ್ನು ತಿಳಿಯುವುದು. ಈ ಉಪನಿಷತ್ತಿನ ಪ್ರಥಮಾಧ್ಯಾಯದಲ್ಲಿ ೭೦ ಮಂತ್ರಗಳು ದ್ವಿತೀಯಾಧ್ಯಾಯದಲ್ಲಿ ೪೮ ಮಂತ್ರಗಳು ಒಟ್ಟು ೧೧೮ ಮಂತ್ರಗಳಿಂದ ಕೂಡಿರುತ್ತೆ.

ಪ್ರಾರಂಭದಲ್ಲಿ ಪೀಠಿಕಾ ರೂಪವಾಗಿ ನಚಿಕೇತನ ತಂದೆ ಉದ್ದಾಲಕನು ಸ್ವರ್ಗಾ ಕಾಮನೆಯಿಂದ ವಿಶ್ವಜಿತ್ ಎಂಬ ಯಜ್ಞವನ್ನು ಮಾಡುವವನಾಗಿ ತದಂಗವಾಗಿ ನಿಯಮದಂತೆ ತನ್ನದು ಎಂದೇನೇನು ಉಂಟೋ ಅವುಗಳನ್ನು ದಾನ ಮಾಡಬೇಕೆಂದು ಸರ್ವಸ್ವವನ್ನು ದಾನ ಮಾಡುತ್ತಾನೆ.

**"ಉಶನ್ ಹವೈ ವಾಜ ಶ್ರವಸಃ ಸರ್ವವೇದಸಂ ದದೌ।"**

ದಾನ ಮಾಡುವಾಗ ಬ್ರಾಹ್ಮಣರಿಗೆ ನಿರುಪಯೋಗವಾದ, ಜೀರ್ಣವಾದ ಹಸುಗಳನ್ನು ಕೊಡುವುದನ್ನು ಕಂಡ ಮಗನಾದ ನಚಿಕೇತನು ಈ ವಿಷಯದಲ್ಲಿ ಶ್ರದ್ಧೆ ಉಳ್ಳವನಾಗಿ ಇಂಥಾ ಕಳಪೆ ಪದಾರ್ಥಗಳ ದಾನದಿಂದ ಸ್ವರ್ಗಪ್ರಾಪ್ತಿ ಆಗುವುದರ ಬದಲಾಗಿ ನರಕಾದ್ಯನರ್ಥಕ್ಕೆ ಕಾರಣವಾಗುವ ತನ್ನ ತಂದೆಗೆ ಎಚ್ಚರ ಕೊಡುತ್ತಾನೆ. ಆದರೆ ಔದಾಸಿನ ಹೊಂದಿದ ತಂದೆಯನ್ನು ಕುರಿತು ತಾನೂ ಸರ್ವಸ್ವದಲ್ಲಿ ಸೇರಿದವನಾದ್ದರಿಂದ ಯಾರಿಗೆ ದಾನರೂಪವಾಗಿ ಕೊಡುತ್ತೀ ಎಂದು ಪ್ರಶ್ನಿಸುತ್ತಾನೆ. ಕುಪಿತನಾದ ತಂದೆ ನಿನ್ನನ್ನು ಯಮರಾಜನಿಗೆ ಕೊಡುತ್ತೇವೆಂದು ಹೇಳಿ "ಮೃತ್ಯವೇತ್ವಾದದಾನೀತಿ" ಅಂದರೆ "ಮ್ರಿಯಸ್ವ" ಎಂದು ಶಪಿಸುತ್ತಾನೆ.

ತಂದೆಯ ಶಾಪವನ್ನು ಸ್ವೀಕರಿಸಿ ಯಮಪುರಿಗೆ ನಚಿಕೇತನು ತೆರಳುತ್ತಾನೆ. ಆದರೆ ಯಮರಾಜರು ಕಾರ್ಯಾಂತರದಿಂದ ಮನೆಯಲ್ಲಿರುವುದಿಲ್ಲ. ಯಮಪತ್ನಿ ಶಾಮಲಾದೇವಿ ಬಂದ ಬ್ರಾಹ್ಮಣನನ್ನು ಆತಿಥ್ಯ ಸ್ವೀಕಾರ ಮಾಡಲು ಹೇಳುತ್ತಾಳೆ. ನಚಿಕೇತನು ಯಮರಾಜರು ಬರುವುದನ್ನು ನಿರೀಕ್ಷಿಸುತ್ತಾ ಮೂರು ದಿನಗಳು ಕಳೆಯುತ್ತಾನೆ. ಯಮರಾಜರು ಬಂದ ನಂತರ ಯಮಪತ್ನಿಯು ವೈಶ್ವಾನರನಂತೆ ಪ್ರಜ್ವಲಿಸುವ



ಬ್ರಾಹ್ಮಣನು ಅನ್ನ ನೀರನ್ನು ಸ್ವೀಕರಿಸದೇ ನಿಮ್ಮ ನಿರೀಕ್ಷೆಯಲ್ಲಿರುವುದನ್ನು ತಿಳಿಸಿ ಆತಿಥ್ಯವನ್ನು ಕೊಡುವಂತೆ ತಿಳಿಸುತ್ತಾಳೆ. ಯಮರಾಜರು ಮೂರು ದಿನಗಳು ಉಪವಾಸ ತನ್ನ ನಿರೀಕ್ಷೆಯಲ್ಲಿದ್ದ ಬ್ರಾಹ್ಮಣ ಬಾಲಕನಿಗೆ ಯೋಗ್ಯ ಆತಿಥ್ಯವನ್ನು ಕೊಟ್ಟು ಸಂತುಷ್ಟನಾಗಿ ಮೂರು ವರಗಳನ್ನು ಕೇಳುವಂತೆ ನಚಿಕೇತನಿಗೆ ಹೇಳುತ್ತಾನೆ. "ತಸ್ಮಾತ್ಪ್ರತಿತ್ರೀನ್ವರಾನ್ ವೃಣೀಷ್ವಂ" ಕುಪಿತನಾದ ತನ್ನ ತಂದೆ ಶಾಂತ ಮನಸ್ಕನಾಗುವಂತೆ ಪ್ರೀತಿಯಿಂದ ತನ್ನನ್ನು ಬರಮಾಡಿಕೊಳ್ಳುವಂತೆ ಮೊದಲನೇ ವರವನ್ನು ಬೇಡುತ್ತಾನೆ. ಸ್ವರ್ಗಾಗ್ನಿಸ್ವರೂಪವಾದ ವಿದ್ಯೆಯನ್ನು ಉಪದೇಶಿಸಲು ಎರಡನೆಯವರನ್ನಾಗಿ ಬೇಡುತ್ತಾನೆ. ತಥಾಸ್ತು ಎಂದು ಸ್ವರ್ಗಾಗ್ನಿಸ್ವರೂಪದ ನಿಜಾರ್ಥವನ್ನು ಇದರ ಜ್ಞಾನದಿಂದ ಸಿಗುವ ಹರಿಮಂದಿರವೇ ಫಲವೆಂದು ಹೇಳಿ ಉಪದೇಶಿಸುತ್ತಾನೆ. ಉಪದೇಶ ಪಡೆದ ನಚಿಕೇತನು ಯಮರಾಜರ ಪಾಠವನ್ನು ತಪ್ಪದೇ ಒಪ್ಪಿಸುತ್ತಾನೆ. ಪ್ರೀತರಾದ ಯಮರಾಜರು ಅಮೂಲ್ಯವಾದ ಕಂಠಾಭರಣವನ್ನೂ ಮತ್ತು ಇನ್ನು ಮುಂದೆ ಈ ಯಜ್ಞವನ್ನು ಜಗತ್ತಿನಲ್ಲಿ "ನಚಿಕೇತಾಗ್ನಿ" ಎಂದೇ ಪ್ರಸಿದ್ಧವಾಗಲೆಂದು ವರವನ್ನೂ ಕೊಡುತ್ತಾನೆ. "ತವೈವ ನಾಮ್ನಾ ಭವಿತಾಯ ಮಗ್ನಿಃ" ಭಗವಂತನು ದೇಹಾಂತರ್ಗತ ಜೀವನನ್ನು ಮತ್ತು ದೇಹ ಪತನಾ ನಂತರ ಮುಕ್ತ ಜೀವನವನ್ನು ನಿಯಮತತ್ವೇನ ಇರುತ್ತಾನೋ ಇಲ್ಲವೋ, ದೇಹಿಯಾದ ಜೀವನನ್ನು ನಿಯಮಿಸುವುದು ಸಿದ್ಧವಾದ ವಿಷಯವೇ. ಅಂತೆ ಮುಕ್ತರಾದ ಜೀವರುಗಳನ್ನು ನಿಯಮಿಸುತ್ತಾನೋ ಹೇಗೆ ? ಇಲ್ಲವೆಂದು ಅಜ್ಞರು, ಮುಕ್ತಿಯಲ್ಲಿಯೂ ನಿಯಾಮಕನಾಗಿರುತ್ತಾನೆಂದು ಜ್ಞಾನಿಗಳು ಅಭಿಪ್ರಾಯ. ಯಾವ ರೀತಿಯಿಂದ ನಿಯಮಿಸುತ್ತಾನೆಂಬುದನ್ನು ಶಿಷ್ಯನಾದ ತನಗೆ ಉಪದೇಶ ಮಾಡಿರೆಂದು ಮೂರನೆಯವರನ್ನು ನಚಿಕೇತನು ಕೇಳುತ್ತಾನೆ. ಇಂತಹ ಪರಮಶ್ರೇಷ್ಠವಾದ ಬ್ರಹ್ಮವಿದ್ಯೆಯನ್ನು ಓದಿಸಲು ಮೊದಲು ನಚಿಕೇತನಲ್ಲಿ ವಿದ್ಯಾರ್ಹತೆಯನ್ನು ಪಡೆದಿದ್ದಾನೋ ಹೇಗೆ ಎಂದು ಪರೀಕ್ಷಿಸಲು ಅನೇಕ ವಿಧವಾದ ಆಮಿಷಗಳನ್ನು ತೋರಿಸುತ್ತಾನೆ. ದೇವಾನುದೇವತೆಗಳು ಈ ವಿಷಯದಲ್ಲಿ ತಿಳಿದಿಲ್ಲವಾದ್ದರಿಂದ ಈ ವರವನ್ನು ಬಿಟ್ಟು ಅನ್ಯ ವರವನ್ನು ಕೇಳೆಂದು ನಾನಾ ರೀತಿಯ ಆಶೆಗಳನ್ನು ತೋರಿಸುತ್ತಾನೆ. ಆದರೆ ನಚಿಕೇತನು ಯಾವುದನ್ನೂ ಆಶಿಸದೆ, ಮುಕ್ತ ಜೀವ ನಿಯಾಮಕ ವಿದ್ಯೆಯನ್ನೆ ಉಪದೇಶಿಸಲು ಒತ್ತಾಯಿಸುತ್ತಾನೆ. ಪರೀಕ್ಷೆಯಲ್ಲಿ ಉತ್ತೀರ್ಣನಾದ ಶಿಷ್ಯನಿಗೆ ಬೋಧಿಸುತ್ತಾನೆ. ಪ್ರೇಯಸ್ಸು, ಶ್ರೇಯಸ್ಸು ಎರಡೂ ವಿರುದ್ಧ ಫಲದಾಯಕವು. ಪ್ರೇಯಸ್ಸು ಬಂಧಕ್ಕೆ ಕಾರಣ. ಶ್ರೇಯಸ್ಸು ಮೋಕ್ಷಕ್ಕೆ ಹೇತುವು. ಶ್ರೇಯಸ್ಸು ಅಪೇಕ್ಷಿಸುವವನು ವೈರಾಗ್ಯವು ದುಷ್ಕರವಾದರೂ ಪ್ರಯತ್ನದಿಂದ ಲಭ್ಯವು. ಜ್ಞಾನಿಗಳು ವಿಚಾರಪರರಾಗಿ ತಮಗಿಂತ ಉತ್ತಮ ಜ್ಞಾನಿಗಳಿಂದ ಉಪದೇಶ ಹೊಂದಿ ನಶ್ವರವಾದ ಈ ಭವ ಪಾಶದಿಂದ ಬಿಡಲ್ಪಟ್ಟವರಾಗಿ ಶಾಶ್ವತ ಸುಖರೂಪವಾದ ಮೋಕ್ಷವನ್ನು ಪಡೆಯುತ್ತಾರೆ. ಮುಕ್ತ ಜೀವ ನಿಯಾಮಕ ವಿದ್ಯೆಯು ಅತಿ ಗೋಪ್ಯವಾದದ್ದು. ಆದರೂ ಭಗವಂತನು ಮರಣಾನಂತರದಲ್ಲಿ ಮತ್ತು ಮುಕ್ತಿಯಲ್ಲಿಯೂ ಸರ್ವ ಜೀವ

ನಿಯಾಮಕನಾಗಿರುತ್ತಾನೆಂಬುದು ನಿಸ್ಸಂದೇಹವು. ಅವನು ಉತ್ತಮನು. ಜೀವರು ಅವನ ಅಧೀನರಾಗಿರುತ್ತಾರೆ. ಹೀಗೆ ಬ್ರಹ್ಮ ಜೀವ ಭೇದವನ್ನು ಸ್ಫುಟವಾಗಿ ತಿಳಿಸುತ್ತಾರೆ. ಭಗವಂತನು ಎಲ್ಲವನ್ನೂ ತಿಳಿದಿರುತ್ತಾನೆ. ಕಾರಣ ಅಣೋರಣೀಯನು ಮಹತ್ತಾದವನು. ಆದರೆ ಅವನನ್ನು ಯಾರೂ ಸಂಪೂರ್ಣವಾಗಿ ತಿಳಿಯಲು ಆಗಿಲ್ಲ. ಸಕಲ ಶರೀರಗಳ ಮಧ್ಯದಲ್ಲಿ ಅಂಗುಷ್ಠ ಪ್ರಮಾಣದಿಂದಿರುವನು. ಭಗವಂತನೇ ಜೀವನು ಎಂಬುದು ಸರ್ವಥಾ ಅಲ್ಲ. ಮುಖ್ಯಪ್ರಾಣನು ಇರಬಹುದೋ ಎಂಬ ಶಂಕಾ ಪರಿಹಾರ ಮಾಡಲು ಪ್ರಾಣಾದಿಗಳ ಪ್ರೇರಕನು ಮುಖ್ಯಪ್ರಾಣಾಂತರ್ಗತ ಈಶನ ಶಬ್ದಕ ವಾಮನಾಖ್ಯ ಶ್ರೀಹರಿಯೇ ಎಂದು ವಾಮನ ಶೃತಿಯಿಂದ ಸ್ಪಷ್ಟಪಡಿಸುತ್ತಾರೆ.

**ಊರ್ಧ್ವಂ ಪ್ರಾಣಮುನ್ನಯತ್ಯಪಾನಂ ಪ್ರತ್ಯಗಸ್ಯತಿ ।**
**ಮಧ್ಯೇವಾಮನಮಾಸೀನಂ ವಿಶ್ವೇದೇವಾ ಉಪಾಸತೆ ॥ (೨.೨.೩)**

ನಿತ್ಯವಾದವುಗಳಲ್ಲಿ ಪರಮನಿತ್ಯನು. ಚೇತನಗಳಲ್ಲಿ ಪರಮ ಚೇತನನೂ ಆದ ಭಗವಂತನು ಒಬ್ಬನೇ ಎಲ್ಲರ ಹೃದಯದಲ್ಲಿದ್ದಾನೆಂದು ಉಪಾಸನಾ ಮಾಡುವ ಜ್ಞಾನಿಗಳಿಗೆ ಶಾಶ್ವತವಾದ ಸುಖಾನುಭವವು ಲಭಿಸುವುದು. ಕೊನೆಯಲ್ಲಿ ಭಗವನ್ಮಹಿಮಾ ವರ್ಣನೆ ಮಾಡುತ್ತಾ ಅಂತಹ ಸರ್ವಸ್ವಾಮಿಯ ಲೋಕದಲ್ಲಿ ಈ ಸೂರ್ಯಚಂದ್ರ ತಾರೆಗಳ ಪ್ರಕಾಶವಿರುವುದಿಲ್ಲ. ಸ್ವಪ್ರಕಾಶನಾದ ಶ್ರೀಹರಿಯ ಪ್ರಕಾಶದಿಂದಲೇ ಜಗತ್ತು ಬೆಳಗುತ್ತದೆ. ಅಂತಹ ಪರಮಾತ್ಮನನ್ನು ಯಾರೂ ಸಂಪೂರ್ಣವಾಗಿ ತಿಳಿದಿಲ್ಲ. ಪರಮಾತ್ಮನು ಪುರುಷ ಶರೀರ ಹೃದಯದಲ್ಲಿ ಸರ್ವದಾ ಸುಖ ಸ್ವರೂಪನಾಗಿ ಜೀವ ಪ್ರೇರಕನಾಗಿರುತ್ತಾನೆಂದು ಧ್ಯಾನಿಸಬೇಕು.

ಇಲ್ಲಿಯವರೆಗೆ ಯಮರಾಜರು ನಚಿಕೇತನನ್ನು ಉದ್ದೇಶ ಮಾಡಿ ಬ್ರಹ್ಮೋಪದೇಶ ಮಾಡಿದರು. ಇದರಂತೆ ಜ್ಞಾನಿಗಳು ಅನುಷ್ಠಾನಕ್ಕೆ ತಂದು ಸರ್ವಪಾಪಗಳಿಂದ ದೂರರಾಗಿ ಶ್ರೀಹರಿಯನ್ನು ಹೊಂದುವರು. ಇದು ಸುನಿಶ್ಚಯವು.

ಇಂತಹ ಉತ್ತಮವಾದ ಉಪನಿಷತ್ತಿಗೆ ಭಾಷ್ಯವನ್ನು ಬರೆದು ಉಪಸಂಹಾರ ಮಾಡುತ್ತಾ ಮತ್ತೊಮ್ಮೆ ಪರಮಾತ್ಮನಿಗೆ ನಮಃಪೂರ್ವಕ ಮಂಗಳವನ್ನು ಮಾಡುತ್ತಾರೆ.

**ನಮೋ ಭಗವತೇ ತಸ್ಮೈ ವಿಷ್ಣವೇ ಪ್ರಭವಿಷ್ಣವೇ**
**ಯಸ್ಮಾಃ ಮಾಪ್ತ ಆಪ್ತೇಭ್ಯೋ ಯೋಮೇ ಆಪ್ತತಮಸ್ಸದಾ ॥**

ಇತಿ ಕಾಠಕೋಪನಿಷತ್‌ಭಾಷ್ಯಭಾವಂ ಸಂಪೂರ್ಣಂ

ಕಾಠಕೋಪನಿಷತ್ತಿಗೆ ವಿಶದವಾದ ಅನುವಾದ ಗ್ರಂಥವು ನನ್ನಿಂದ ಬರೆಯಲ್ಪಟ್ಟಿದೆ. ಹೆಚ್ಚಿನ ವಿವರ ಅಲ್ಲಿ ಕಾಣಬಹುದು.

* * * * *



॥ ಹರಿಃ ಓಂ ॥

# ಶ್ರೀಷಟ್ಪ್ರಶ್ನೋಪನಿಷತ್‌ಭಾಷ್ಯಭಾವಂ

ಅಥರ್ವಣ ಶಾಖೆಯ ಬ್ರಾಹ್ಮಣಕ್ಕೆ ಸೇರಿದ ಈ ಉಪನಿಷತ್ತು ಜೀವರಿಗೆ ತತ್ತ್ವಜ್ಞಾನದಿಂದ ಉದ್ಧರಿಸಲು ಪ್ರಸಕ್ತವಾಗಿದೆ. ಈ ಉಪನಿಷತ್ತಿಗೆ ಪಿಪ್ಪಲಾದಾದಿ ಆರು ಜನರೇ ಋಷಿಗಳು. ಶ್ರೀವಾಸುದೇವರೂಪಿ ನಾರಾಯಣನೇ ದೇವತಾ ಅಕ್ಷರಗಣನೆಯಿಂದ ಛಂದಸ್ಸನ್ನು ತಿಳಿಯುವುದು. ಇಲ್ಲಿ ಬ್ರಹ್ಮವಿದ್ಯಾ ಬೋಧನೆಯು ಶ್ರೋತೃಗಳಲ್ಲಿ ಶ್ರದ್ಧಾ ಉತ್ಪನ್ನವಾಗಲು ಒಂದು ಕಥೆಯ ಮಾಧ್ಯಮದಿಂದ ತಿಳಿಸುತ್ತದೆ. ಅತಿ ಶ್ರದ್ಧೆ ಇದ್ದವರಿಗೇನೇ ತತ್ತ್ವಜ್ಞಾನವು ಲಭಿಸುತ್ತದೆ. "ಶ್ರದ್ಧಾವಾನ್ ಲಭತೇ ಜ್ಞಾನಂ" ಎಂಬ ಗೀತೋಕ್ತಿಯಂತೆ ಭಾರದ್ವಾಜಾದಿಗಳು ಗುರು ಶುಶ್ರೂಷಾ ಬ್ರಹ್ಮಚರ್ಯಾದಿ ವ್ರತಗಳಿಂದ ಜ್ಞಾನಸಂಪನ್ನರಾದರೆಂಬುದನ್ನು ಈ ವಿದ್ಯೆಯಲ್ಲಿ ಆದರ ಜನಿಸಲು ಪ್ರವರ್ತಿತವಾಗಿದೆ. ಆಚಾರ್ಯ ಶ್ರೀಮಧ್ವರು ಈ ಉಪನಿಷತ್ತಿಗೆ ಭಾಷ್ಯ ರಚಿಸಲು ಪೂರ್ವದಲ್ಲಿ ಶ್ರೀಹರಿಯ ಸ್ತೋತ್ರರೂಪ ಮಂಗಳಶ್ಲೋಕ ನಿಬಂಧಿಸಿರುತ್ತಾರೆ.

**ಓಂ ನಮೋ ಭಗವತೇ ತಸ್ಮೈ ಪ್ರಾಣಾದಿ ಪ್ರಭವಿಷ್ಣವೇ ।**
**ಅಮಂದಾನಂದ ಸಾಂದ್ರಾಯ ವಾಸುದೇವಾಯ ವೇಧಸೇ ॥**

ಮುಖ್ಯಪ್ರಾಣಾದಿ ದೇವತೆಗಳ ಜನಕನಾದ (ಸೃಷ್ಟಿಕರ್ತನಾದ) ಅಪರಿಮಿತ ಆನಂದಪೂರ್ಣನಾದ, ಸರ್ವಜ್ಞನಾದ ಶಾಸ್ತ್ರಾದಿಗಳಿಂದಲೇ ತಿಳಿಯಲ್ಪಡುವ ಷಡ್ಗುಣೈಶ್ವರ ಸಂಪನ್ನನಾದ ವಾಸುದೇವರೂಪ ಶ್ರೀನಾರಾಯಣನಿಗೆ ನಮಸ್ಕಾರವು (ಇರಲಿ).

ಉಪ : **ಸುಕೇಶಾ ಚ ಭಾರದ್ವಾಜಃ ಶೈಬ್ಯಶ್ಚ**
**ಸತ್ಯಕಾಮಃ ಸೌರ್ಯಾಯಣಿ ಚಗಾರ್ಗ್ಯಃ**
**ಕೌಸಲ್ಯಶ್ಚಾಽಶ್ವಲಯಾನೋ ಭಾರ್ಗವೋ**
**ವೈದರ್ಭಿಃ ಕಬಂಧಿ ಕಾತ್ಯಾಯನಃ ।**
**ತೇಹೈತೆ ಬ್ರಹ್ಮಪರಾಬ್ರಹ್ಮನಿಷ್ಠಾಃ ಪರಂಬ್ರಹ್ಮಾ**
**ನ್ವೇಷಮಾಣಾಃ ಏಷಹವೈತತ್ಸರ್ವಂ ವಕ್ಷ್ಯತೀತಿ**
**ತೇಹಸಮಿತ್ಪಾಣಯಃ ಭಗವಂತಂ ಪಿಪ್ಪಲಾದಮುಪಸನ್ನಾಃ ॥**

ಭಾರದ್ವಾಜರ ಪುತ್ರನಾದ ಸುಕೇಶನು, ಶಿಬಿ ಪುತ್ರನಾದ ಸತ್ಯಕಾಮನು, ಸೂರ್ಯಪುತ್ರನಾದ ಗಾರ್ಗ್ಯನು, ಅಶ್ವಲಾಯನ ಮಗನಾದ ಕೌಸಲ್ಯನು, ಭಾರ್ಗವ ಮಗನಾದ ವೈದರ್ಭಿಯು, ಕಶ್ಯಪನ ಪುತ್ರನಾದ ಕಬಂಧೀಯು ಈ ಆರು ಋಷಿಕುಮಾರರು ಬ್ರಹ್ಮವಿದ್ಯೆಯಲ್ಲಿ ಆಸಕ್ತರು ಮತ್ತು ಶಾಸ್ತ್ರೋಕ್ತ ಕರ್ಮ ಆಚರಣೆಯುಳ್ಳವರು. ಸರ್ವೋತ್ತಮನಾದ ಪರಮಾತ್ಮನ ವಿಷಯಕ ಜ್ಞಾನ ಪಡೆಯುವ ಉದ್ದೇಶದಿಂದ ಜ್ಞಾನಿಶ್ರೇಷ್ಠರು ಪ್ರಸಿದ್ಧರಾದ ಪಿಪ್ಪಲಾದ ಋಷಿಗಳನ್ನು ಭಕ್ತಿಶ್ರದ್ಧೆಯಿಂದ ಕೃತಾಂಜಲಿಪುಟರಾಗಿ ಉಪದೇಶ ಮಾಡಿರೆಂದು ಬಂದರು. ಈ ಮಹಾಜ್ಞಾನಿಗಳು ತಮ್ಮತಮ್ಮಲ್ಲಿ ಇರುವ ಸಂದೇಹಗಳನ್ನು ಪರಿಹರಿಸಿ ಯಥಾರ್ಥ ಜ್ಞಾನಪ್ರದರೆಂದು

ದೃಢ ವಿಶ್ವಾಸರಿಂದ ಬಂದು ಪ್ರಶ್ನೆ ಮಾಡುತ್ತಾರೆ. ಹೀಗೆ ತತ್ತ್ವಜ್ಞಾನ ಹೊಂದಲು ಬಂದ ಮುನಿಕುಮಾರರನ್ನು "ಹೇ ಮುನಿಕುಮಾರರೇ, ನೀವು ತಪೋನಿಷ್ಠರಾಗಿ ಜ್ಞಾನಯುಕ್ತರಾಗಿದ್ದರೂ ಸಹ ತತ್ತ್ವೋಪದೇಷ ಪಡೆಯಲು ಹೆಚ್ಚಿನ ಬ್ರಹ್ಮಚರ್ಯಾದಿ ವ್ರತಗಳನ್ನು ಆಚರಿಸುತ್ತಾ ಒಂದು ವರ್ಷ ಪರ್ಯಂತ ಗುರು ಶುಶ್ರೂಷಾ ಮಾಡುತ್ತಾ ನಮ್ಮಲ್ಲಿ ಇರಬೇಕು. ಈ ಪರೀಕ್ಷೆಯಲ್ಲಿ ಉತ್ತೀರ್ಣರಾದ ನಿಮಗೆ ಎಲ್ಲಾ ಪ್ರಶ್ನೆಗಳಿಗೆ ನನಗೆ ಎಷ್ಟು ತಿಳಿದಿದೆಯೋ ವಂಚನೆಯಿಲ್ಲದೆ ಉಪದೇಶ ಮಾಡುತ್ತೇನೆ" ಎಂದು ಹೇಳಿದರು. ಗುರು ಆಜ್ಞಾನುಸಾರ ಒಂದು ವರ್ಷ ವ್ರತ ನಿಷ್ಣಾತರಾದ ಶಿಷ್ಯರನ್ನು ಕರೆದು ನಿಮ್ಮ ಪ್ರಶ್ನೆಗಳನ್ನು ತಿಳಿಸಿರಿ ಎಂದು ಹೇಳಿದರು. ಆಗ್ಗೆ ಮೊದಲು ಕಬಂಧಿಯು ಪ್ರಶ್ನೆ ಮಾಡುತ್ತಾನೆ.

**ಅಥ ಕಬಂಧೀ ಕಾತ್ಯಾಯನ ಉಪೇತ್ಯ ಪಪ್ರಚ್ಛ ।**
**ಭಗವನ್ ಕುತೋ ಹವಾ ಇಮಾಃ ಪ್ರಜಾಃ ಪ್ರಜಾಯಂತ ಇತಿ ॥**

ಕಾತ್ಯಾಯನನ ಮಗನಾದ ಕಬಂಧೀ ಆರು ಜನರ ಹೆಸರುಗಳನ್ನು ತಿಳಿಸುವಾಗ ಇವನನ್ನು ಕೊನೆಯವನನ್ನಾಗಿ ತಿಳಿಸಲಾಯಿತು. ಆದರೆ ಇವನೇ ಮೊದಲು ಪ್ರಶ್ನಿಸಿದುದಕ್ಕೆ ಆಚಾರ್ಯ ಶ್ರೀಮಧ್ವರ ಸಮಾಧಾನ ಹೀಗಿರುತ್ತೆ. ಕಬಂಧಿಯ ಪ್ರಶ್ನೆ ಪ್ರಜಾಲುತ್ಪತ್ತಿಗೆ ಕಾರಣಕ್ಕೆ ಸಂಬಂಧಿಸಿದ್ದು ಮತ್ತು ಉತ್ಪತ್ತಿಯಾದ ನಂತರವೇ ಪಾಲನ ರಕ್ಷಣಾದಿಗಳು. ಆ ವಿಷಯಗಳ ಪೂರ್ವದಲ್ಲಿ ಕಬಂಧೀ ಪ್ರಶ್ನೆ ಯುಕ್ತವೇ ಆಗಿರುತ್ತೆ.

"**ಪ್ರಜಾತಾವೋಹ ವೈ ಪ್ರಜಾಪತಿಃ ॥**" ಉಪ

**ಭಾಷ್ಯ : "ಪ್ರಜಾನಾಂ ಪಾಲನಾದ್ವಿಷ್ಣುಃ ಪ್ರಜಾಪತಿ ರೀರೀರಿತಃ"**

ಪ್ರಜಾಪತಿ ಎಂದಾಕ್ಷಣ ಬ್ರಹ್ಮದೇವರೆಂಬುದು ಮೇಲೆ ಅರ್ಥವಾಗುವುದು. ಅದಕ್ಕೇನೇ ಶ್ರೀಮದಾಚಾರ್ಯರು "**ಪ್ರಜಾನಾಂ ಪಾಲನಾದ್ವಿಷ್ಣುಃ**" ಎಂದು ಬ್ರಹ್ಮಾದಿ ಸಕಲರನ್ನು ಸೃಷ್ಟಿ ಸ್ಥಿತಿ ಮಾಡುವಿದರಿಂದ ಶ್ರೀಹರಿಯೇ ಪ್ರಜಾಪತಿ ಎನಿಸಿದ್ದಾನೆ ಎಂದು ತಿಳಿಸುತ್ತಾರೆ. ಪರಮಾತ್ಮನು ಮುಖ್ಯಪ್ರಾಣ ಭಾರತೀದೇವಿಯರನ್ನು ಸೃಜಿಸಿ ತನ್ಮೂಲಕ ಇತರೇ ಪ್ರಾಣಿಗಳ ಸೃಷ್ಟಿ ಮಾಡಿದನು. ಅಲ್ಲದೇ ಸೂರ್ಯಚಂದ್ರರಲ್ಲಿಯೂ ಸನ್ನಿಹಿತನಾದ ಹರಿಯೇ ಸೃಷ್ಟಿಕರ್ತ. ಸೂರ್ಯಚಂದ್ರಾದಿಗಳಲ್ಲಿ ಪ್ರಕಾಶವು ಮುಖ್ಯಪ್ರಾಣರ ಮೂಲಕ ದಶ ದಿಕ್ಕುಗಳಲ್ಲಿ ಪ್ರಸರಿಸುವಂತೆ ಮಾಡುತ್ತಾನೆ. ಕಾಲನಾಮಕ ಪರಮಾತ್ಮನು ಮುಖ್ಯಪ್ರಾಣರಲ್ಲಿ ಅಧೀಷ್ಠಿತನಾಗಿ ಕಾಲ ಬದಲಾವಣೆಗೆ ಕಾರಣನಾಗುತ್ತಾನೆ. ಪಕ್ಷ, ವರ್ಷ, ಮಾಸ, ದಿನ, ರಾತ್ರಿಗಳು ಹೀಗೆ ಜಗದ್ವ್ಯಾಪಾರವು ನಡೆಯುವುದು. ಮುಖ್ಯಪ್ರಾಣಾಂತರ್ಯಾಮಿಯಾದ ಶ್ರೀಹರಿಯೇ ಎಂದು ಮೊದಲನೇ ಪ್ರಶ್ನೆಗೆ ಉತ್ತರಿಸುತ್ತಾರೆ.

ನಂತರ ಭೃಗುವಿನ ಮಗನಾದ **ವೈದರ್ಭಿಯು "ಭಗವನ್ ಕತ್ಯೆವದೇವಾಃ ಪ್ರಜಾ ವಿಧಾರಯಂತೇ । ಕರತ ಏತತ್ ಪ್ರಕಾಶಯಂತೇ ಕಃ ಪುನರೇಷಾಂ ವರಿಷ್ಠ ಇತಿ ॥**" ಎಂಬ ಎರಡನೆಯ ಪ್ರಶ್ನೆ ಮಾಡುತ್ತಾನೆ.



ಸ್ವಾಮಿ, ಪ್ರಾಣಿಗಳನ್ನು ಯಾರು ಯಾರು ಪಾಲನೆ ಮಾಡುತ್ತಾರೆ ? ವಿಷಯಗಳ ಸಂಬಂಧ ಜ್ಞಾನವು ಯಾರಿಂದ ಆಗುವುದು. ಅವರು ಯಾರ ನಿಯಮನದಲ್ಲಿರುತ್ತಾರೆ. ಇಷ್ಟೊಂದು ತತ್ತ್ವ ಇಂದ್ರಿಯಾಭಿಮಾನಿ ದೇವತೆಗಳಲ್ಲಿ ಯಾರು ಶ್ರೇಷ್ಠರು. ಆ ಉತ್ತಮತ್ವವು ಹೇಗೆ ಬಂದಿತು.

ಪಂಚಭೂತಗಳು, ಮನಸ್ಸು ಇತ್ಯಾದಿ ತತ್ವಾಭಿಮಾನಿ ದೇವತೆಗಳಿಗೆ ಮುಖ್ಯಪ್ರಾಣನೇ ಮುಖ್ಯಸ್ಥಿತಿ ಮತ್ತು ವಿಷಯಜ್ಞಾನದಾಯಕನು. ಜ್ಞಾನೇಂದ್ರಿಯಗಳಾದ ಕಣ್ಣು, ಕಿವಿ, ಮೂಗು, ನಾಲಗೆ ತ್ವಗೇಂದ್ರಿಯ ಅಭಿಮಾನಿ ದೇವತೆಗಳು ವಿಷಯಜ್ಞಾನಪ್ರದರು. ಇತರೇ ಐದು ಕರ್ಮೇಂದ್ರಿಯಗಳು ಅಭಿಮಾನಿ ದೇವತೆಗಳು ಸ್ಥಿತಿಕರ್ತರು. ಆದರೆ ತಾವು ಮುಖ್ಯಪ್ರಾಣರಿಂದ ಪ್ರೇರಿತರಾಗಿ ತನ್ನಿಯಾಮಕತ್ವದಿಂದ ತಮ್ಮ ತಮ್ಮ ಕಾರ್ಯವನ್ನು ಮಾಡುತ್ತೇನೆಂಬುದನ್ನು ಮರೆತು ಅಜ್ಞಾನವಶರಾಗಿ, ಅಹಂಕಾರಯುಕ್ತರಾಗಿ, ಪ್ರಾಣಿಗಳ ಶರೀರ ಧಾರಣೆಗೆ ತಾವೇ ಮುಖ್ಯವೆಂದು ತಿಳಿದರು. ಪರಸ್ಪರ ವಿವಾದಗ್ರಸ್ಥರಾದರು. ಈ ರೀತಿ ವಾದಿಸುತ್ತಿರುವ ಅಭಿಮಾನಿ ದೇವತೆಗಳನ್ನೂ ಕುರಿತು ಪ್ರಾಣದೇವರು "ಶರೀರಗಳಲ್ಲಿ ತಾವೇ ಪ್ರಾಣ ಪಂಚಕ ರೂಪದಿಂದ ಇದ್ದು ದೇಹ ಧಾರಣ ಜ್ಞಾನವನ್ನು ಕೊಡುತ್ತೇನೆ. ನೀವು ಭ್ರಮೆಯಿಂದ ವರ್ತಿಸಬೇಡಿರಿ" ಎಂದಾಗ ಪ್ರಾಣದೇವರ ವಚನದಲ್ಲಿ ನಂಬಿಕೆ ಹುಟ್ಟಲಿಲ್ಲ. ಅಹಂಕಾರ ಯುಕ್ತರಾಗೆ ಇದ್ದವರನ್ನು ಮುಖ್ಯಪ್ರಾಣನು ಅವರಲ್ಲಿ ವಿಶ್ವಾಸ ಹುಟ್ಟಿಸಲು ಶರೀರದಿಂದ ಉತ್ಕ್ರಮಣ ಮಾಡಿದನು. ತತ್ವಾಭಿಮಾನಿ ದೇವತೆಗಳು ದೇಹದಲ್ಲಿದ್ದರೂ ಶರೀರದ ವ್ಯಾಪಾರಗಳನ್ನು ಮಾಡಲು ಅಸಮರ್ಥರಾದರು. ಅಂದರೆ ಎಲ್ಲಾ ಇಂದ್ರಿಯಗಳು ನಿಶ್ಚೇಷ್ಟಿತವಾಯಿತು. ಕುರುಡ, ಕಿವುಡ, ಕುಂಟ, ಮೂಕ, ಬಧಿರನೆಂದೆನಿಸಿತೇ ಹೊರತು ಶರೀರ ಪತನವಾಗಲಿಲ್ಲ (ಮರಣಿಸಲಿಲ್ಲ). ಆಗ ದೇವತೆಗಳಿಗೆ ತಮ್ಮ ಅಜ್ಞಾನದ ಅರಿವು ಆಯಿತು. ಮುಖ್ಯಪ್ರಾಣನು ಶರೀರದಲ್ಲಿ ಪುನಃ ಪ್ರವೇಶಿಸಿದ ಕೂಡಲೇ ತತ್ವಾಭಿಮಾನಿ ದೇವತೆಗಳು ಇಂದ್ರಿಯ ವ್ಯಾಪಾರ ಧಾರಣ ಸಮರ್ಥರಾದರು. ಶ್ರೇಷ್ಠರಾದ ಮುಖ್ಯಪ್ರಾಣರನ್ನು ಸ್ತೋತ್ರ ಮಾಡಿದರು.

**೩ನೇ ಪ್ರಶ್ನೆ :** ಕೊಸಲ ದೇಶದ **ಆಶ್ವಲಾಯನ**ನು ಸ್ವಾಮಿ ಸಕಲ ಇಂದ್ರಿಯಾಭಿಮಾನಿ ದೇವತೆಗಳ ಧಾರಣಕರ್ತನಾದ ಮುಖ್ಯಪ್ರಾಣನಿಗೂ ಪ್ರೇರಕನಿದ್ದಾನೆಯೇ ? ಅವನು ಯಾರು ? ಉತ್ತರ : ಹೇ ಅಶ್ವಲಾಯನ. ಮುಖ್ಯ ಪ್ರಾಣನು ಭಗವಂತನಿಂದಲೇ ಉತ್ಪನ್ನನಾಗಿರುತ್ತಾನೆ ಮತ್ತು ಅವನ ಆಶ್ರಯ ನಿಯಾಮಕತ್ವದಲ್ಲಿರುತ್ತಾನೆ. ಪಂಚಪ್ರಾಣರು ಮುಖ್ಯಪ್ರಾಣರ ಪರಿವಾರ. ಇವರಿಗೆ ಶರೀರದ ವಿಭಿನ್ನ ಭಾಗಗಳಲ್ಲಿ ಇರಿಸಿ ಕಾರ್ಯಗಳನ್ನು ಮಾಡಿಸುವಂತೆ ಮಾಡಿರುತ್ತಾನೆ. ಮುಖ್ಯಪ್ರಾಣನು ಶರೀರದ ಒಳಗೂ ಹೊರಗೂ ವಿವಿಧ ರೂಪಗಳಿಂದ **ಜಗನ್ನಿಯಾಮಕ**ನಾಗಿರುತ್ತಾನೆ.

**೪ನೇ ಪ್ರಶ್ನೆ :** ಸೂರ್ಯಪುತ್ರನಾದ **ಗಾರ್ಗ್ಯ**ನು

ಸ್ವಾಮಿ : ಜಾಗೃತ, ಸ್ವಪ್ನ, ಶುಷುಪ್ತಾ ಈ ಮೂರು ಅವಸ್ಥೆಗಳಿವೆ. ಅದರಲ್ಲಿ ಸುಷುಪ್ತಾ

(ಗಾಢನಿದ್ರೆ) ಸಮಯದಲ್ಲಿ ಇಂದ್ರಿಯಾಭಿಮಾನಿ ದೇವತೆಗಳ ವ್ಯಾಪಾರವು ಯಾವ ರೀತಿ ಇರುತ್ತೆ ? ಸ್ವಪ್ನವನ್ನು ನೋಡಿಸುವ ದೇವತೆ ಯಾರು ? ಗಾಢನಿದ್ರೆಯಲ್ಲಿರುವಾಗ ಶರೀರಿಯಾದ ಜೀವನಿಗೆ ಸುಖಾನುಭವವು ಹೇಗೆ ಆಗುತ್ತೆ ? ಆಶ್ರಯದಾತನಾರು ? ಹೇ ಗಾರ್ಗ್ಯ, ಸ್ವಪ್ನಾ ಕಾಲದಲ್ಲಿ ಎಲ್ಲಾ ದೇವತೆಗಳು ಮನೋನಿಯಾಮಕರನ್ನು ಬಿಟ್ಟು ತಮ್ಮ ತಮ್ಮ ವ್ಯಾಪಾರವನ್ನು ಉಪಶಮಿಸುತ್ತಾರೆ. ಶುಷುಪ್ತಿಯಲ್ಲಿ ಮನೋನಿಯಾಮಕ ದೇವತೆಯೂ ತಮ್ಮ ವ್ಯಾಪಾರವನ್ನು ನಿಲ್ಲಿಸುತ್ತಾರೆ. ಆದರೆ ಸ್ವಪ್ನ ಶುಷುಪ್ತಾವಸ್ಥೆಗಳಲ್ಲಿ ಮುಖ್ಯಪ್ರಾಣನು ತನ್ನ ವ್ಯಾಪಾರವನ್ನು ಎಡಬಿಡದೆ, ಅವಿಶ್ರಾಂತವಾಗಿ ನಡೆಸುತ್ತಾನೆ. ಇದು ಒಂದು ಯಜ್ಞದಂತೆ ನಡೆದಿರುತ್ತೆ. ಇನ್ನು ಸ್ವಪ್ನದಲ್ಲಿ ಜೀವರುಗಳಿಗೆ ಅನೇಕ ಜನ್ಮಾಂತರದ ವಾಸನಾಮಯ ಸಂಸ್ಕಾರಗಳ ದರ್ಶನವನ್ನು ಸ್ವಪ್ನ ಮಾಧ್ಯಮದಿಂದ ಜೀವನು ಅನುಭವ ಪಡೆಯುತ್ತಾನೆ. ಪ್ರಾಜ್ಞನಾಮಕ ಭಗವಂತನು ಹೃದಯದಲ್ಲಿ ನೆಲೆಸಿದಾಗ ಬಾಹ್ಯ ಪ್ರಪಂಚದ ಅರಿವು ಇಲ್ಲದೆ ಸ್ವಾಭಾವಿಕವಾದ ಆನಂದಾನುಭವವು ಆಗುತ್ತದೆ. ಇದು ಒಂದು ರೀತಿಯ ಮೋಕ್ಷ ಸುಖಾನುಭವವು. ಈ ರೀತಿ ಈ ಎಲ್ಲಾ ಮೂರು ಅವಸ್ಥೆಗಳಲ್ಲಿ ಭಗವಂತನೇ ನಿಯಾಮಕನು ಆಧಾರನು.

**೫ನೇ ಪ್ರಶ್ನೆ :** ಸತ್ಯಕಾಮನು ಭಗವನ್.

ಪ್ರಣನಾಕ್ಷರದ ಪ್ರತಿಪಾದ್ಯ ಯಾರು ? ಪ್ರಣವೋಪಾಸನೆಯಿಂದ ಲಭಿಸುವ ಫಲಯಾವುದು ? ತ್ರಿವರ್ಣಾತ್ಮಕವಾದ ಅಕಾರ, ಉಕಾರ, ಮಕಾರವೆಂಬುದು ೩ ಅಕ್ಷರಗಳ ಅರ್ಥಾನುಸಂಧಾನ ಪೂರ್ವಕ ಉಪಾಸನೆ ಮಾಡಬೇಕು. ಅಂತಹ ಪುರುಷನು ಬ್ರಹ್ಮಸಾಕ್ಷಾತ್ಕಾರವನ್ನು ಪಡೆಯುತ್ತಾನೆ. ಪಾಪಗಳಿಂದ ನಿರ್ಮುಕ್ತನಾಗುತ್ತಾನೆ. ಸತ್ಯಲೋಕದಲ್ಲಿ ಬ್ರಹ್ಮದೇವರಿಂದ ಉಪದೇಶ ಪಡೆದು ಮುಕ್ತಿಯನ್ನು ಪಡೆಯುತ್ತಾನೆ. ಮೂರು ಅಕ್ಷರಗಳಲ್ಲಿ ಒಂದನ್ನು ಉಪಾಸನೆ ಮಾಡಿದರೆ ಯಾವ ಫಲವೂ ದೊರೆಯುವುದಿಲ್ಲ.

ಭಾಷ್ಯ : **"ಪ್ರಣವೇನ ಹರಿಂ ಧ್ಯಾಯನ್ ಬ್ರಹ್ಮಲೋಕಂ ಸಮೇತ್ಯಚ ।**
**ಜ್ಞಾನಂ ಚತುರ್ಮುಖಾತ್ಪ್ರಾಪ್ಯಮುಚ್ಯತೇ ನಾತ್ರ ಸಂಶಯಃ ॥"**

ಓಂಕಾರವು ಪರಮುಖ್ಯ ವೃತ್ತಿಯಿಂದ ಪರಮಾತ್ಮನನ್ನೇ ತಿಳಿಸುತ್ತದೆ. ಅಮುಖ್ಯವಾಗಿ ಚತುರ್ಮುಖ ಬ್ರಹ್ಮದೇವರನ್ನು ಭಗವಂತನ **ಅತೀಕೇನ** ತಿಳಿಸುತ್ತದೆ.

**೬ನೇ ಪ್ರಶ್ನೆ : ಸುಕೇಶಾ ಭಾರದ್ವಾಜ**ನು ಹೇಳುತ್ತಾನೆ. ಹೇ ಗುರುವರ್ಯಾ, ಒಮ್ಮೆ ಕೋಸಲ ದೇಶದ ಹಿರಣ್ಯನಾಭನೆಂಬ ರಾಜಕುಮಾರನು ನನ್ನಲ್ಲಿ ಬಂದು ಹೇ ವಿಪ್ರಶ್ರೇಷ್ಠ, ಒಬ್ಬ ಪುರುಷನು ಹದಿನಾರು ಕಲೆಗಳಿಂದ ಕೂಡಿದವನಿದ್ದಾನೆ. ಅವನು ಯಾರು ? ಆ ಹದಿನಾರು ಕಲೆಗಳು ಯಾವುದೆಂಬುದನ್ನು ತಿಳಿಸುವಿರಾ ? ರಾಜಪುತ್ರನ ಪ್ರಶ್ನೆಗೆ ನಾನು ಉತ್ತರಿಸಲಾಗಲಿಲ್ಲ. ಕಾರಣ ನಾನು ಆ ವಿಷಯದಲ್ಲಿ ಅಜ್ಞಾನವಿದ್ದಿತ್ತಾದ್ದರಿಂದ ಗುರುವರ್ಯ ಆ ವಿಷಯಕ ಜ್ಞಾನವನ್ನು ತಿಳಿಯಲು ಅಪೇಕ್ಷಿಸುತ್ತೇನೆ.



ಎಲ್ಯೆ ಭಾರದ್ವಾಜನೇ, ಹದಿನಾರು ಕಲೆಗಳಿಂದ ಯುಕ್ತವಾದ ಪುರುಷನು ಆ ಶ್ರೀಹರಿಯೇ, ಅವನೇ ಎಲ್ಲಾ ಪ್ರಾಣಿ ಶರೀರದೊಳಗಿದ್ದು ನಿಯಾಮಕನೂ ಆಗಿರುತ್ತಾನೆ. ಕಲ್ಪಾದಿಯಲ್ಲಿ ಭಕ್ತಿಜ್ಞಾನಗಳಿಂದ ಭಜಿಸಿದವನಾದ ಸಮರ್ಥನಾದ ನನ್ನ ಪ್ರೀತಿಪಾತ್ರನಾದ ಮುಖ್ಯಪ್ರಾಣನೆಂದೂ, ಜೀವಕಲಾಭಿಮಾನಿಯಾದವನೆಂದೂ ಅವನ್ನು ನಿಮಿತ್ತ ಮಾಡಿಕೊಂಡು ಜೀವರ ಆಸ್ತಿಕ್ಯ ಬುದ್ಧಿ ಅಭಿಮಾನಿ ಭಾರತೀದೇವಿಯನ್ನು ಸೃಷ್ಟಿಸಿದನು. ಇದೇ ರೀತಿ ಮನೋನಿಯಾಮಕರಾದ ಗರುಡ ಶೇಷ ರುದ್ರರನ್ನು ಮನ್ಮಥ ಅನಿರುದ್ಧರನ್ನೂ ಇಂದ್ರಿಯಾಭಿಮಾನಿಗಳಾದ ಇಂದ್ರ ಸೂರ್ಯಾದಿಗಳನ್ನು ಅನ್ನಾಭಿಮಾನಿ ಸೋಮ, ವೀರ್ಯಾಭಿಮಾನಿ ವರುಣ, ತಪೋಭಿಮಾನಿ ಅಗ್ನಿಯನ್ನೂ ಆಕಾಶಾಭಿಮಾನಿ ಗಣಪತಿಯನ್ನೂ ಮರುತ್ ಭೂತ ವಾಯು ಅಭಿಮಾನಿ ತೇಜಸ್ಸಭಿಮಾನಿ ಪಾವಕನನ್ನು ಗೋಳಕಾಭಿಮಾನಿ ಪರ್ಜನ್ಯ, ರುಗಾದ್ಯಭಿಮಾನಿ ಸ್ವಾಹಾದೇವಿ, ಜಲಾಭಿಮಾನಿಯಾದ ಬುಧ, ದೇವದತ್ತ, ನಾಮಾಭಿಮಾನಿ ಉಷಾದೇವಿ, ಪೃಥುವ್ಯಾಭಿಮಾನಿ ಶನೈಶ್ಚರನನ್ನೂ, ಕರ್ಮಾಭಿಮಾನಿ ಪುಷ್ಕರ, ಈ ರೀತಿಯಾಗಿ ಹದಿನಾರು ಕಲೆಗಳನ್ನು ತದಭಿಮಾನಿ ದೇವತೆಗಳನ್ನು ಸೃಷ್ಟಿಮಾಡಿದನು. ಇವರಲ್ಲಿ ಮೊದಮೊದಲು ಹೇಳಿದವರನ್ನು ನಿಮಿತ್ತಮಾಡಿಕೊಂಡು ಅನಂತರ ಹೇಳಿದವರನ್ನು ಸೃಜಿಸಿದನು. ಇವರು ಸಂಸಾರದಲ್ಲಿಯೂ ಮತ್ತೂ ಮುಕ್ತಿಯಲ್ಲಿ ಮೊದಲು ತಿಳಿಸಿದವರು ನಂತರ ತಿಳಿಸಿದವರಿಗಿಂತ ಉತ್ತಮರೆನಿಸುತ್ತಾರೆ. ಹೀಗೆ ಹದಿನಾರು ಕಲೆಗಳನ್ನು ಸೃಷ್ಟಿಸಿ ಅವುಗಳಿಂದ ಆಯಾ ಕಾರ್ಯಾದಿಗಳನ್ನು ಮಾಡಿಸುತ್ತಾ ಆ ಕಲೆಗಳೊಡನೆ ಪ್ರತಿ ದೇಹಾದಿಗಳಲ್ಲಿ ಸರ್ವೋತ್ತಮನಾದ ಪರಮಾತ್ಮನು ಇರುತ್ತಾನೆ. ಮೇಲೆ ತಿಳಿಸಿದ ಕಲೆಗಳು ತದಭಿಮಾನಿ ದೇವತೆಗಳಲ್ಲಿ ತಾರತಮ್ಯ ಭಾವವನ್ನು "ವಿಷ್ಣೋ ಪ್ರಾಣಃ ತತಃ ಶ್ರದ್ಧಾ" ಎಂದು ಭಾಷ್ಯದಲ್ಲಿ ತಿಳಿಸಲಾಗಿದೆ. ಅದೇ ಮೇಲೆ ವರ್ಣಿತವಾಗಿರುತ್ತೆ. ಈ ಉಪನಿಷತ್ತಿನ ಭಾಷ್ಯವನ್ನು ಉಪಸಂಹಾರ ಮಾಡಿ ಪುನಃ ಶ್ರೀಮದಾಚಾರ್ಯರು ಹರಿಸ್ತೋತ್ರ ರೂಪ ಮಂಗಳವನ್ನು ಮಾಡುತ್ತಾರೆ.

**ನಮೋನಮೋಸ್ತು ಹರಯೇ ಪ್ರಷ್ಟ ಪ್ರಷ್ಟ ತಮಾಯತೇ ।**
**ಪರಮಾನಂದ ಸಂದೋಹ ಸಾಂದ್ರಾನಂದ ವಪುಷೇ ॥**

ಇತಿ ಷಟ್ಪ್ರಶ್ನೋಪನಿಷತ್‌ಭಾಷ್ಯಭಾವಂ ಸಮಾಪ್ತಃ

* * * * *

॥ ಹರಿಃ ಓಂ ॥

# ಶ್ರೀಮಾಂಡೂಕೋಪನಿಷತ್‌ಭಾಷ್ಯಭಾವಂ

ಈ ಉಪನಿಷತ್ ಅಥರ್ವ ವೇದಕ್ಕೆ ಸೇರಿದೆ. ವರುಣನು ಮಂಡೂಕ (ಕಪ್ಪೆ) ರೂಪದಲ್ಲಿದ್ದು ಈ ಉಪನಿಷತ್ತಿಗೆ ಮಂತ್ರದ್ರಷ್ಟನಾಗಿ ಶ್ರೀಮನ್ನಾರಾಯಣನ ನಾಲ್ಕು ರೂಪಗಳಾದ ವಿಶ್ವ, ತೈಜಸ, ಪ್ರಾಜ್ಞ ಮತ್ತು ತುರ್ಯನನ್ನು ಸ್ತೋತ್ರ ಮಾಡುತ್ತಾನೆ. ಕಪ್ಪೆ ರೂಪದಿಂದ ಉಪದೇಶ ಹೊಂದಿದ್ದರಿಂದ ಈ ಉಪನಿಷತ್ತನ್ನು ಮಾಂಡೂಕೋಪನಿಷತ್ತು ಎಂದು ಕರೆಯಲ್ಪಟ್ಟಿದೆ.

ಕಪ್ಪೆ (ಮಂಡೂಕ) ರೂಪಿ ವರುಣನು ಈ ಉಪನಿಷತ್ತಿಗೆ ಋಷಿ. ಚತುರೂಪಗಳಿಂದ ಉಪದೇಶಿಸಿದ ನಾರಾಯಣನೇ ದೇವತ. ಅಕ್ಷರ ಗಣನೆಯಿಂದ ಛಂದಸ್ಸನ್ನು ತಿಳಿಯುವುದು. ಆಚಾರ್ಯರ ಭಾಷ್ಯದ ಆದಿಮಂಗಳ ಶ್ಲೋಕ

**''ಪೂರ್ಣಾನಂದ ಜ್ಞಾನಶಕ್ತಿಸ್ವರೂಪಂ ನಿತ್ಯಮವ್ಯಯಂ ।**
**ಚತುರ್ಧಾ ಸರ್ವಭೋಕ್ತಾರಂ ವಂದೇ ವಿಷ್ಣುಂ ಪರಂ ಪದಮಮ್ ॥''**

ಈ ಉಪನಿಷತ್ತಿನಲ್ಲಿ ನಾಲ್ಕು ಖಂಡಗಳಿಂದ ಯುಕ್ತವಾಗಿ ನಲವತ್ತು ಮಂತ್ರಗಳಿಂದ ಬ್ರಹ್ಮನ ವಿಶೇಷ ಮಹಿಮಾಪೂರ್ವಕ ತತ್ತ್ವಗಳನ್ನು ತಿಳಿಸುತ್ತದೆ. ಪರಿಪೂರ್ಣ ಆನಂದಭರಿತನು, ಸರ್ವಜ್ಞನು, ಸರ್ವಸಾಮರ್ಥ್ಯಗಳ ಸ್ವರೂಪಿಯಾದವನು, ನಿತ್ಯನು, ನಾಶರಹಿತನು, ಜ್ಞಾನಿಗಳಿಂದ ಪ್ರಾಪ್ಯನು ವಿಶ್ವ ತೈಜಸ, ಪ್ರಾಜ್ಞ, ತುರಿಯ, ಎಂಬ ನಾಲ್ಕು ರೂಪಗಳಿಂದ ಸರ್ವ ವಿಷಯುಗಳನ್ನು ಭೋಗಿಸುವವನೂ ಸರ್ವೋತ್ತಮನಾದ ಶ್ರೀಮಹಾವಿಷ್ಣುವನ್ನು ನಾನು ಸದಾ ವಂದಿಸುತ್ತೇನೆ.

ಇದರಿಂದ ಭಗವಂತನ ನಾಲ್ಕು ರೂಪಗಳಿಂದ ಶ್ರೀಹರಿಯು ವಿಷಯನು, ಅವನನ್ನು ಪಡೆಯುವುದೇ ಪ್ರಯೋಜನವು, ವೈರಾಗ್ಯಾದಿಗಳಿಂದ ಯೋಗ್ಯನಾದವನೇ ಅಧಿಕಾರಿ ಯಥಾಯೋಗ್ಯವಾಗಿ ಸಂಬಂಧವನ್ನು ಸೂಚಿಸಿರುತ್ತಾರೆ.

**''ಮಂಡೂಕರೂಪಿಣಾ ವರುಣೇನ**
**ಚತುರೂಪೊ ನಾರಾಯಣೋಽತ್ರಸ್ತೂಯತೆ ।**
**ಧ್ಯಾಯೆನ್ನಾರಾಯಣಂ ದೇವಂ ಪ್ರಣವೇನ ಸಮಾಹಿತಃ**
**ಮಂಡೂಕರೂಪಿ ವರಣಸ್ತುಷ್ಟಾವ ಹರಿಯವ್ಯಯಂ ॥'' – ಭಾಷ್ಯ**

ಎಂದು ಪದ್ಮಪುರಾಣದಲ್ಲಿ ತಿಳಿಸಿದೆ. ಓಂಕಾರವು ಎಲ್ಲಾ ವೇದಗಳ ಸಾರಾಂಶವಾಗಿ ವೇದಗಳ ಸಂಕುಚಿತರೂಪವಾಗಿರುತ್ತದೆ. ಪರಮಾತ್ಮನು ಅನಂತಾನಂತ ಗುಣಪೂರ್ಣನು, ತ್ರಿಕಾಲದಲ್ಲಿಯೂ ನಿತ್ಯನು, ನಾಶರಹಿತನು, ಅಕ್ಷರನಾಮಕನು ಎಂಬುದನ್ನು ಪ್ರತಿಪಾದಿಸುತ್ತಿದೆ. ಅವ್ಯಕ್ತ ತತ್ವರೂಪಶ್ರೀ ಅವನ ನಿಯಮವಿರುವುದು.



ಪ್ರಾಣಿಗಳ ನಾಲ್ಕು ಜಾಗ್ರತಾ, ಸ್ವಪ್ನ, ಸುಷುಪ್ತಾ ಹಾಗೂ ಮೋಕ್ಷ ಎಂಬುದಕ್ಕೆ ಅವನೇ ನಿಯಾಮಕನು. ಮೊದಲು ಮೂರು ಅವಸ್ಥೆಗಳ ಅನುಭವಾ ನಂತರ ವಿರಕ್ತನಾದವನು ಮುಕ್ತಿಯನ್ನು ಹೊಂದುತ್ತಾನೆ. ಈ ನಾಲ್ಕು ಅವಸ್ಥೆಗಳಿಗೆ ಶ್ರೀಹರಿಯೇ ನಿಯಾಮಕನು.

ವಿಶ್ವರೂಪದಿಂದ ಜಾಗೃತರಾದ ಜೀವರುಗಳಿಗೆ ಇಂದ್ರಿಯಗಳಲ್ಲಿ ಇದ್ದುಕೊಂಡು ಹೊರಗಿನ ಪದಾರ್ಥಗಳ ಜ್ಞಾನವನ್ನು ತಂದುಕೊಡುವನು. ಪದಾರ್ಥಗಳಲ್ಲಿ ಸನ್ನಿಹಿತನಾಗಿ ವಿಷಯ ಭೋಗಗಳನ್ನು ಅನುಭವಿಸುವಂತೆ ಮಾಡುತ್ತಾನೆ.

ತೇಜಸ್ಸ ಸ್ವರೂಪಿಯಾದ ಪರಮಾತ್ಮನು ಪ್ರಾಣಿಗಳಿಗೆ ಎಚ್ಚರದಲ್ಲಿ ಅನುಭವಿಸಿದ ವಸ್ತುಗಳ ಸಂಸ್ಕಾರ ಬಲದಿಂದ ಸ್ವಪ್ನ ಅವಸ್ಥೆಯಲ್ಲಿ ಸೂಕ್ಷ್ಮವಾಗಿ ಅನುಭವಿಸುವಂತೆ ಮಾಡುತ್ತಾನೆ. ಪ್ರಾಜ್ಞನಾಮಕ ಶ್ರೀಹರಿಯು ಗಾಢನಿದ್ರೆಯಲ್ಲಿ (ಸುಷುಪ್ತಿ) ಬಾಹ್ಯ ವಿಷಯಾನುಭವವಿಲ್ಲದೇ ಜೀವನಲ್ಲಿ ಅಡಗಿದ ಸ್ವಸ್ವರೂಪ ಆನಂದವನ್ನು ಅನುಭವಿಸುವಂತೆ ಮಾಡುತ್ತಾನೆ. ಹೃದಯಾಕಾಶದಲ್ಲಿ ಸನ್ನಿಹಿತನಾಗಿ ಆ ಸುಖವನ್ನು ಹೊಂದುವಂತೆ ಮಾಡುತ್ತಾನೆ. ಹೀಗೆ ಮೂರು ಅವಸ್ಥೆಗಳಲ್ಲಿ ಸರ್ವೇಶ್ವರನಾದ ಭಗವಂತನ ಮೂರು ರೂಪಗಳು ಚಿದಾನಂದಮಯ ಸ್ವರೂಪವೇ ಆಗಿರುತ್ತೆ.

ಜಗತ್‌ಸೃಷ್ಟಿಕಾರ್ಯವು ಸರ್ವಸಮರ್ಥನಾದ ಭಗವಂತನ ಇಚ್ಛೆಯಿಂದಲೇ ಯಥಾವತ್ತಾಗಿ ಆಯಿತೆಂದೂ, ಅಸತ್ಯವಲ್ಲವೆಂದೂ, ಅವನ ವಿಕೃತಿಯೂ ಅಲ್ಲವೆಂದೂ ತಿಳಿಸುತ್ತದೆ. ಪರಮಾತ್ಮನು ತನ್ನ ಸಂಕಲ್ಪಾನುಸಾರ ದಯಾಮಯನಾಗಿ ಜೀವರನ್ನು ಈ ಭವಪಾಶದಿಂದ ಮುಕ್ತರನ್ನಾಗಿ ಮಾಡಲು ಈ ವ್ಯಾಪಾರವು. ಅವನಿಗೆ ಇದರಿಂದ ಅಲಭ್ಯವಾದ ಯಾವ ಪ್ರಯೋಜನವೂ ಇರುವುದಿಲ್ಲ.

**''ದೇವಸ್ಯೈಷಃ ಸ್ವಭಾವೋಽಯಂ ಆಪ್ತಕಾಮಸ್ಯಕಾಸ್ಪೃಹಾ ॥**
**ಓಂ ಲೋಕವತ್ತು ಲೀಲಾ ಕೈವಲ್ಯಮ್ ಓಂ''** (ಬ್ರ.ಸೂ. ೨-೧-೩೪)
**''ಲೀಲಾಮಾತ್ರಂ ಪ್ರಭೋಃ ಸೃಷ್ಟಿಃ ಆಪ್ತಕಾಮಸ್ಯ ಕಾಸ್ಪೃಹಾ ॥** ಇತ್ಯಾದಿ

ಭಾಷ್ಯದಲ್ಲಿ **''ಅತೃಪ್ತಸ್ಯೈವಭೋಗಾರ್ಥಂ ಕ್ರೀಡಾರ್ಥಂ ತು ವಿಪಶ್ಚಿತಃ ।**
**ಸಾಚಾಕ್ರೀಡಾ ಸ್ವಭಾವೋಽಸ್ಯ ಕುತೋ ಅತೃಪ್ತ್ಯಾಸ್ಪೃಹಾ ವಿಭೋಃ ॥''**

ಎಂದು ಹರಿವಂಶದಲ್ಲಿನ ವಾಕ್ಯದಿಂದ ಪೂರ್ಣನಾದ ಶ್ರೀಹರಿಗೆ ಅತೃಪ್ತಿಯಿಂದ ಏನಾದರೂ ಬಯಕೆ ಇರುವುದು ಸಾಧ್ಯವಿಲ್ಲ. ನಿತ್ಯತೃಪ್ತನಾದ ಭಗವಂತನು ಲೀಲಾಜಾಲವಾಗಿ ಪರಪ್ರಯೋಜನಕ್ಕಾಗಿಯೇ ಸೃಷ್ಟಿಮಾಡುತ್ತಾನೆ.

ನಾಲ್ಕನೇ ಅವಸ್ಥೆ ಸುಷುಪ್ತಿಯು ಇದು ಮೇಲೆ ತಿಳಿಸಿದ ಮೂರು ಅವಸ್ಥೆಗಳಿಂದ ಭಿನ್ನವೇ ಆಗಿರುತ್ತೆ. ಪರಮಾತ್ಮನು ತನ್ನ ಸ್ವರೂಪ ಸುಖ ಅನುಭವಿಸುವಂತೆ ಮಾಡುವುದೇ ಮುಕ್ತಾವಸ್ಥೆಯು ಇಂತಹ ಸ್ವಾಮಿ ತುರ್ಯರೂಪಿ ಆಗಿ ಜೀವರುಗಳಿಗೆ

ಜ್ಞಾನ ಆನಂದ ನೀಡುತ್ತಾನೆ. ಗಾಢನಿದ್ರೆಯಲ್ಲಿ ಪರಮಾತ್ಮ ತನ್ನ ಸಮಾನ ಜ್ಞಾನ ಒಂದನ್ನು ಬಿಟ್ಟು ಇತರೇ ಬಾಹ್ಯ ಪದಾರ್ಥಗಳ ಜ್ಞಾನವಿರುವುದಿಲ್ಲ.

ಸುಷುಪ್ತಿಯಲ್ಲಿ ಅವಿದ್ಯಾರೂಪ ಬಂಧನ ಇರುತ್ತೆ. ಮುಕ್ತಿಯಲ್ಲಿ ಆ ರೀತಿ ಭ್ರಮೆಯೂ ಇರುವುದಿಲ್ಲ. ಈ ರೀತಿ ಮೇಲೆ ತಿಳಿಸಿದ ನಾಲ್ಕೂ ಅವಸ್ಥೆಗಳಲ್ಲಿ ಶ್ರೀಹರಿಯಿಂದಲೇ ಸಕಲ ವ್ಯಾಪಾರವು ನಡೆಯುವುದೆಂದು ತಿಳಿದು ಪ್ರಾಣಿಗಳು ಆ ಸ್ವಾಮಿಯ ಅಗಾಧ ಮಹಿಮೆಯನ್ನು ತಿಳಿಯಬೇಕು. ಈ ಕಾರಣದಿಂದ ಅನಾದಿ ಅವಿದ್ಯಾಬಂಧನಕ್ಕೆ ಸಿಲುಕಿದ ಜೀವನು ಶ್ರೀಪರಮಾತ್ಮನ ಅನುಗ್ರಹದಿಂದಲೇ ಯಥಾರ್ಥ ಜ್ಞಾನ ಪಡೆದ ನಂತರ ಎಲ್ಲಾ ರೀತಿಯ ಅನಿಷ್ಟಗಳಿಂದ ದೂರನಾಗಿ ಆ ಭಗವಂತನ ಅಪರೋಕ್ಷವನ್ನು ಪಡೆಯುತ್ತಾನೆ.

ಆದರೆ ಯಥಾರ್ಥ ವಿಷಯವನ್ನು ವಿಪರೀತವಾಗಿ ತಿಳಿಯುವುದು ಅನ್ಯಥಾ ಜ್ಞಾನಕ್ಕೆ ಕಾರಣವಾಗುವುದು. ಪರಮಾತ್ಮನ ಅನಾದಿ ಮಾಯಾ (ಇಚ್ಛೆಯಿಂದ) ಸಂಸಾರಿಯಾದ ಜೀವನು ಆ ಭಗವಂತನ ಅನುಗ್ರಹದಿಂದ ಗುರುಪದೇಶ ಪಡೆದು ಶ್ರವಣಾದಿಗಳಿಂದ ಜ್ಞಾನ ಪಡೆಯುತ್ತಾನೋ ಆಗ ಶ್ರೀಹರಿಯ ಪ್ರತ್ಯಕ್ಷಕ್ಕೆ ಯೋಗ್ಯನಾಗುತ್ತಾನೆ.

ಉಪ : **ಪ್ರಪಂಚೋ ಯದಿ ವಿದ್ಯೇತ ನಿವರ್ತತೇನಸಂಶಯಃ ।**
**ಮಾಯಾಮಾತ್ರಮಿದಂ ದ್ವೈತಮದ್ವೈತಂ ಪರಮಾರ್ಥತಃ ॥**

ಈ ಒಂದು ಮಂತ್ರಕ್ಕೆ ಅನೇಕ ವ್ಯಾಖ್ಯಾನಗಳು ಇದೆ. ಆದರೆ ಶ್ರೀಮದಾಚಾರ್ಯರು ಈ ವಾಕ್ಯಕ್ಕೆ ತಮ್ಮ ಭಾಷ್ಯದಲ್ಲಿ ಪರಿಹರಿಸಿರುತ್ತಾರೆ. ಮಂತ್ರವು ಮೇಲೆ ನೋಟಕ್ಕೆ ಅದ್ವೈತವೇ ಪರಮಾರ್ಥ ಎಂದು ತೋರುತ್ತದೆ. ಆದರೆ ಆ ಮಂತ್ರದ ನಿಜಾರ್ಥವನ್ನು ಆಚಾರ್ಯರು ತೋರಿಸಿಕೊಡುತ್ತಾರೆ. ಭಗವಂತನಿಗೆ ಅಜ್ಞಾನವೇ ಆಗಲಿ. ಬಂಧನವೇ ಆಗಲಿ ಇದೆ ಎಂದು ಅರ್ಥವಲ್ಲ. ಅದ್ವೈತವೆಂದರೆ ಪ್ರಾಜ್ಞರು ಸರಿಯಾಗಿ ಜಿಜ್ಞಾಸಾ ಮಾಡಿ ಸತ್ಯ ವಸ್ತುವನ್ನು ತಿಳಿಯುವುದು. ದ್ವೈತವೆಂದರೆ ವಸ್ತುವಿನ ಯಥಾರ್ಥ ಸ್ವರೂಪಗಿಂತಲೂ ಭಿನ್ನವೆಂದು ವಿಪರೀತವಾಗಿ ತಿಳಿಯುವುದು.

ಯಥಾವತ್ತಾಗಿ ವಸ್ತುವಿನ ಜ್ಞಾನವೇ ಅದ್ವೈತವೆಂದು ತಿಳಿಯುವುದು.

ಇನ್ನು ಮಾಯಾ ಎಂದರೆ ಶ್ರೀಶನು ಇಚ್ಛೆ ಸಂಕಲ್ಪ ಪರಮಾರ್ಥನಾದ ಸರ್ವೇಶ್ವರನಾದ ಅವನಿಂದಲೇ ಆಗಿದೆ. ಅಸ್ವಾಭಾವಿಕ ಈ ಸಂಸಾರ ಬಂಧನವು ಆ ಹರಿಯ ಅನುಗ್ರಹದಿಂದ ಹಾಗೂ ಗುರುಪದೇಶದಿಂದ ಬಂಧವು ನಾಶವಾಗುತ್ತದೆಂದು ಶ್ರೀಮದಾಚಾರ್ಯರು ಯಾವ ರೀತಿಯಿಂದಲೂ ವಿರೋಧವಿಲ್ಲದಂತೆ ಅರ್ಥ ಮಾಡಿ ತಿಳಿಸುತ್ತಾರೆ.



ಭಾಷ್ಯ : **ಅನನ್ಯಥಾ ಇತಂ ಅವಗತಂ ಅದ್ವೈತಂ ।**
**ದ್ವೈತಂ ವಸ್ತುಸ್ವರೂಪಾಪೇಕ್ಷಯಾ ದ್ವಿಧಾಹ್ಯ ನ್ಯಥಾಜ್ಞಾತಮಿತ್ಯರ್ಥಃ ॥**

ದ್ವಿ ಅನ್ನುವುದರೊಂದ ವಸ್ತುವನ್ನು ವಿಪರೀತವಾಗಿ ತಿಳಿಯುವುದು. ದ್ವಿತಾ ಅನ್ಯಥಾ ಜ್ಞಾನದ್ವಿತವೇ ದ್ವೈತವು. ಅದ್ವೈತವೆಂದರೆ ವಸ್ತುವಿನ ಯಥಾರ್ಥ ಜ್ಞಾನ ಸಂಪಾದನೆ ಎಂದು ಅರ್ಥ.

ಪ್ರಣವ ಮಂತ್ರದಲ್ಲಿ ಪ್ರತಿಪಾದ್ಯನಾದ ಶ್ರೀಹರಿಯ (ನಾರಾಯಣನ ಮೂಲರೂಪ) ನಂತರ ಅವನ ವಿಶ್ವಾದಿರೂಪಗಳು ಮೂಲರೂಪದಂತೆ ಅವತಾರ ರೂಪಗಳು ಪೂರ್ಣವೇ ಆಗಿರುತ್ತೆ. ಅವನು ನಿತ್ಯ ವ್ಯಾಪ್ತನು, ಸ್ವತಂತ್ರನು ಮತ್ತೂ ಅವ್ಯಯನು ಆಗಿರುತ್ತಾನೆ.

ಅವನೇ ಸೃಷ್ಟಿ ಲಯ ಕಾರಣನು ಸರ್ವಹೃದಯಾಂತರ್ಯಾಮಿ ಎಂದು ಉಪಾಸನೆಯನ್ನು ಪ್ರಣವ ಪ್ರತಿಪಾದ್ಯ **"ಓಂ"** ಎಂದು ತಿಳಿದವನು ಸರ್ವರೀತಿಯ ದುಃಖದಿಂದ ದೂರನಾಗಿ ಮುಕ್ತಿಯನ್ನು ಹೊಂದುತ್ತಾನೆ.

ಉಪನಿಷತ್ತಿಗೆ ಭಾಷ್ಯವನ್ನು ರಚಿಸಿ ಅಂತ್ಯದಲ್ಲಿ ಶ್ರೀಹರಿಗೆ ನಮಸ್ಕಾರರೂಪ ಮಂಗಳಶ್ಲೋಕ :

**"ಏಕೋಪಿ ನಿರ್ವಿಶೇಷೋಪಿ ಚತುರ್ಥಾವ್ಯವಹಾರಭಾಕ್ ।**
**ಯಸ್ತಂ ವಂದೇ ಚಿದಾತ್ಮಾನಂ ವಿಷ್ಣುಂ ವಿಶ್ವಾದಿರೂಪಿಣಂ ॥"**

ಇತಿ ಮಂಡೂಕೋಪನಿಷದ್ಭಾಷ್ಯಭಾವ ಸಂಪೂರ್ಣಂ
॥ ಹರಿಃ ಓಂ ॥

* * * * *